ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಅಕ್ಟೋಬರ್ 17, 2007 ರೂ.10/-





ಸ್ವಾಮಿಗ್ಯಾಕೆ ರಾಜಕೀಯ

ಲಿಂಗಾಯತರ ಕಿವಿಗೆ ಕಮಲ

ಯಡ್ಡಿಗೆ ಕೈಕೊಟ್ಟಿದ್ದು ಚೆಡ್ಡಿಗಳು!

ಕೊಳ್ಳೇಗಾಲದ ಕೇಬಲ್ ಕಳ್ಳ ರೇಣುಕೇಶ್

ಮಂಗಳೂರು: ಚೆಡ್ಡಿ ಶಿಕ್ಷಕರಿಂದ ಲೈಂಗಿಕ ಕಿರುಕುಳ

ದಾವಣಗೆರೆ : ಕ್ರೈಸ್ತರ ಮೇಲಿನ ದಾಳಿಗೆ ಪೊಲೀಸರ ಕುಮ್ಮಕ್ಕು



ಕಟ್ಟಾನ ನಕಲಿ ಕಂಪನಿಗೆ 448 ಎಕರೆ



ಸ್ತ್ರೀ ಶಕ್ತಿಗಳ ತಟ್ಟೆಗೂ ಕೈಚಾಚುತ್ತಿರುವ ಮಲ್ಟಿ ನ್ಯಾಷನಲ್‌ಗಳು!

ಚಾರ್ವಾಕ

ಶಿವಸುಂದರ್

ಇಂದು ಭಾರತದಾದ್ಯಂತ ಮಹಿಳೆಯರಿಗೆ ನಿತ್ಯ ಜೀವನದಲ್ಲಿ ಒಂದು ಹೊಸ ಭರವಸೆಯನ್ನು ಮೂಡಿಸಿರುವ ಶಕ್ತಿಯೆಂದರೆ ಸ್ತ್ರೀ ಶಕ್ತಿ ಸಂಘಟನೆಗಳು. ಹತ್ತು ಇಪ್ಪತ್ತು ಹೆಣ್ಣು ಮಕ್ಕಳು ಒಟ್ಟು ಸೇರಿ ಪ್ರತಿವಾರ ಒಂದಷ್ಟು ಹಣವನ್ನು ಉಳಿತಾಯ ಮಾಡುವುದು, ತಮ್ಮಲ್ಲಿಯೇ ಅಗತ್ಯವಿರುವ ಒಬ್ಬರಿಗೆ ಅದನ್ನು ಕಡಿಮೆ ಬಡ್ಡಿಗೆ ನೀಡುವುದು, ಮತ್ತವುಗಳನ್ನು ಸಾಧ್ಯವಾದಷ್ಟು ತಮ್ಮ ತುರ್ತು ಅಗತ್ಯಗಳಿಗೆ, ಗಂಡಸರ ಮೇಲಿನ ಅವಲಂಬನೆ ಇಲ್ಲದಂತೆ, ಬಳಸಿಕೊಳ್ಳುವುದು. ಇವುಗಳು ಮನೆಯ ನಾಲ್ಕೂ ಗೋಡೆಗಳಿಗೆ ಮಾತ್ರ ಸೀಮಿತವಾಗಿದ್ದ ಮಹಿಳೆಯರನ್ನು ಸಾಮಾಜಿಕ ಲೋಕಕ್ಕೆ ಕರೆತಂದಿತಲ್ಲದೆ ಒಂದಷ್ಟು ಸ್ವಾವಲಂಬನೆಯನ್ನೂ ಮೂಡಿಸಿತು.

ಈ ಸ್ತ್ರೀ ಶಕ್ತಿ ಸಂಘಟನೆಗಳೇ ಮಹಿಳೆಯರಲ್ಲಿ ಸ್ವಲ್ಪಮಟ್ಟಿಗಿನ ಸಾಮಾಜಿಕ ಅರಿವನ್ನು ಮೂಡಿಸಿ, ಸಾರಾಯಿ ವಿರುದ್ಧದ ಚಳವಳಿ ಮತ್ತಿತರ ಚಳವಳಿಗಳನ್ನು ಸಂಘಟಿಸಿಕೊಳ್ಳಲೂ ತಳಹದಿ ನಿರ್ಮಿಸಿತಲ್ಲದೆ ರಾಜಕೀಯ ಅರಿವನ್ನೂ ಮೂಡಿಸಲೂ ಪ್ರಾರಂಭಿಸಿದೆ. ಇವ್ಯಾವುದೂ ಪುರುಷ ಪ್ರಧಾನ ಸಮಾಜದ ನಿಯಮಗಳನ್ನು ಆಮೂಲಾಗ್ರವಾಗಿ ಬದಲಾಯಿಸುತ್ತಿಲ್ಲವಾದರೂ ಸ್ವಾತಂತ್ರ್ಯಾನಂತರ ಬಡ ಮತ್ತು ಕೆಳ ಮಧ್ಯಮವರ್ಗದ ಮಹಿಳೆಯರಲ್ಲಿ ತಂದಿರುವ ಚಲನೆ ಗಮನಾರ್ಹವಾದದ್ದು.

ಆದರೆ ಸ್ತ್ರೀ ಶಕ್ತಿ ಸಂಘಟನೆಗಳು ಒದಗಿಸುತ್ತಿರುವ ಈ ಅವಕಾಶವನ್ನು ಹೇಗೆ ಓಟು ಬ್ಯಾಂಕಾಗಿ ಪರಿವರ್ತಿಸಬಹುದೆಂದು ರಾಜಕೀಯ ಪಕ್ಷಗಳು ಚಿಂತಿಸುತ್ತಿದ್ದರೆ ಇದೀಗ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ಹಾಕಿ ಸುಲಿಯುವ ಹಣಕಾಸು ಮಲ್ಟಿನ್ಯಾಷನಲ್ ಕಂಪನಿಗಳ ಕಣ್ಣು ಈ ಸ್ತ್ರೀಶಕ್ತಿ ಗುಂಪುಗಳ ಮೇಲೆ ಬಿದ್ದಿದೆ.

ಈವರೆಗೆ ಬ್ಯಾಂಕುಗಳು ಮತ್ತು ಹಣಕಾಸು ಕಂಪನಿಗಳು ಸಾಲ ನೀಡುತ್ತಿದ್ದದ್ದು ಹಣವನ್ನು ಬಡ್ಡಿ ಸಮೇತ ತೀರಿಸುವ ಸಾಮರ್ಥ್ಯ ಉಳ್ಳ ಬಂಡವಾಳಶಾಹಿಗಳಿಗೆ ಮತ್ತು ಕಾರು, ಬಂಗಲೆ ಕೊಂಡುಕೊಳ್ಳುವ ಶಕ್ತಿ ಇದ್ದ ವಿಲಾಸಿ ಮೇಲ್ಮಧ್ಯಮ ವರ್ಗಗಳಿಗೆ ಮಾತ್ರ. ಆದರೆ ಸ್ತ್ರೀ ಶಕ್ತಿ ಸಂಘಟನೆಗಳು ಬಡವರಿಗೆ ಸಾಲದ ಅಗತ್ಯವಿಲ್ಲ ಮತ್ತು ಅವರು ಕೊಟ್ಟ ಸಾಲವನ್ನು ವಾಪಸ್ ತೀರಿಸುವುದಿಲ್ಲ ಎಂಬ ಮಿಥ್ಯೆಯನ್ನು ಸುಳ್ಳು ಮಾಡಿವೆ.

ವಾಸ್ತವವಾಗಿ ಈ ಸ್ತ್ರೀ ಶಕ್ತಿ ಸಂಘಟನೆಗಳು ತಮ್ಮ ನಡುವೆ ಉಳಿತಾಯ ಮತ್ತು ಸಾಲ ವಸೂಲಾತಿ ಇತ್ಯಾದಿಗಳನ್ನು ಸ್ವಲ್ಪ ಕಾಲದವರೆಗೆ ಯಶಸ್ವಿಯಾಗಿ ನಿರ್ವಹಿಸಿದ ನಂತರ ಆ ಗುಂಪಿಗೆ ರಾಷ್ಟ್ರೀಕೃತ ಬ್ಯಾಂಕುಗಳು ಒಂದು ನಿಗದಿತ ಮೊತ್ತದ ಹಣವನ್ನು ಸಾಲವಾಗಿ ನೀಡುತ್ತವೆ. ಅದನ್ನು ಕಾಲಾವಧಿಯೊಳಗೆ ಬಡ್ಡಿ ಸಮೇತ ವಾಪಸ್ ತೀರಿಸುವ ಜವಾಬ್ದಾರಿ ಇಡೀ ಗುಂಪಿನ ಮೇಲೆ ಇರುತ್ತದೆ. ಒಮ್ಮೆ ಆ ಗುಂಪು ಸಮಯಕ್ಕೆ ಸರಿಯಾಗಿ ಹಣ ವಾಪಸ್ ಮಾಡಿದರೆ ಮರು ಸಮಯದಲ್ಲಿ ಆ ಗುಂಪಿಗೆ ಇನ್ನೂ ಹೆಚ್ಚಿನ ಮೊತ್ತದ ಸಾಲವನ್ನು ಆ ಬ್ಯಾಂಕುಗಳು ನೀಡುತ್ತವೆ.

2006ರಲ್ಲಿ ನಡೆಸಲಾದ ಒಂದು ಅಧ್ಯಯನದಂತೆ ಸ್ತ್ರೀ ಶಕ್ತಿ ಸಂಘಟನೆಗಳಿಂದ ಶೇ.95ರಷ್ಟು ಪ್ರಮಾಣದಲ್ಲಿ ಸಾಲ ವಾಪಸಾತಿ ನಡೆದಿದೆ. ಇದು ಯಾವುದೇ ಒಂದು ಕ್ಷೇತ್ರದಿಂದ ಆಗಿರುವ ವಸೂಲಾತಿಗಿಂತಲೂ ಅತ್ಯಧಿಕವಾದದ್ದು. ಈ ದೇಶದ ದೊಡ್ಡ ದೊಡ್ಡ ಉದ್ಯಮಿಗಳಿಗೆ ಕೊಟ್ಟ ಸಾಲವೂ ಈ ಪ್ರಮಾಣದಲ್ಲಿ ವಸೂಲಾಗಿಲ್ಲ. ಹಾಗಂತ ಈ ಕ್ಷೇತ್ರದ ಮೇಲೆ ಬ್ಯಾಂಕುಗಳು ವಿಧಿಸುತ್ತಿರುವ ಬಡ್ಡಿಯೂ ಕಡಿಮೆಯೇನಲ್ಲ. ಗೃಹ ನಿರ್ಮಾಣ, ವಾಹನ ಖರೀದಿ ಇತ್ಯಾದಿಯಂತಹ ಮಧ್ಯಮವರ್ಗ ಮತ್ತು ಮೇಲ್ಮಧ್ಯಮ ವರ್ಗಗಳ ಸಾಲದ ಅಗತ್ಯಕ್ಕೆ ಶೇ.4-10ರಷ್ಟು ಬಡ್ಡಿ ವಿಧಿಸುವ ಬ್ಯಾಂಕುಗಳು ಬಡವರ ಮತ್ತು ಕೆಳ ಮಧ್ಯಮ ವರ್ಗದವರ ಸಾಲದ ಅಗತ್ಯಕ್ಕೆ ಶೇ.12-24ರಷ್ಟು ಬಡ್ಡಿ ವಿಧಿಸುತ್ತವೆ. ಇಷ್ಟಿದ್ದರೂ ಬಡಜನತೆ ಅಷ್ಟು ಬಡ್ಡಿಯನ್ನು ನಿಯಮಬದ್ಧವಾಗಿ ಕಟ್ಟುತ್ತಾ ಬಂದು ಬ್ಯಾಂಕುಗಳ ಲಾಭದ ಪ್ರಮಾಣವನ್ನು ಹೆಚ್ಚಿಸುತ್ತಾ ಬಂದಿದೆ.

ಬಡ ಮಹಿಳೆಯರ ಈ ನಿಯತ್ತೇ ಈಗ ಅವರಿಗೆ ಮುಳುವಾಗುತ್ತಿದೆ. ಈ ರೀತಿ ಅಧಿಕ ದರದ ಬಡ್ಡಿ ಸಾಲಕ್ಕೆ ಇಷ್ಟು ದೊಡ್ಡ ಪ್ರಮಾಣದ ಮಾರುಕಟ್ಟೆಯನ್ನು ಕಂಡಿರುವ ಖಾಸಗಿ ಮತ್ತು ಬ್ಯಾಂಕಿಂಗ್ ಮಲ್ಟಿನ್ಯಾಷನಲ್ ಕಂಪನಿಗಳ ಬಾಯಲ್ಲಿ ಲಾಭದ ನೀರೂರುತ್ತಿದೆ. ಒಂದು ಅಂದಾಜಿನ ಪ್ರಕಾರ ಈ ಮೈಕ್ರೊ ಕ್ರೆಡಿಟ್ ಸಾಲದ ವಲಯದಲ್ಲಿ 1,25,000 ಕೋಟಿ ರೂಪಾಯಿಗಳ ಮಾರುಕಟ್ಟೆಯಿದೆ. ಈಗಾಗಲೇ ಬ್ಯಾಂಕುಗಳು ಸಾಲದ ವಹಿವಾಟಿನಲ್ಲಿ ಲಾಭದ ದರದಲ್ಲಿ ಸ್ಥಗಿತತೆಯನ್ನು ಅನುಭವಿಸುತ್ತಿರುವುದರಿಂದ ಪ್ರಪಂಚದ ಬ್ಯಾಂಕಿಂಗ್ ಮಲ್ಟಿ ನ್ಯಾಷನಲ್‌ಗಳಿಗೆ ಈ ಮಾರುಕಟ್ಟೆ ಲಾಭದ ಒಂದು ಹೊಸ ರಹದಾರಿಯನ್ನೇ ತೆರೆದಿಟ್ಟಿದೆ.

ಹೀಗಾಗಿ ಕಳೆದ ಕೆಲವು ವರ್ಷಗಳಿಂದ ಐಸಿಐಸಿಐ, ಸಿಐಡಿಬಿಐ, ರಿಲಯನ್ಸ್ ಇನ್ನಿತರ ಖಾಸಗಿ ಕಂಪನಿಗಳು ಸಹ ಮೈಕ್ರೊ ಕ್ರೆಡಿಟ್ ಸಂಸ್ಥೆಗಳನ್ನು ಪ್ರಾರಂಭಿಸಿ ನೇರವಾಗಿ ಗ್ರಾಮೀಣ ಮತ್ತು ನಗರದ ಬಡವರ ಸಾಲಮಾರುಕಟ್ಟೆಯಲ್ಲಿ ಹಣಹೂಡಿ ಲಾಭ ಮಾಡುವ ಪ್ರಯತ್ನದಲ್ಲಿ ತೊಡಗಿವೆ. ಅದಕ್ಕೆ ಈಗಾಗಲೇ ಸಿದ್ಧವಾಗಿ ಮಾಡಲ್ಪಟ್ಟಿರುವ ಸ್ತ್ರೀ ಶಕ್ತಿ ಸಂಘಟನೆಗಳ ಜಾಲವನ್ನು ಬಳಸಿಕೊಳ್ಳುತ್ತಿವೆ. ಸ್ತ್ರೀ ಶಕ್ತಿ ಸಂಘಟನೆಗಳಂಥ ಸ್ವಸಹಾಯ ಸಂಘಟನೆಗಳು ಇಡೀ ಗುಂಪಿಗೆ ಸಾಲ ಕೊಟ್ಟು ಅವರಿಂದಲೇ ಸಾಲ ವಸೂಲಾತಿ ಮಾಡುತ್ತಿದ್ದದ್ದು ನಿಜವೇ ಆದರೂ ಅದರಿಂದ ಮಹಿಳೆಯರ ಪರಸ್ಪರ ಅವಲಂಬನೆ, ಸಾಮಾಜಿಕ ಪ್ರಜ್ಞೆ ಮತ್ತು ಜವಾಬ್ದಾರಿ ಹೆಚ್ಚುತ್ತಿತ್ತು. ಆದರೆ ಈ ದೊಡ್ಡ ದೊಡ್ಡ ಬಂಡವಾಳಶಾಹಿ ಮೈಕ್ರೊ ಕ್ರೆಡಿಟ್ ಸಂಸ್ಥೆಗಳು ಖಾಸಗಿಯಾಗಿ ಬಿಡಿ ವ್ಯಕ್ತಿಗಳಿಗೆ ಹೆಚ್ಚಿನ ಮೊತ್ತದ ಸಾಲವನ್ನು ಕೊಡುತ್ತವೆ. ಮತ್ತು ನೇರವಾಗಿ ಅವರಿಂದ ವಸೂಲಾತಿ ಮಾಡುವ ಬಡ್ಡಿ ವ್ಯಾಪಾರಿಗಳ ತಂತ್ರವನ್ನೇ ಅನುಸರಿಸುತ್ತವೆ. ಈ ನಿಟ್ಟಿನಲ್ಲಿ ಸ್ವಸಹಾಯ ಗುಂಪುಗಳು ಕೇವಲ 28 ಲಕ್ಷ ಕುಟುಂಬಗಳು ಮಾತ್ರ ಮುಟ್ಟಲು ಸಾಧ್ಯವಾದರೆ ಮೈಕ್ರೋ ಕ್ರೆಡಿಟ್ ಸಂಸ್ಥೆಗಳು 73 ಲಕ್ಷ ಬಡಕುಟುಂಬಗಳನ್ನು ತಲುಪಲು ಸಾಧ್ಯವಾಗಿದೆ ಎಂದು ಕೊಚ್ಚಿಕೊಳ್ಳುತ್ತಿವೆ. ಆದರರ್ಥ ಅವರಿಗೆ ಸ್ವಸಹಾಯ ಗುಂಪುಗಳು ಬೇಡವೆಂದೇನೂ ಅಲ್ಲ, ಸಾಲ ವಾಪಸಾತಿ ಹೆಚ್ಚಿನ ಮಟ್ಟದಲ್ಲಿ ಸಾಧ್ಯವಾಗಿರುವುದು ಸ್ವಸಹಾಯ ಗುಂಪಿನಂಥ ರಚನೆಯಿಂದಲೇ ಎಂದು ತಿಳಿದಿರುವ ಈ ಕಂಪನಿಗಳಿಗೆ ಈ ಗುಂಪುಗಳಿದ್ದರೆ ಒಳ್ಳೆಯದೇ. ಏಕೆಂದರೆ ಆಗ ಅವು ಸಾಲ ವಾಪಸಾತಿಗೆ ಮಾಡುವ ವೆಚ್ಚ ಕಡಿಮೆಯಾಗುತ್ತದೆ.

ಹೀಗೆ ಬಡವರ ಕ್ರೆಡಿಟ್ ಮಾರುಕಟ್ಟೆ ಮತ್ತು ಅದರ ಬಡ್ಡಿದರ ಹಾಗೂ ವಾಪಸಾತಿ ಎಲ್ಲವೂ ಆಕರ್ಷಕವಾಗಿರುವುದರಿಂದ 2007ನೇ ಸಾಲಿನಲ್ಲಿ 80ಕ್ಕೂ ಹೆಚ್ಚು ಹಣಕಾಸು ಮಲ್ಟಿ ನ್ಯಾಷನಲ್ ಕಂಪನಿಗಳು ಈ ಮಾರುಕಟ್ಟೆಯನ್ನು ಕೊಳ್ಳೆ ಹೊಡೆಯಲು ತುದಿಗಾಲಲ್ಲಿ ನಿಂತಿವೆ. ಅದರಲ್ಲಿ ಪ್ರಪಂಚಾದ್ಯಂತ ಜನರನ್ನು ಸುಲಿಗೆ ಮಾಡುತ್ತಿರುವ ದೈತ್ಯ ಬಹುರಾಷ್ಟ್ರೀಯ ಕಂಪನಿಗಳಾದ **Morgan Stanley, Omidyar Network, Microvest Fund, Rabo Bank, Accion, Incofin, MEDA, Blue Orchard, Planet Microfund** ಗಳು ಮತ್ತು ಇವುಗಳಲ್ಲದೆ ಫೋರ್ಡ್ ಫೌಂಡೇಷನ್, ಭಾರತದ ರಿಲಯನ್ಸ್ ಮತ್ತು ಐಸಿಐಸಿಐಗಳೂ ಬಡವರ ಬ್ಯಾಂಕಿಂಗ್ ಹೆಸರಲ್ಲಿ ಬಡವರ ಉಳಿತಾಯದ ಹಣವನ್ನು ಸುಲಿಗೆ ಮಾಡಲು ತುದಿಗಾಲಲ್ಲಿ ನಿಂತಿವೆ. ಈಗಾಗಲೇ ಇವುಗಳಲ್ಲಿ ಕೆಲವು 45 ಮಿಲಿಯನ್ ಡಾಲರ್ ಹಣವನ್ನೂ ತೊಡಗಿಸಿವೆ. ಆದರೆ ಅದನ್ನು ದೊಡ್ಡ ಮಟ್ಟದಲ್ಲಿ ಶುರು ಮಾಡುವ ಮೊದಲು ಅವು ಭಾರತ ಸರ್ಕಾರದಿಂದ ಎರಡು ಬಗೆಯ ಭರವಸೆಗಳನ್ನು ಕೇಳುತ್ತಿವೆ.


ಅದರಲ್ಲಿ ಮೊದಲನೆಯದು ಈ ಮೈಕ್ರೊ ಕ್ರೆಡಿಟ್‌ಗಳು ಮೂಲಭೂತವಾಗಿ ಬಡವರ್ಗಗಳನ್ನೇ ಗುರಿಯಾಗಿಟ್ಟುಕೊಳ್ಳುವುದರಿಂದ ಆ ಸಾಲದ ಮೇಲೆ ಎಷ್ಟು ಬಡ್ಡಿ ಹಾಕಬೇಕೆಂಬುದರ ಮೇಲೆ ಸರ್ಕಾರ ಒಂದು ನಿರ್ಬಂಧವನ್ನು ವಿಧಿಸಿದೆ ಮತ್ತು ಈ ಸಾಲ ಮಾರುಕಟ್ಟೆಯಲ್ಲಿ ಪೂರ್ಣ ಪ್ರಮಾಣದಲ್ಲಿ ವಿದೇಶಿ ಬಂಡವಾಳ ಹೂಡುವುದರ ಮೇಲೂ ಸರ್ಕಾರ ನಿರ್ಬಂಧ ವಿಧಿಸಿದೆ. ಇವೆರಡೂ ವಿದೇಶಿ ಮೈಕ್ರೋ ಕ್ರೆಡಿಟ್ ಸಂಸ್ಥೆಗಳು ಭಾರತದ ಬಡವರ ಬ್ಯಾಂಕಿಂಗ್ ಮಾರುಕಟೆಯನ್ನು ಪ್ರವೇಶಿಸಲು ದೊಡ್ಡ ಆತಂಕವೆಂದು ಈ ಕಂಪನಿಗಳು ಭಾವಿಸುತ್ತಿವೆ.


ಇವೆರಡನ್ನೂ ನಿವಾರಿಸಿಕೊಳ್ಳಲೆಂದೇ ಬರಲಿರುವ ಅಕ್ಟೋಬರ್ 9-10ರಂದು ಈ ವಿದೇಶಿ ಮತ್ತು ಸ್ವದೇಶಿ ಹಣಕಾಸು ದೈತ್ಯ ಸಂಸ್ಥೆಗಳು ನವದೆಹಲಿಯಲ್ಲಿ ದೊಡ್ಡ ಸಮ್ಮೇಳನವನ್ನು ನಡೆಸುತ್ತಿವೆ. ಆ ಸಮ್ಮೇಳನದಲ್ಲಿ ಮೈಕ್ರೋ ಕ್ರೆಡಿಟ್ ಮಾರುಕಟ್ಟೆಯಲ್ಲಿರುವ ಕನಿಷ್ಟ 90 ದೈತ್ಯ ಮಲ್ಟಿನ್ಯಾಷನಲ್ ಕಂಪನಿಗಳು ಭಾಗವಹಿಸಲಿವೆ. ಆ ಸಮ್ಮೇಳನದಲ್ಲಿ ಅರ್ಥಮಂತ್ರಿ ಚಿದಂಬರಂ ಬಡವರ ಉದ್ಧಾರದ ಹೆಸರಲ್ಲಿ ಆ ದೈತ್ಯ ಕಂಪನಿಗಳು ಕೇಳುತ್ತಿರುವ ಎಲ್ಲಾ ರಿಯಾಯತಿಗಳನ್ನು ನೀಡಲಿದ್ದಾರೆ. ಅಂದರೆ ಮೈಕ್ರೋ ಕ್ರೆಡಿಟ್ ಮೇಲೆ ವಿಧಿಸಲಾಗುವ ಬಡ್ಡಿ ನಿರ್ಬಂಧವನ್ನು ಸಂಪೂರ್ಣವಾಗಿ ತೆಗೆದುಹಾಕಲಾಗುತ್ತದೆ. ಹಾಗೂ ಈ ಮಾರುಕಟ್ಟೆಯಲ್ಲಿ ವಿದೇಶಿ ಕಂಪನಿಗಳ ಪ್ರವೇಶ ಮುಕ್ತವಾಗುತ್ತದೆ.

ಇದರ ಪರಿಣಾಮವೇನು? ಸ್ವಸಹಾಯ ಸಂಘಗಳಲ್ಲಿ ಬಡ ಮತ್ತು ಕೆಳಮಧ್ಯಮವರ್ಗದವರು ಉಳಿತಾಯ ಮಾಡುತ್ತಿದ್ದ ಬೆವರು ಸುರಿಸಿ ಗಳಿಸಿದ ಹಣವನ್ನು ವಿದೇಶಿ ದೈತ್ಯ ಕಂಪನಿಗಳು ಕೊಳ್ಳೆ ಹೊಡೆಯುತ್ತವೆ. ಅಷ್ಟು ಮಾತ್ರವಲ್ಲ, ಸಾಲ ವಸೂಲಾತಿಯಲ್ಲೂ ನಿಷ್ಠೂರವಾಗಿರುವ ಬ್ಯಾಂಕಿಂಗ್ ನಿಯಮವನ್ನುಳ್ಳ ಈ ಕಂಪನಿಗಳು ಬಡವರಿಗೆ ಸಹಾಯ ಮಾಡುವ ಹೆಸರಲ್ಲಿ ಬಡವರನ್ನು ಸುಲಿಯಲು ಪ್ರಾರಂಭಿಸುತ್ತವೆ. ಇವುಗಳು ತಮ್ಮ ಕ್ಷೇತ್ರದ ವಿಸ್ತಾರವನ್ನು ಹೆಚ್ಚಿಸಿಕೊಳ್ಳಲು ದೇಶದ ಮೂಲೆಮೂಲೆಗೆ ತಮ್ಮ ಕಬಂಧ ಬಾಹುಗಳನ್ನು ಚಾಚುತ್ತವೆ. ಇದರಿಂದ ಸ್ಥಳೀಯ ಭೂಮಾಲೀಕರ ಅಥವಾ ಬಡ್ಡಿ ವ್ಯಾಪಾರಿಗಳ ಮೇಲೆ ಮಾತ್ರ ಅವಲಂಬಿತರಾಗುತ್ತಿದ್ದ ಬಡಜನತೆಯನ್ನು ಈ ಬಂಡವಾಳಶಾಹಿ ಕಂಪನಿಗಳು ತಮ್ಮೆಡೆ ಸೆಳೆಯುತ್ತವೆ. ಆದರೆ ಅದರಿಂದ ಬಡಜನತೆ ಭೂಮಾಲೀಕರ ಮತ್ತು ಬಡ್ಡಿ ವ್ಯಾಪಾರಿಗಳ ಬದಲು ಈ ಬಹುರಾಷ್ಟ್ರೀಯ ಕಂಪನಿಗಳ ನೇರ ಸುಲಿಗೆಗೆ ತುತ್ತಾಗುತ್ತಾರೆ. ಅಲ್ಲದೆ ಸ್ತ್ರೀ ಶಕ್ತಿ ಗುಂಪಿಗೆ ಪರ್ಯಾಯವಾಗಿ ವ್ಯಕ್ತಿಸಾಲದ ನೆಲೆಯಲ್ಲಿ ವ್ಯವಹಾರ ನಡೆಯುವುದರಿಂದ ಪರೋಕ್ಷವಾಗಿ ಮಹಿಳೆಯರಿಗೆ ಲಭಿಸುತ್ತಿದ್ದ ಸ್ವಾವಲಂಬನೆ ಮತ್ತು ಸಬಲೀಕರಣದ ಪ್ರಯೋಜನಗಳೂ ಇಲ್ಲವಾಗುತ್ತವೆ.

ಬಡಜನತೆಯ ವಿರುದ್ಧ ನಮ್ಮ ಸರ್ಕಾರಗಳೇ ಸದ್ದಿಲ್ಲದೆ ಮಾಡುತ್ತಿರುವ ಸಂಚಿನ ಬಗ್ಗೆ ಸ್ವಸಹಾಯ ಸಂಘಗಳು ಮತ್ತು ಬಡಜನತೆ ಎಚ್ಚೆತ್ತುಕೊಂಡು ಈ ಕ್ಷೇತ್ರದಲ್ಲಿ ಸ್ವದೇಶಿ ಮತ್ತು ವಿದೇಶಿ ಬಂಡವಾಳಶಾಹಿಗಳ ವಿರುದ್ಧ ಹೋರಾಟಕ್ಕೆ ಸಿದ್ಧರಾಗಬೇಕಿದೆ. ಬಡವರಿಗೆ ಸಾಲ ಸಿಗುತ್ತದೆ ಎಂದ ತಕ್ಷಣ ಅದರ ಪೂರ್ವಪರ ವಿಚಾರಿಸದೆ ಅದಕ್ಕೆ ಬೇಷರತ್ ಸ್ವಾಗತ ಮಾಡುವ ಮತ್ತು ಯೂನುಸ್‌ರವರಿಗೆ ನೊಬೆಲ್ ಸಿಕ್ಕಿದ್ದನ್ನು ಕಿಂಚಿತ್ತೂ ಶಂಕಿಸದೆ ಸಂಭ್ರಮಿಸುವ ನಮ್ಮ ಪಂಡಿತ ಬುದ್ಧಿ ಜೀವಿಗಳು ಈಗಲಾದರೂ ಬೆಳ್ಳಗಿರುವುದೆಲ್ಲಾ ಹಾಲಾಗಿರಬೇಕಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಿದೆ. ತಮ್ಮ ಪಂಡಿತ ವ್ಯಾಖ್ಯಾನಗಳನ್ನು ನೀಡುವ ಮುನ್ನ ಜನಪರ ಕಾಳಜಿಯಿಂದ ಮತ್ತು ಇತಿಹಾಸದ ಅನುಭವದಿಂದ ಸ್ಪಂದಿಸಬೇಕಿದೆ. ■

No Comments





"ನಮ್ಮ ತಪ್ಪುಗಳ ಪಟ್ಟಿಯನ್ನು ಅವರು ನೀಡುವುದಾದರೆ ಜೆಡಿಎಸ್‌ನ ತಪ್ಪುಗಳ ಪಟ್ಟಿಯನ್ನು ನಾವು ನೀಡುತ್ತೇವೆ."

ಯಡಿಯೂರಪ್ಪ

"ನಾವು ಜೆಡಿಎಸ್ ಜೊತೆ ಕೈಜೋಡಿಸಿದ್ದು ಮಿಸ್ಟೇಕ್ ಅಲ್ಲ, ನಮ್ಮ ಅಂದಾಜು ತಪ್ಪಾಯಿತು ಅಷ್ಟೆ."

-ವೆಂಕಯ್ಯ ನಾಯ್ಡು

"ಕೊಟ್ಟ ಮಾತಿಗೆ ತಪ್ಪಿದೆ ಎಂಬ ಆಪಾದನೆ ಬಂದರೆ ಜನರಿಗೆ ಹೇಗೆ ಉತ್ತರ ಕೊಡಬೇಕು ಎಂಬುದನ್ನು ನನಗೆ ಬಿಡಿ."

-ಕುಮಾರಸ್ವಾಮಿ

"ಸಾಹಿತಿಯಾದವನು ಎಷ್ಟೇ ವಯಸ್ಸಾದರೂ ನವರಸಗಳನ್ನು ಬರೆಯಬೇಕು. ಸಾಹಿತ್ಯ ಯೌವ್ವನ ಇದ್ದಂತೆ. ನಾವು ಪ್ರತಿನಿ... ಅದರ ಜೊತೆ ಆಡಬೇಕು."

-ಗೋಟೂರಿ, ಚಿತ್ರ ಸಾಹಿ...

"ಜನರಿಗೆ ಈಗ ನಾವು ತಿಳಿಸಬೇಕಾದ ವಿಚಾ... ಬಹಳಷ್ಟಿದೆ."

-ಯಡಿಯೂರ...

"ನಮ್ಮ ಪಕ್ಷವನ್ನು ತಿಥಿ ಮಾಡ್ತೀವಿ ಅನ್ನೋರ ಕೈ... ಅಧಿಕಾರ ಕೊಡಕ್ಕಾಗುತ್ತೇನ್ರಿ? ತಿಥಿ ಮಾಡಿಸ್ಕೊಳ್ಳಲು ನಾವೇನ... ನಮ ಪಕ್ಷವನ್ನು ಅಡ ಇಟ್ಟಿದೀವ?"

-ಕುಮಾರಸ್ವಾಮಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಮಾಜಿ ಸಚಿವ ಅಲೆಕ್ಸಾಂಡರ್‌ಗೆ ಡಾಕ್ಟರೇಟ್ ಪದವಿ..."

-ಪತ್ರಿಕಾ ವರ...

"ಇಷ್ಟ ಇದ್ದರೆ ಅಧಿಕಾರ ಕೊಡಿ. ಇಲ್ಲಾಂದರೆ ನಾವು... ಚುನಾವಣೆಗೆ ಸಿದ್ಧ."

- ಯಡಿಯೂರ...

"ರಾಜ್ಯದ ಹಿತದೃಷ್ಟಿಯಿಂದ ನಾನು ವಚನಭ್ರಷ್ಟನಾಗಲ... ಸಿದ್ಧ."


-ಕುಮಾರಸ್ವಾಮಿ

ಎಲುಬಿಲ್ಲ ನಾಲಿಗೆಗೆ!

"ನಾನೂ ಮಣ್ಣಿನ ಮಗ. ಹಳ್ಳಿಯವ. ಬಸವ ತತ್ವದ... ನಂಬಿಕೆ ಇಟ್ಟವನು. ಆದ್ದರಿಂದ ನಡೆ-ನುಡಿ ಒಂದೇ ಇರಬೇಕು... ಎನ್ನುವುದೇ ನನ್ನ ಆದರ್ಶ. ಕನ್ನಡ ಸಂಸ್ಕೃತಿಯ... ಮೋಸ-ಅನ್ಯಾಯಕ್ಕೆ ಜಾಗವಿಲ್ಲ ಎಂಬುದನ್ನು ಎಲ್ಲರೂ... ಅರ್ಥ ಮಾಡಿಕೊಳ್ಳಬೇಕು."

-ಯಡಿಯೂರ...

ಇದು ಸುಳ್ಳಾಗಲಿ



"ಕನ್ನಡ ನಮ್ಮ ಜ್ಞಾನ ಪ್ರಸಾರದ ಭಾಷೆಯಾಗಿ ಮುಂದೆಯೂ ಉಳಿಯುತ್ತದೆ ಎಂಬ ಭರವಸೆಯೇ ನನಗಿಲ್ಲ."


-ಯು.ಆರ್. ಅನಂತಮೂರ್ತಿ

ಆತ್ಮ ವಿಮರ್ಶೆಯೇ?

"ಸರ್ಕಾರಿ ಭೂಮಿ ಒತ್ತುವರಿ ಮಾಡುವವರನ್ನು ಜೈಲಿ... ಹಾಕಬೇಕು."

-ಎಚ್. ಡಿ. ಕುಮಾರಸ್ವಾಮಿ

ಬೌದ್ಧಿಕ ಹಾದರಕ್ಕೊಂದು ಉದಾಹರಣೆ!



"ಭಾರತ ವಿಭಜನೆಯ ಸಂದರ್ಭದಲ್ಲಿ ಗಾಂಧಿ ಎದುರಿಸಿದ ಪರಿಸ್ಥಿತಿಯನ್ನೇ ಈಗ ದೇವೇಗೌಡರೂ ಎದುರಿಸುತ್ತಿದ್ದಾರೆ."

-ಎಂ.ಪಿ. ಪ್ರಕಾಶ್

ಬುದ್ಧಿಜೀವಿ...ಗೋವಿಂದ, ಗೋವಿಂದ

"ಒಬ್ಬ ಶಾಸಕ ಹಿರಿಯ ರಾಜಕಾರಣಿಯನ್ನು ಏಕವಚನದ... ಬಾಯಿಗೆ ಬಂದಂತೆ ಬೈಯುತ್ತಾನೆ. ಇದನ್ನು ಸಮ... ಕನ್ನಡಿಗರೂ ಟಿ.ವಿ.ಯಲ್ಲಿ ನೋಡಿದ್ದಾರೆ. ಹೀಗಾದರೆ ಪ್ರಜಾ... ಪ್ರಭುತ್ವದಲ್ಲಿ ಏನು ಬೆಲೆ ಉಳಿಯಿತು. ನಾನೂ ಎಷ್ಟೋ... ಬಾರಿ ದೇವೇಗೌಡರ ಜೊತೆ ಜಗಳ ಕಾದಿದ್ದೇನೆ. ಆದ... ನಾನಾಗಲೀ ದೇವೇಗೌಡರಾಗಲೀ ಏಕವಚನ ಬಳಸಿಲ್ಲ."

-ಜಿ. ಕೆ. ಗೋವಿಂದರಾವ...

ವಾರದ ಪ್ರಶ್ನೆ

"ಕಾನೂನುಗಳೇ ಜನವಿರೋಧಿಯಾಗಿಬಿಡುತ್ತಿರುವಾ... ರೂಲ್ ಆಫ್ ಲಾ-ಕಾನೂನು ಬದ್ಧ ಆಡಳಿತ ಎಂಬುದ... ಸಹ ಜನರಿಗೆ ಪರಿಹಾರ ಕೊಡುವುದರ ಬದಲಿಗೆ ಇನ್ನಷ್ಟು... ಅವರ ಬದುಕನ್ನು ಬಗಡಾಯಿಸುವುದಿಲ್ಲವೇ?"

-ಅರುಂಧತಿ ರಾಯ...

ವಚನ ಭ್ರಷ್ಟತೆ ಮತ್ತು ಗೋವುಗಳಲ್ಲದ ರಾಜಕಾರಣಿಗಳು



ಕಂಡಹಾಗೆ

ಪುಣ್ಯಕೋಟಿ ಎಂಬ ಗೋವು ಅರ್ಬುದ ಎಂಬ ದುಷ್ಟಹುಲಿಯ ಎದುರು ನಿಂತು 'ಈ ದೇಹವನ್ನು ನೀನು ಭಕ್ಷಿಸು' ಅಂದದ್ದು ಒಂದು ನಾಟಕೀಯ ಚಿತ್ರ. ಅದು ವಿಚಿತ್ರ ಅರ್ಥಗಳಿಂದ ಕೂಡಿದ ದೃಶ್ಯ.

ಸಾವಿಗೆ ಅರ್ಥ ತರುವುದು ಎಲ್ಲ ಸಜ್ಜನರು ಮಾಡಿದ ಕೆಲಸ. ಕ್ರಿಸ್ತನ ರಕ್ತದಿಂದ ಆವನ ದೇಶದ ರಕ್ತದಾಹ ಕಡಿಮೆಯಾಯಿತು. ಗಾಂಧಿಯ ರಕ್ತದಿಂದ ಮನುಷ್ಯನಾಳದ ಕ್ರೌರ್ಯ ಸ್ವಲ್ಪ ಕಾಲವಾದರೂ ತಣ್ಣಗಾಯಿತು.

ಆದರೆ ಈ ಸಜ್ಜನಿಕೆ, ನನ್ನ ದೇಹವನ್ನು, ಪ್ರಾಣವನ್ನು ಬೇಕಾದರೆ ಪಡೆದುಕೋ ಎಂದು ಹೇಳುವ ವ್ಯಕ್ತಿಯ ಶಕ್ತಿಯ ಮೂಲ ಯಾವುದು? ಆ ಪ್ರಾಣದ ಅರ್ಪಣೆಯಿಂದ ಕ್ರೂರಿಯಾದ ಎದುರಾಳಿಯಲ್ಲಿ ಉತ್ತಮಿಕೆ ಮೂಡಲು ಕಾರಣವೇನು?

ಗೋವಿನ ಹಾಡಿನಲ್ಲಿ ಹಸು ಸಾಧುವಾಗಿರುವುದು, ಹುಲಿ ಮಾಂಸ ತಿನ್ನುವುದು, ಗೊಲ್ಲ ಹಾಲು ಪಡೆಯುವುದು ಎಲ್ಲವೂ ಜೀವಿಯ ಧರ್ಮಕ್ಕೆ ತಕ್ಕುದಾಗಿಯೇ ಇವೆ. ಆದರೆ ಈ ಸರಳ ಕತೆ ಮಹೋನ್ನತ ಮೌಲ್ಯವೊಂದನ್ನು ಮಂಡಿಸುತ್ತದೆ. ಪುಣ್ಯಕೋಟಿ ಕೊಟ್ಟ ಮಾತಿಗೆ ತಪ್ಪಲಾರಳು; ತನ್ನ ನಂಬಿಕೆಯ ವಿರುದ್ಧ ನಡೆಯಲಾರಳು; ಅದು ಆಕೆಗೆ ಜೀವದಷ್ಟೇ ಮುಖ್ಯ. ಈ ದೇಹ ಎಷ್ಟು ದಿನ ಇರುತ್ತದೆ? ತನ್ನ ಈ ನಶ್ವರ ದೇಹವನ್ನು ಉಳಿಸಿಕೊಳ್ಳಲು ದೇಹವನ್ನು ಮೀರಿದ ಮೌಲ್ಯವನ್ನು ಬಲಿಕೊಡುವುದೇ? ಎಲ್ಲ ಜೀವಿಗಳೂ ಉಳಿದಿರುವುದು ಅನ್ನ ಬಟ್ಟೆಯಿಂದ ಮಾತ್ರವಲ್ಲ, ತಮ್ಮ ಮೌಲ್ಯಗಳನ್ನು ಒಳಗೊಂಡ ಆತ್ಮಗೌರವದಿಂದ.

ಪ್ರಾಣಿಗಳು ಮುಖ್ಯವಾಗಿರುವ ಈ ಕತೆ ಮನುಷ್ಯರಿಗೂ ಅನ್ವಯವಾಗುವ ರೂಪಕ....

ಗೋವಿನ ಹಾಡು ಕುರಿತಂತೆ 'ಕೊಟ್ಟ ಭಾಷೆಗೆ ತಪ್ಪಲಾರೆನು' ಎಂಬ ಶೀರ್ಷಿಕೆಯಡಿ ಅಪ್ಪ ಬರೆದಿದ್ದ ಲೇಖನದ ಹಲವು ಸಾಲುಗಳನ್ನು ಮೇಲೆ ನೀಡಿದ್ದೇನೆ. ಹೀಗೆ ನೀಡುವುದರ ಕಾರಣ ನಿಮಗೆ ಗೊತ್ತಿದೆ. ಇವತ್ತು ರಾಜ್ಯ ರಾಜಕೀಯ ವಲಯದಲ್ಲಿ ಮುಖ್ಯಮಂತ್ರಿ ಸ್ಥಾನದ ಹಸ್ತಾಂತರ ಕುರಿತಂತೆ (ಅಧಿಕಾರದ ಹಸ್ತಾಂತರ ಎನ್ನುವುದು ಅಷ್ಟು ಸರಿಯಲ್ಲ, ಏಕೆಂದರೆ ಕಳೆದ ಇಪ್ಪತ್ತು ತಿಂಗಳುಗಳಿಂದ ಬಿಜೆಪಿಗಳು ಅಧಿಕಾರವನ್ನು ಅನುಭವಿಸುತ್ತಲೇ ಬಂದಿದ್ದಾರೆ. ಇವತ್ತು ವಿವಾದವೆದ್ದು ಸಮ್ಮಿಶ್ರ ಸರ್ಕಾರ ಕಳಚಿ ಬಿದ್ದಿರುವುದು, ಯಡಿಯೂರಪ್ಪನಿಗೆ ಮುಖ್ಯಮಂತ್ರಿ ಸ್ಥಾನ ನೀಡದಿರುವುದನ್ನು ಕುರಿತಂತೆ ಮಾತ್ರ) ಎಲ್ಲೆಡೆ ಚರ್ಚೆ ನಡೆಯುತ್ತಿದೆ. ಬಿಜೆಪಿಗಳಿಗೆ 'ಅಧಿಕಾರ' ನಿರಾಕರಿಸಿದ್ದು ಸರಿಯೇ? ಕೊಟ್ಟ ಮಾತಿಗೆ ತಪ್ಪಿದ್ದು ತಪ್ಪಲ್ಲವೇ? ಇದೆಲ್ಲಾ ವಚನ ಭ್ರಷ್ಟತೆಗೆ ಸಮವಲ್ಲವೇ? ಇಂತಹದ್ದೇ ಪ್ರಶ್ನೆಗಳು....

ಇಲ್ಲಿ ಮೊದಲನೆಯದಾಗಿ ನಾವೆಲ್ಲ ನೆನಪಿಟ್ಟುಕೊಳ್ಳಬೇಕಿರುವ ಮುಖ್ಯ ಅಂಶ ಯಾವುದೆಂದರೆ ಯಾರು ಯಾರಿಗೆ ಕೊಟ್ಟ 'ಮಾತ'ನ್ನು ಉಳಿಸಿಕೊಂಡರೋ, ಇಲ್ಲವೋ ಎಂಬುದಲ್ಲ, ಬದಲಾಗಿ ಜನರು ನೀಡಿದ ಜನ'ಮತ'ವನ್ನು ಇವರೆಲ್ಲ ಎಷ್ಟು ಗೌರವಿಸಿದರು ಎಂಬುದನ್ನು. ಇದನ್ನು ಬರೆಯುತ್ತಿರುವಾಗಲೇ ಬಿಜೆಪಿಗಳ ನಾಯಕರಲ್ಲಿ ಒಬ್ಬರಾದ ಅನಂತ್‌ಕುಮಾರ್ "ಇವತ್ತು ಆರು ಕೋಟಿ ಕನ್ನಡಿಗರ ಭಾವನೆಗೆ ದೇವೇಗೌಡ ದ್ರೋಹ ಬಗೆದಿದ್ದಾರೆ" ಎಂದೆಲ್ಲಾ ಟಿವಿಯಲ್ಲಿ ಅರಚಿಕೊಳ್ಳುತ್ತಿದ್ದಾರೆ. ಆದರೆ ವಾಸ್ತವವಾಗಿ ಕರ್ನಾಟಕದ ಎಷ್ಟು ಜನ ಕಳೆದ ಚುನಾವಣೆಯಲ್ಲಿ ಈ ಚೆಡ್ಡಿಗಳ ಪಕ್ಷಕ್ಕೆ ಮತ ನೀಡಿದ್ದರು ಎಂದು ವಿಶ್ಲೇಷಿಸುವುದು ಈಗಲೂ ಅಗತ್ಯವಾಗಿದೆ.

ರಾಜ್ಯದ ಒಟ್ಟಾರೆ ಆರು ಕೋಟಿ ಜನರಲ್ಲಿ ಶೇ. 60 ಮತದಾರರು ಇದ್ದಾರೆ, ಅವರಲ್ಲಿ ಶೇ. 55 ಜನ ತಮ್ಮ ಮತ ಚಲಾಯಿಸಿದರು, ಹಾಗೆ ಚಲಾಯಿಸಿದ ಮತಗಳಲ್ಲಿ ಬಿಜೆಪಿ ಪಕ್ಷಕ್ಕೆ ಶೇ. 34 ದಕ್ಕಿದ್ದವು ಎಂದಿಟ್ಟುಕೊಂಡು ಲೆಕ್ಕ ಹಾಕಿದರೆ ಬಿಜೆಪಿ ಪಕ್ಷಕ್ಕೆ ಸಿಕ್ಕಿದ್ದು 60 ಲಕ್ಷ ಜನರ ಬೆಂಬಲ. ಅಷ್ಟು ಮಾತ್ರವಲ್ಲ ಅವರಲ್ಲಿ ವಿವಿಧ ಜಾತಿ ಮತ್ತು ವಿವಿಧ ಕಾರಣಗಳಿಗೆ ಬಿಜೆಪಿಯನ್ನು ಬೆಂಬಲಿಸಿದ್ದರು ಎಂದಿಟ್ಟುಕೊಂಡರೆ, ಈಗ ತಾನು "ಲಿಂಗಾಯತ ಜಾತಿಗೆ ಸೇರಿದವನು, ನನಗೆ ಮುಖ್ಯಮಂತ್ರಿ ಸ್ಥಾನವನ್ನು ನಿರಾಕರಿಸುವ ಮೂಲಕ ಇಡೀ ಲಿಂಗಾಯತ ಸಮುದಾಯಕ್ಕೆ ಅನ್ಯಾಯ ಮಾಡಲಾಗಿದೆ" ಎಂದೇ ಹೇಳುತ್ತಿರುವ ಯಡಿಯೂರಪ್ಪನಿಗೆ ಆ 60 ಲಕ್ಷ ಮತದಾರರಲ್ಲಿ ಒಂದೆರಡು ಲಕ್ಷ ಜನರ ಬೆಂಬಲವಿರಬಹುದಷ್ಟೇ!



ಹಾಗೆ ನೋಡಿದರೆ ಬಿಜೆಪಿಯ ಕೋಮುವಾದಿ ಸಿದ್ಧಾಂತಕ್ಕಿಂತ, ತೋರಿಕೆಗಾದರೂ ಜಾತ್ಯತೀತ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಪಕ್ಷಕ್ಕೆ ಶೇ. 37, ಜನತಾದಳಕ್ಕೆ ಶೇ. 20 ಹಾಗೂ ಇನ್ನುಳಿದ ಅಭ್ಯರ್ಥಿಗಳಿಗೆ ಶೇ. ನಾಲ್ಕು ಮತಗಳು ದಕ್ಕಿದ್ದವು (ಒಟ್ಟಾರೆ 61% ಮತಗಳು). ಅಂದು ನೀಡಿದ ಜನಮತ ಯಾವ ಪಕ್ಷದ ಪರವಾಗಿಲ್ಲದಿದ್ದರೂ ಸ್ಪಷ್ಟವಾಗಿ ಜಾತ್ಯತೀತತೆಯ ಪರವಾಗಿತ್ತೆಂದೇ ಹೇಳಬಹುದು. ಈ ಲೆಕ್ಕಾಚಾರವನ್ನಿಟ್ಟುಕೊಂಡು ನೋಡಿದರೆ, ಇವತ್ತು 'ವಚನ ಭ್ರಷ್ಟತೆ' ಬಗ್ಗೆ ಚೀರಾಡುತ್ತಿರುವ ಬಿಜೆಪಿ ಪಕ್ಷವೇ ಕಳೆದ ಇಪ್ಪತ್ತು ತಿಂಗಳಿನಿಂದ ಅಕ್ರಮವಾಗಿ ಅಧಿಕಾರವನ್ನು ಅನುಭವಿಸುತ್ತಾ ರಾಜ್ಯದ ಲಕ್ಷಾಂತರ ಜನರು ನೀಡಿದ್ದ 'ಜನಮತ'ಕ್ಕೆ ದ್ರೋಹವೆಸಗಿದೆ ಎಂದೇ ತರ್ಕಿಸಬಹುದು.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನಮತಕ್ಕೇ ಮರ್ಯಾದೆ ನೀಡದ ಪಕ್ಷಕ್ಕೆ ವಚನ ಭ್ರಷ್ಟತೆ ಬಗ್ಗೆ ಮಾತನಾಡುವ ನೈತಿಕತೆಯಾದರೂ ಹೇಗೆ ಇರುತ್ತದೆ?

ಇನ್ನು ಇಪ್ಪತ್ತು ತಿಂಗಳ ಕಾಲ ಅಕ್ರಮವಾಗಿ ಅಧಿಕಾರವನ್ನು ಎಂಜಾಯ್ ಮಾಡುತ್ತಾ ಬಂದ ಬಿಜೆಪಿ ನಾಯಕರು ಕಡಿದು ಕಟ್ಟಿಹಾಕಿದ್ದಾದರೂ ಏನನ್ನು? ಯಡಿಯೂರಪ್ಪನವರು ತಾವು ರೈತರಿಗೆ ಶೇ. ನಾಲ್ಕರ ಬಡ್ಡಿ ದರದಲ್ಲಿ ಸಾಲ ನೀಡುವ ಯೋಜನೆಯ ಹರಿಕಾರ ಎಂದು ಎಲ್ಲೆಡೆ ಹೇಳಿಕೊಂಡು ಬರುತ್ತಿದ್ದಾರೆ ಮಾತ್ರವಲ್ಲ ಇವತ್ತು ಭಾನುವಾರ ನಡೆದ 'ರಾಜಭವನ ಚಲೋ' ಎಂಬ ಕಾರ್ಯಕ್ರಮದ ಜಾಹೀರಾತಿನಲ್ಲೂ ಅದನ್ನೇ ಹೇಳಿದ್ದಾರೆ. ಆದರೆ ವಾಸ್ತವವಾಗಿ ಈ ಹಣವೆಲ್ಲಾ ಬೆಳೆ ವಿಮೆ ಲೆಕ್ಕದಲ್ಲಿ ರದ್ದಾಗಿ ಬೀದರ್‌ನಂತಹ ಜಿಲ್ಲೆಯಿಂದಲೇ ಕನಿಷ್ಠ ಮೂರು ಕೋಟಿ ರೂಪಾಯಿಗಳು ರಾಜ್ಯ ಖಜಾನೆಗೆ ವಾಪಸ್ಸು ಬಂದಿದೆ. ಒಂದು ಅಂದಾಜಿನ ಪ್ರಕಾರ ರಾಜ್ಯಾದ್ಯಂತ ಸುಮಾರು ಇನ್ನೂರು ಕೋಟಿ ರೂಪಾಯಿಗಳನ್ನು ಖಜಾನೆಗೆ ಹಿಂದಿರುಗಿಸಲಾಗಿದೆ. ಇದೆಲ್ಲದರ ಅರ್ಥ ಏನೆಂದರೆ ಯಡಿಯೂರಪ್ಪ ಕಡಿಮೆ ದರದಲ್ಲಿ ಸಾಲ ಬಡ್ಡಿ ಎಂದು ಪುಕ್ಕಟೆ ಪ್ರಚಾರ ಪಡೆಯುತ್ತಿರುವಾಗಲೇ ಸಂಕಷ್ಟದಲ್ಲಿರುವ ರೈತರಿಗೆ ಸಿಗಬೇಕಿದ್ದ 200 ಕೋಟಿ ರೂಪಾಯಿಗಳು ಅವರಿಗೆ ತಲುಪದೆ ರಾಜ್ಯ ಸರ್ಕಾರಕ್ಕೆ ಹಿಂದುರಿಗಿದೆ. (ವಾಸ್ತವವಾಗಿ ಖರ್ಚಾಗಿರುವ ಹಣವೆಂದರೆ ಯಡ್ಡಿಯನ್ನು ಹಾಡಿ ಹೊಗಳಲು ಜಾಹೀರಾತುಗಳಿಗೆ ನೀಡಿದ ಹಣ ಮಾತ್ರ!) ಯಡಿಯೂರಪ್ಪ ನಿಜವಾಗಲೂ ಆರ್ಥಿಕ ತಜ್ಞನಾಗಿದ್ದರೆ, ದಕ್ಷ ಆಡಳಿತಗಾರನಾಗಿದ್ದರೆ ಹೀಗೆ ರೈತರಿಗೆ ಬೆಣ್ಣೆ ನೀಡುತ್ತೇನೆಂದು ಹೇಳುತ್ತಲೇ ಅವರಿಗೆ ಸುಣ್ಣ ನೀಡುತ್ತಿರಲಿಲ್ಲ.

ಅಂದಹಾಗೆ, ನಿನ್ನೆಯ ಜಾಹೀರಾತಿನಲ್ಲಿ ಯಡಿಯೂರಪ್ಪನನ್ನು ದಲಿತರ ನಾಯಕ, ದುರ್ಬಲ ವರ್ಗದವರ ಕಣ್ಮಣಿ ಎಂದೆಲ್ಲಾ ವರ್ಣಿಸಲಾಗಿದೆ. ಆದರೆ ತನಗೆ ಅಧಿಕಾರ ಸಿಕ್ಕಿದ ದಿನವೇ ತನ್ನ ವಿಧಾನಸೌಧದ ಕೊಠಡಿಯಿಂದ ಅಂಬೇಡ್ಕರ್‌ರವರ ಚಿತ್ರವನ್ನು ತೆಗೆದು ಹಾಕಲು ಈತ ಯತ್ನಿಸಿದ್ದನ್ನು ಯಾರೂ ಮರೆತಿಲ್ಲ.

ಯಡಿಯೂರಪ್ಪನ ಮಾತು ಬದಿಗಿರಲಿ. ಸಮ್ಮಿಶ್ರ ಸರ್ಕಾರದಲ್ಲಿದ್ದ ಇತರೆ ಬಿಜೆಪಿ ಸಚಿವರು ಮಾಡಿದ್ದೇನು? ಒಂದೆಡೆ ಆರ್. ಅಶೋಕ್ ಎಂಬಾತ ತನ್ನ ಪುಂಡ ಹಿಂಬಾಲಕರಿಗೆಲ್ಲ ಅಪಾರ ಬೆಲೆಯ ಬಗರ್‌ಹುಕುಂ ಭೂಮಿಯನ್ನು ಅಕ್ರಮವಾಗಿ ಹಂಚಿದರೆ, ಇನ್ನೊಂದೆಡೆ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಎಂಬ ರಿಯಲ್ ಎಸ್ಟೇಟ್ ಡೀಲರ್ ಬೇನಾಮಿ ಕಂಪನಿಗಳ ಹೆಸರಲ್ಲಿ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ನೂರಾರು ಎಕರೆ ಭೂಮಿಯನ್ನು ನುಂಗಿದ್ದಾನೆ. ಡಿ.ಎಚ್. ಶಂಕರಮೂರ್ತಿ ಶಿಕ್ಷಣ ವಲಯವನ್ನೇ ಚೆಡ್ಡಿಮಯ ಮಾಡಲು ಯತ್ನಿಸಿದರೆ, ಉಳಿದವರು ಎಲ್ಲಕ್ಕೂ ಕೇಸರಿ ಬಣ್ಣಹಚ್ಚಲು ಯತ್ನಿಸಿದವರೇ... ಇಪ್ಪತ್ತು ತಿಂಗಳ ಕಾಲ ಇವರೆಲ್ಲರು ಅಧಿಕಾರದಲ್ಲಿದ್ದಾಗ ಯಶಸ್ವಿಯಾಗಿ ನಡೆಸಿದ್ದು ಒಂದನ್ನು ಮಾತ್ರ: ಮನುಸ್ಮೃತಿಯೇ ಈ ದೇಶದ ಸಂವಿಧಾನವಾಗಬೇಕು ಎಂದೂ, ಈ ದೇಶದ ಶತ್ರುಗಳು ಇಲ್ಲಿ ವಾಸಿಸುವ ಮುಸಲ್ಮಾನರು ಮತ್ತು ಕ್ರೈಸ್ತರು ಎಂದೂ ಹೇಳಿದ್ದ ಗೋಲ್ವಾಲ್ಕರ್ ಎಂಬ ಮನುವಾದಿಯ ಹೆಸರಿನಲ್ಲಿ ವಿರಾಟ್ ಹಿಂದೂ ಸಮಾಜೋತ್ಸವನ್ನು. ಅದೂ ಕೂಡ ಈ ದೇಶದ ಬಹುಸಂಖ್ಯಾತ ಜನರಿಗೆ ಎಸಗಿದ ದ್ರೋಹವೇ ಆಗಿತ್ತು ಎಂಬುದರಲ್ಲಿ ಎರಡು ಮಾತಿಲ್ಲ.

ಕುಮಾರಸ್ವಾಮಿ ಈ ರಾಜ್ಯದ ಜನರನ್ನು ಕೇಳಿ, ಅವರ ಅಭಿಪ್ರಾಯ ಪಡೆದು 20 ತಿಂಗಳ ನಂತರ ಮುಖ್ಯಮಂತ್ರಿ ಸ್ಥಾನವನ್ನು ಯಡಿಯೂರಪ್ಪನಿಗೆ ನೀಡುವುದಾಗಿ 'ಜನಪರವಾಗಿ' ಮಾತು ಕೊಟ್ಟಿರಲಿಲ್ಲ. ಜನರಂತೂ ಮೊದಲೇ ಬಿಜೆಪಿಗಳಿಗೆ ಜನ ಮತವನ್ನು ನೀಡಿರಲಿಲ್ಲ. ಪ್ರಸ್ತುತ ರಾಜಕೀಯ ಹೇಗಿದೆ ಎಂದರೆ 'ಕೊಟ್ಟೋನು ಕೊಡಂಗಿ, ಇಸ್ಕಂಡೋನು ಈರಭದ್ರ' ಎಂಬಂತಾಗಿದೆ. ಕೊಡಂಗಿ ಕುಮಾರಸ್ವಾಮಿ ಬಿಜೆಪಿಗಳಿಗೆ 20 ತಿಂಗಳ ಕಾಲ ಅರ್ಧ ಅಧಿಕಾರ ನೀಡಿದ್ದ, ಈರಭದ್ರ ಯಡಿಯೂರಪ್ಪ ಅದರ ಮಜಾವನ್ನು ಅನುಭವಿಸಿದ್ದ. ಈಗ ಅದೆಲ್ಲ ಇಲ್ಲ, ಅಷ್ಟೆ!

* * * * * * *

ರಾಜಕಾರಣಿಗಳ ಈ ಅಬ್ಬರದ ನಡುವೆ ನಮ್ಮಂತಹ ನಿಜವಾದ ಜಾತ್ಯತೀತರ ಪರಿಸ್ಥಿತಿ ಹೇಗಾಗಿದೆ ನೋಡಿ... ಅಧಿಕಾರದ ಅರ್ಧ ಭಾಗವನ್ನಷ್ಟೇ ಪಡೆದಿದ್ದರೂ ಕಳೆದ 20 ತಿಂಗಳು ಚೆಡ್ಡಿಗಳು ರಾಜ್ಯದ ಹಲವಾರು ಕಡೆ ತಮ್ಮ ಅಟ್ಟಹಾಸವನ್ನು ಮೆರೆದಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದ ಕಾಲೇಜಿನಲ್ಲಿ ಉಪನ್ಯಾಸಕರಿಗೆ ಮಾನಸಿಕ ಹಿಂಸೆ ನೀಡುವುದರಿಂದ ಹಿಡಿದು, ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆಸುತ್ತಾ, ಕೊನೆಗೆ ರಾಮ ಸೇತುವೆಗೆ ಸಂಬಂಧಿಸಿದಂತೆ ಇಬ್ಬರು ಅಮಾಯಕರ ಕಗ್ಗೊಲೆಗೂ ಕಾರಣರಾಗಿದ್ದಾರೆ. ಇಂಥವರಿಗೆ, ಅದರಲ್ಲೂ ಕರ್ನಾಟಕವನ್ನು ಮತ್ತೊಂದು ಗುಜರಾತ್ ಮಾಡುವುದಾಗಿಯೂ, ಬಾಬಾಬುಡನ್‌ಗಿರಿ ಪ್ರಕರಣವನ್ನು ದಕ್ಷಿಣದ ಅಯೋಧ್ಯೆಯನ್ನಾಗಿಸುವುದಾಗಿಯೂ ಘೋಷಿಸಿರುವ ಬಿಜೆಪಿಗಳಿಗೆ, ರಾಜ್ಯದ ಮುಖ್ಯಮಂತ್ರಿ ಹುದ್ದೆ ಮತ್ತು ಗೃಹ ಇಲಾಖೆಯಂತಹ ಪ್ರಮುಖ ಹುದ್ದೆಗಳು ದಕ್ಕಿದರೆ ಇನ್ನೆಂತಹ ಕರಾಳ ದಿನಗಳು ಕರ್ನಾಟಕಕ್ಕೆ ಕಾದಿದೆಯೋ ಎಂಬ ಆತಂಕ ನಮ್ಮದಾಗಿತ್ತು. ಈಗ ತಾತ್ಕಾಲಿಕವಾಗಿ ಆ ಆತಂಕ ನಿವಾರಣೆಯಾಗಿದೆ. ಆದರೆ ಇದೆಷ್ಟು ದಿನ? ಅಕಸ್ಮಾತ್ ಸದ್ಯದಲ್ಲೇ ಚುನಾವಣೆಗಳು ಘೋಷಣೆಯಾದರೆ "ನಮ್ಮನ್ನು ವಂಚಿಸಿದರು, ಲಿಂಗಾಯತರಿಗೆ ದ್ರೋಹ ಬಗೆದರು" ಎಂದು ಮೊಸಳೆ ಕಣ್ಣೀರಿಡುತ್ತಾ, ಪ್ರಚಾರ ಮಾಡುತ್ತಾ ಅನುಕಂಪೆಯ ಮೇಲೆ ಚೆಡ್ಡಿಗಳು ಬಹುಸಂಖ್ಯೆಯಲ್ಲಿ ಗೆಲ್ಲುವ ಅಪಾಯವಿದೆ.

ಅಂತಹ ಅಪಾಯದಿಂದ ರಾಜ್ಯವನ್ನು ರಕ್ಷಿಸುವುದು ಹೇಗೆ ಎಂಬ ಚಿಂತೆ ನಮ್ಮೆಲ್ಲರದ್ದಾಗಬೇಕಿದೆ ಮಾತ್ರವಲ್ಲ, ಆ ನಿಟ್ಟಿನಲ್ಲಿ ಬಿಜೆಪಿಯ ಅಪಾಯಕಾರಿ ಸಿದ್ಧಾಂತ, ಅದರ ಅಮಾನವೀಯತೆ, ಅದರ ಆಳದಲ್ಲಿ ಅಡಗಿರುವ ಜಾತಿ ದೌರ್ಜನ್ಯ.... ಇವೆಲ್ಲವು ಇನ್ನಷ್ಟು ತೀಕ್ಷ್ಣವಾಗಿ ಜನರ ಮನಮುಟ್ಟುವಂತೆ ನೋಡಿಕೊಳ್ಳಬೇಕಿದೆ.....

■ ಗೌರಿ ಲಂಕೇಶ್



ಚೆಡ್ಡಿಗಳ ದಾಂಧಲೆ ವಿರುದ್ಧ ಪ್ರತಿಭಟಿಸುತ್ತಿರುವ ಮಂಗಳೂರು ಯೂನಿವರ್ಸಿಟಿ ಕಾಲೇಜಿನ ಅಧ್ಯಾಪಕರು

ಚೆಡ್ಡಿ ಶಿಕ್ಷಕರಿಗೆ ಬೀಳಲಿದೆ ಗೂಸಾ

ಮಂಗಳೂರಿನ ಕರ್ನಾಟಕ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲ ವಿಜಯ್‌ಕುಮಾರ್ ಎಂಬಾತ ವಿದ್ಯಾರ್ಥಿನಿಯರೊಂದಿಗೆ ಅಪಾಪೋಲಿಯಂತೆ ಅಸಭ್ಯವಾಗಿ ವರ್ತಿಸುತ್ತಿದ್ದರೆ, ಮಂಗಳೂರು ಯೂನಿವರ್ಸಿಟಿ ಕಾಲೇಜಿನಲ್ಲಿ ಹಿಂದಿ ಮುಖ್ಯಸ್ಥ ಮುರಳೀಧರ ನಾಯಕ್ ಸಿಕ್ಕಿದ್ದನ್ನೆಲ್ಲ ಮೇಯುವ ಛಾಳಿಯನ್ನು ರೂಢಿಸಿಕೊಂಡಿದ್ದಾನೆ. ಈ ಇಬ್ಬರು ಬೋಧಕ ಮಹಾಶಯರುಗಳು ಶಿಕ್ಷಣವೆಂಬ ಕರ್ತವ್ಯವನ್ನೇ ಮೂರು ಕಾಸಿಗೆ ಹರಾಜಾಕುತ್ತಿದ್ದಾರೆ. ಈವಾಗ ಇವರಿಬ್ಬರ ವಿರುದ್ಧ ಆಯಾ ಕಾಲೇಜುಗಳ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳೇ ಸೂಕ್ತ ಪಾಠ ಕಲಿಸಲು ತಯಾರಾಗುತ್ತಿರುವುದನ್ನು ನೋಡಿದರೆ ಇವರಿಬ್ಬರಿಗೂ ಗೂಸಾ ಬೀಳುವುದು ಗ್ಯಾರಂಟಿಯಾದಂತಿದೆ.

ವಿದ್ಯಾರ್ಥಿಗಳನ್ನು ತಿದ್ದಿ ತೀಡಿ ಸರಿದಾರಿಗೆ ತರಬೇಕಾಗಿರುವ ಗುರುವೇ ಅನೀತಿಯ ದಾರಿ ಹಿಡಿದರೆ ಏನಾಗುತ್ತದೋ ಅದೇ ಮಂಗಳೂರಿನಲ್ಲಿ ನಡೆಯಲಾರಂಭಿಸಿದೆ. ಹೀಗೆ ದಾರಿ ತಪ್ಪಿದ 'ಗುರು'ಗಳಿಗೆ ವಿದ್ಯಾರ್ಥಿಗಳೇ ತಿರುಮಂತ್ರ ಹೇಳಹೊರಟಿದ್ದಾರೆ.

ಒಂದೆಡೆ ಕರ್ನಾಟಕ ಪಾಲಿಟೆಕ್ನಿಕ್‌ನ ಪ್ರಾಂಶುಪಾಲನಾಗಿಯೂ ವಿದ್ಯಾರ್ಥಿನಿಯರೊಂದಿಗೆ ಅಪಾಪೋಲಿಯಂತೆ ವರ್ತಿಸುತ್ತಿದ್ದವನು ಬಿ. ವಿಜಯಕುಮಾರ್. ಈತ ತನ್ನ ಕಾಲೇಜನ್ನು ತುಘಲಕ್ ದರಬಾರಿನಂತೆ ನಡೆಸುತ್ತಿದ್ದರಿಂದ ಸಹೋದ್ಯೋಗಿಗಳಿಂದಲೂ 'ಛಿ, ಥೂ' ಎಂದು ಉಗಿಸಿಕೊಳ್ಳುತ್ತಾನೆ.

ಇನ್ನೊಂದೆಡೆ ಮಂಗಳೂರು ಯೂನಿವರ್ಸಿಟಿ ಕಾಲೇಜಿನಲ್ಲಿ ಹಿಂದಿ ಮುಖ್ಯಸ್ಥನಾಗಿದ್ದು ಸಿಕ್ಕಿದ್ದನ್ನೆಲ್ಲ ಮೇಯುವ ಛಾಳಿಯನ್ನು ರೂಢಿಸಿಕೊಂಡಿರುವ ಮುರಳೀಧರ ನಾಯಕ್ ಎಂಬುವವನಿದ್ದಾನೆ. ಈತ ತನ್ನ ಎಲ್ಲ ಹಲಾಲುಕೋರ ಪ್ರವೃತ್ತಿಗಳ ರಕ್ಷಣೆಗೆಂದೇ ಎಬಿವಿಪಿ ಎಂಬ ಪುಂಡರ ಗುಂಪನ್ನು ಪೋಷಿಸಿಕೊಂಡು ಬಂದಿದ್ದಾನೆ. ಈ ಇಬ್ಬರು ಬೋಧಕ ಮಹಾಶಯರುಗಳು ತಮ್ಮ ಚಂಡ-ಪ್ರಚಂಡತೆಯಿಂದ ಶಿಕ್ಷಕ ವೃತ್ತಿ ಮತ್ತು ಶಿಕ್ಷಣವೆಂಬ ಕರ್ತವ್ಯವನ್ನೇ ಮೂರು ಕಾಸಿಗೆ ಹರಾಜಾಕುತ್ತಿದ್ದಾರೆ.

ಈವಾಗ ಇವರಿಬ್ಬರ ವಿರುದ್ಧ ಆಯಾ ಕಾಲೇಜುಗಳ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳೇ ಸೂಕ್ತ ಪಾಠ ಕಲಿಸಲು ತಯಾರಾಗುತ್ತಿದ್ದಾರೆ.

ಪೋಲಿ ಪ್ರಾಂಶುಪಾಲ

ಮಂಗಳೂರು ಕರ್ನಾಟಕ ಪಾಲಿಟೆಕ್ನಿಕ್‌ನ ವಿದ್ಯಾರ್ಥಿಗಳು ಸೆಪ್ಟೆಂಬರ್ ಮೊದಲ ವಾರದಲ್ಲಿ ತಮ್ಮ ತರಗತಿಗಳನ್ನು ಬಹಿಷ್ಕರಿಸಿ ಧರಣಿ ನಡೆಸಿದ್ದರು. ಕಾಲೇಜು ಹಾಸ್ಟೆಲ್‌ನ ವಿದ್ಯಾರ್ಥಿಗಳಾದ ಮಹಂತ ಮತ್ತು ಪ್ರಶಾಂತ್ ಎಂಬುವವರು ರ್‍ಯಾಗಿಂಗ್‌ನಲ್ಲಿ ತೊಡಗಿದ್ದರು ಎಂದು ಆರೋಪಿಸಿದ ಪ್ರಾಂಶುಪಾಲ ಅವರಿಬ್ಬರನ್ನು ಕಾಲೇಜಿನಿಂದ ಡಿಬಾರ್ ಮಾಡಿದ್ದೇ ವಿದ್ಯಾರ್ಥಿಗಳ ಆಕ್ರೋಶಕ್ಕೆ ಕಾರಣವಾಗಿತ್ತು.

ಕಳೆದ 22 ವರ್ಷಗಳಿಂದ ಕರ್ನಾಟಕ ಪಾಲಿಟೆಕ್ನಿಕ್‌ನಲ್ಲೇ ಗೂಟ ಬಡಿದು ಕೂತಿರುವ ಪ್ರಾಧ್ಯಾಪಕ ವಿಜಯಕುಮಾರ್ ಕಳೆದ ಎರಡು ವರ್ಷಗಳಿಂದ ಪ್ರಾಂಶುಪಾಲ ಕೂಡ ಆಗಿದ್ದಾನೆ. ವಿದ್ಯಾರ್ಥಿಗಳಿಗೆ ಪಾಠ ಹೇಳುವ ನೆಪದಲ್ಲಿ ಬೇರೆಲ್ಲವನ್ನೂ ಮಾಡುವ ಈತನ ವಿರುದ್ಧ ಈ ಮೊದಲೇ ಅವ್ಯಕ್ತ ಆಕ್ರೋಶವು ವಿದ್ಯಾರ್ಥಿ ವಲಯದಲ್ಲಿ ಬೂದಿಮುಚ್ಚಿದ ಕೆಂಡದಂತೆ ಮನೆ ಮಾಡಿತ್ತು. ಅಂತಹ ಪರಿಸ್ಥಿತಿಯುಲ್ಲಿ ವಿಜಯಕುಮಾರನ ಈತನ ಆಟಾಟೋಪಗಳನ್ನು ವಿರೋಧಿಸುತ್ತಾ, ಹಾಸ್ಟೆಲ್‌ನೊಳಗಿನ ಅವ್ಯವಸ್ಥೆಗಳನ್ನು ಪ್ರಶ್ನಿಸುತ್ತಾ ಈತನ ಅಡ್ಡಕಸುಬಿಗೆ ಈ ಇಬ್ಬರು ವಿದ್ಯಾರ್ಥಿಗಳು ತೊಡಕಾಗಿದ್ದರು. ಇವರಿಬ್ಬರ ಮೇಲೆ ಕೆಂಗಣ್ಣಿಟ್ಟಿದ್ದ ವಿಜಯಕುಮಾರ್ ಒಂದು ದಿನ ಇವರಿಬ್ಬರು ಹಾಸ್ಟೆಲ್‌ನಲ್ಲಿ ಅಂಗಿ ತೆಗೆದು ಬರಿಮೈಲಿ ನಿಂತದ್ದನ್ನೇ ನೆಪ ಮಾಡಿಕೊಂಡ. ಬಲವಂತದಿಂದ ಇತರೆ ವಿದ್ಯಾರ್ಥಿಗಳಿಂದ ಕಂಪ್ಲೇಟು ಬರೆಸಿಕೊಂಡು ಅವರಿಬ್ಬರನ್ನು ಡಿಬಾರ್ ಮಾಡಿದ.

ಮೊದಲೇ ಪ್ರಾಂಶುಪಾಲನ ಬಗ್ಗೆ ಅಸಹನೆಯಿಂದ ಕುದಿಯುತ್ತಿದ್ದ ವಿದ್ಯಾರ್ಥಿಗಳು ಸ್ಫೋಟಗೊಂಡು ಪ್ರತಿಭಟನೆ ಪ್ರಾರಂಭಿಸಿದರು.

ವೃತ್ತಿ ಧರ್ಮಕ್ಕೆ ದೋಖಾ

ಸರಿಸುಮಾರು 1200 ವಿದ್ಯಾರ್ಥಿಗಳು ವಿವಿಧ ತಾಂತ್ರಿಕ ತರಬೇತಿಗಳನ್ನು ಪಡೆಯುತ್ತಿರುವ ಮಂಗಳೂರು ಪಾಲಿಟೆಕ್ನಿಕ್‌ನಲ್ಲಿ ಶೇಕಡ 60 ಸಿಬ್ಬಂದಿಗಳ ಕೊರತೆ, ಬೋಧಕರ ಕೊರತೆ, ಕಂಪ್ಯೂಟರ್-ಎಲೆಕ್ಟ್ರಾನಿಕ್ ಲ್ಯಾಬ್‌ಗಳ ಕೊರತೆ..... ಹೀಗೆ ಕೊರತೆಗಳದ್ದೇ ದೊಡ್ಡ ಪಟ್ಟಿ ಇದೆ. ಕಳೆದ ಎರಡು ವರ್ಷಗಳಿಂದ ಪ್ರಾಂಶುಪಾಲನಾಗಿ ತನ್ನ ಸಹೋದ್ಯೋಗಿಗಳ ಜತೆ ಸಮನ್ವಯತೆಯನ್ನು ಸಾಧಿಸದೆ, ವಿದ್ಯಾರ್ಥಿಗಳ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸದೇ, ಬರೀ ಕಮಾಯಿಯಲ್ಲೇ ವಿಜಯಕುಮಾರ್ ಕಾಲ ಕಳೆದಿದ್ದಾನೆ.

ಈತ ಪ್ರತಿ ತಿಂಗಳು ಪಡೆಯುವ 30,000 ಸಂಬಳಕ್ಕಾದರೂ ವಿದ್ಯಾರ್ಥಿಗಳಿಗೆ ಸರಿಯಾಗಿ ಪಾಠವಹಾದಿದ್ದರೆ ಪರವಾಗಿರಲಿಲ್ಲ, ಆದರೆ ಈತನ ತುಘಲಕ್ ದರ್ಬಾರಿನಲ್ಲಿ ಪಾಠ ಮಾಡಲಿ, ಮಾಡದಿರಲಿ ತಿಂಗಳಿಗೆ ಸಂಬಳ ಕರೆಕ್ಟಾಗಿ ಬರುತ್ತದೆ. ಪಾಪ ಈತ ತನ್ನ ಸಮಯವನ್ನು ಹೇಗೆ ಕಳೆಯಬೇಕು. ಆದಕ್ಕೆ ಆತ ಹುಡುಕಿಕೊಂಡಿರುವುದೇ ವಿಶೇಷ ಡಿಪ್ಲೋಮಾ ತರಗತಿಗಳು.

ನಿರಂತರ ಶಿಕ್ಷಣದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೆಲವೊಂದು ವಿಶೇಷ ಕೋರ್ಸ್‌ಗಳ ಉಪಕೇಂದ್ರಗಳನ್ನು ನಡೆಸಲು ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಕಾನೂನಿನ ಅನುಮತಿ ಇದೆ. ಇದರನ್ವಯ ಮಂಗಳೂರು ವಿಶೇಷ ಆರ್ಥಿಕ ವಲಯ (M.S.E.Z)ದ ನಿರಾಶ್ರಿತ ಕುಟುಂಬಗಳಿಗೆ ತಾಂತ್ರಿಕ ತರಬೇತಿಗಳನ್ನು ಮಂಗಳೂರು ಪಾಲಿಟೆಕ್ನಿಕ್‌ನಲ್ಲಿ ನಡೆಸಲಾಗುತ್ತಿದೆ. O.N.G.C. ಪ್ರಾಯೋಜಿತ ಈ ಎರಡೂವರೆ ವರ್ಷದ ತರಬೇತಿಗೆ ಆ ಸಂಸ್ಥೆಯು 1 ಕೋಟಿ 36 ಲಕ್ಷ ರೂಪಾಯಿಗಳನ್ನು ನೀಡುತ್ತದೆ. ಕೆಮಿಕಲ್ ಇಂಜಿನಿಯರಿಂಗ್, ಮೆಕಾನಿಕಲ್ ಇಂಜಿನಿಯರಿಂಗ್, ಇಲೆಕ್ಟ್ರೋನಿಕ್ ಇಂಜಿನಿಯರಿಂಗ್ ಈ ಮೂರು ಕೋರ್ಸುಗಳಿಗೆ 5 ಬ್ಯಾಚುಗಳಲ್ಲಿ, ತಲಾ 65 ಜನರಂತೆ 325 ಜನ O.N.G.C. ನಿರಾಶ್ರಿತರು ತರಬೇತಿ ಪಡೆಯುತ್ತಿದ್ದಾರೆ.

ಆದರೆ ಇಂತಹ ವಿಶೇಷ ಕೋರ್ಸುಗಳನ್ನು ನಡೆಸುವುದಕ್ಕೆ ಹಲವು ನಿಯಮಗಳಿವೆ. ಉದಾಹರಣೆಗೆ ಇದಕ್ಕೆ ತಾಂತ್ರಿಕ ಇಲಾಖೆಯ ನಿರ್ದೇಶಕರ ಅನುಮತಿ ಪಡೆಯಬೇಕು, ಈ ಪ್ರಾಜೆಕ್ಟಿಗೆಂದು ಸದರಿ ಕಂಪೆನಿಯಿಂದ ಪಡೆದ ಹಣದಲ್ಲಿ ಶೇಕಡ 50 ಅನ್ನು ಠೇವಣಿ ಇಡಬೇಕು, ಭೋದಕರು ಗೌರವಧನವನ್ನು ಐದು ಸಾವಿರಕ್ಕಿಂತ ಹೆಚ್ಚಿಗೆ ಪಡೆಯಬಾರದು.... ಆದರೆ ಹಣಕ್ಕಾಗಿ ಯಾವ ಚರಂಡಿಗೂ ಕೈಹಾಕಬಲ್ಲ ವಿಜಯಕುಮಾರ್ ಈ ಎಲ್ಲಾ ನಿಯಮಗಳನ್ನೂ ಗಾಳಿಗೆ ತೂರಿ 12,000 ಗೌರವಧನ ಪಡೆಯುತ್ತಾನೆ. ಸಾಲದ್ದಕ್ಕೆ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ ಉಪನ್ಯಾಸಕಿಯಾಗಿರುವ ತನ್ನ ಹೆಂಡತಿ ಜ್ಞಾನೇಶ್ವರಿಗೂ ವಿಶೇಷ ಬೋಧನೆಗೆ ಅವಕಾಶ ಕಲ್ಪಿಸಿ ಗಂಟೆಗೆ 300 ರೂಪಾಯಿ ಗಳಿಸಲು ಅವಕಾಶ ಕಲ್ಪಿಸಿದ್ದಾನೆ.

ಈತನ ಈ ಉಪವೃತ್ತಿ ಮತ್ತು ವಿಶೇಷ ಕೋರ್ಸುಗಳಿಂದಾಗಿ ರೆಗ್ಯುಲರ್ ಕ್ಲಾಸ್‌ಗೆ ಬರುವ ವಿದ್ಯಾರ್ಥಿಗಳಿಗೆ ಶಿಕ್ಷಣವೆಂಬುದು ಅರ್ಧಚಂದ್ರದಂತಾಗಿದೆ. ಏಕೆಂದರೆ ಬೆಳಿಗ್ಗೆ 8.30 ರಿಂದ 4.30 ರ ತನಕ ದಿನವಿಡೀ ತರಗತಿಗಳಿದ್ದು, ಮಧ್ಯಾಹ್ನ 2.00 ಗಂಟೆಯಿಂದ ಸಂಜೆ 7.30 ತನಕ ಈ ನಿರಾಶ್ರಿತರ ವಿಶೇಷ ತರಗತಿಗಳನ್ನು ನಡೆಸುವುದರಿಂದ ಅವರ ಕಲಿಕೆಗೆ ಕತ್ತರಿಬಿದ್ದಿದೆ. ಇದನ್ನೆಲ್ಲಾ ನೇರವಾಗಿ ಪ್ರಶ್ನಿಸಿದ್ದೇ ಆದರೆ ಬಾಂಡ್ ಬರೆಸುವುದು, ಪ್ರಾಜೆಕ್ಟ್‌ನಲ್ಲಿ ಫೇಲ್ ಮಾಡೋದು, ಮಾರ್ಕ್ಸ್‌ಕಾರ್ಡ್ ಕೊಡದೇ ಸತಾಯಿಸುವುದು, ವಿಜಯಕುಮಾರ ವಿಧಿಸುವ ಇಂತಹ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ.

ಮಂಗಳೂರು

ಪೋಲಿ ಪುರಾಣ

ವಿಜಯಕುಮಾರನಿಗೆ ಹೆಂಗಸರನ್ನು ಕಂಡರೆ ಅದ್ಯಾಕೋ ಮನಸ್ಸು ಸ್ತಿಮಿತದಲ್ಲಿರೋದಿಲ್ಲ, ಹಿಂದೊಮ್ಮೆ ಪರೀಕ್ಷಾ ತಪಾಸಣಾಧಿಕಾರಿಯಾಗಿ ನಿಯುಕ್ತನಾದ ಈತ ಕೆ.ಪಿ.ಟಿ.ಯ ವಿದ್ಯಾರ್ಥಿಗಳನ್ನು ತಪಾಸಣೆ ಮಾಡುವ ನೆಪದಲ್ಲಿ ಕಾಲು ಎಳೆದು ಮುಟ್ಟಬಾರದ್ದೆಲ್ಲಾ ಮುಟ್ಟಿ ಎಲ್ಲರೆದುರೇ ಅಸಭ್ಯವಾಗಿ ವರ್ತಿಸಿದ್ದ. ಇದರ ಬಗ್ಗೆ ಮೇಲಧಿಕಾರಿಗೆ ದೂರು ಹೋಗಿ ತನಿಖೆಗೆ ಕೂಡಾ ಆದೇಶಿಸಲಾಗಿತ್ತು.

ವಿಶೇಷ ಡಿಪ್ಲೋಮಾ ಕೋರ್ಸುಗಳಿರುವಂತೆ ಸಮುದಾಯ ಪಾಲಿಟೆಕ್ನಿಕ್ ಎನ್ನುವ ಯೋಜನೆಯಲ್ಲಿ ಬಡ ವಿದ್ಯಾರ್ಥಿಗಳಿಗೆ ತಾತ್ಕಾಲಿಕ ವಿಶೇಷ ಕೋರ್ಸುಗಳನ್ನು ಕೆಪಿಟಿ ಆಯೋಜಿಸುತ್ತದೆ. ಮಂಗಳೂರಿನ ಕೆಪಿಟಿಯಲ್ಲಿ ಬ್ಯೂಟಿಶಿಯನ್, ಹೊಲಿಗೆ ತರಹದ ಉಪತರಬೇತಿ ಕೋರ್ಸುಗಳನ್ನು ನಡೆಸುತ್ತಿದ್ದು, ಈ ಕೋರ್ಸುಗಳ ತರಬೇತುದಾರರಾಗಿ ಸಂಪನ್ಮೂಲ ವ್ಯಕ್ತಿಗಳನ್ನು ಗೌರವಧನದ ಆಧಾರದಲ್ಲಿ ನೇಮಕ ಮಾಡಲಾಗುತ್ತಿದೆ. ಹೀಗೆ ಬರುವ ಸಂಪನ್ಮೂಲ ವ್ಯಕ್ತಿಗಳು ತಮಗೆ ಸಲ್ಲುವ ತಿಂಗಳ ಸಂಬಳ ರೂ. 1,500 ರಲ್ಲಿ ಕನಿಷ್ಠ 300 ರೂಪಾಯಿಗಳನ್ನು ಕಪ್ಪವಾಗಿ ವಿಜಯಕುಮಾರನಿಗೆ ಸಲ್ಲಿಸಬೇಕು. ತಪ್ಪಿದರೆ ಕೆಲಸಕ್ಕೇ ಕತ್ತರಿ!

ಇನ್ನು ಈ ತರಬೇತಿಗಳಿಗೆ ಬರುವ ವಿದ್ಯಾರ್ಥಿನಿಯರನ್ನು ಬುಟ್ಟಿಗೆ ಹಾಕಿಕೊಳ್ಳಲು ಈತ ಮಾಡುವ ಕಸರತ್ತುಗಳಿಗೆ ಲೆಕ್ಕವೇ ಇಲ್ಲ. ಈತ ನರ್ಸಿಂಗ್ ಕಲಿಯಲು ಬರುವ ವಿದ್ಯಾರ್ಥಿನಿಯರನ್ನು ತನ್ನ ಛೇಂಬರಿಗೆ ಕರೆಸಿ ಬಿ.ಪಿ. ಚೆಕ್ ಮಾಡಿಸುವ ನೆಪದಲ್ಲಿ ಮಾಡಬಾರದ್ದನ್ನೆಲ್ಲಾ ಮಾಡುತ್ತಿದ್ದ. ಇವನ ಈ ಕಾಟಕ್ಕೆ ಹೆದರಿ ನರ್ಸಿಂಗ್ ಕೋರ್ಸ್‌ಗೆ ವಿದ್ಯಾರ್ಥಿನಿಯರು ಬರುವುದನ್ನೇ ನಿಲ್ಲಿಸಿ ಕೋರ್ಸೇ ಈಗ ರದ್ದಾಗಿದೆ.

ಇಂತಹ ತುಘಲಕ್ ದರ್ಬಾರು ನಡೆಸುವ, ವಿದ್ಯಾರ್ಥಿನಿಯರ ಮೈಮೇಲೆಯೇ ಕೈ ಮಾಡುವ ಸ್ತ್ರೀಲೋಲನ ವಿರುದ್ಧ ರೊಚ್ಚಿಗೆದ್ದಿರುವ ವಿದ್ಯಾರ್ಥಿಗಳ ಬೀದಿಗಿಳಿದಿದ್ದಾರೆ. ಹೆಚ್ಚು ಅನಾಹುತ ಸಂಭವಿಸುವ ಮು ವಿಜಯಕುಮಾರ್ ವಿರುದ್ಧ ಮೇಲಧಿಕಾರಿಗಳು ಸೂ ಕ್ರಮ ಕೈಗೊಂಡರೆ ಎಲ್ಲರಿಗೂ ಕ್ಷೇಮ....

ಸಿಪಾಯಿ ದಂಗೆಯೂ, ನಾಯಕನ ವಿಜೃಂಭಣೆಯೂ!

ಮಂಗಳೂರು ಯೂನಿವರ್ಸಿಟಿ ಕಾಲೇಜು ಆಗಾ ಚೆಡ್ಡಿ ಪುಂಡರ ದಾಂಧಲೆಗಳಿಂದಾಗಿ ಸುದ್ದಿಯಲ್ಲಿರುತ್ತದ ಆದರೆ ಇದೀಗ ಕಾಲೇಜಿನ ಕ್ಯಾಂಪಸ್ಸಿನೊಳಗೆ ಚೆಡ್ಡಿಗಳಿ ಆಶ್ರಯ ಒದಗಿಸಿ ಪೋಷಿಸುತ್ತಿರುವ ಮುರಳೀಧರ ನಾಯಕ್‌ನೆಂಬ ಅಧ್ಯಾಪಕ ತಾನೇ ಹೆಣೆದ ಬಲೆಗೆ ಬಿದ್ದು ಒದ್ದಾಡುತ್ತಿರುವುದು ಇನ್ನೂ ಸುದ್ದಿಯಾಗುವ ಹಂತದಲ್ಲಿದೆ.

ಇತ್ತೀಚೆಗೆ ಮಂಗಳೂರು ಯೂನಿವರ್ಸಿಟಿ ಕಾಲೇಜಿನಲ್ಲಿ ಸಿಪಾಯಿ ದಂಗೆಯ 150 ನೇ ವರ್ಷಾಚರಣೆಯನು ಎಬಿವಿಪಿ ಎಂಬ ಮಂಗಗಳ ತಂಡವೊಂದು ಆಯೋಜಿಸಲು ನಿರ್ಧರಿಸಿತ್ತು, ಆದರೆ ಕಾಲೇಜಿನ ಪ್ರಾಂಶುಪಾಲರು ಕಾಲೇಜಿನ ಸಭಾಂಗಣವನ್ನು ಖಾಸಗಿಯವರಿಗೆ ನೀಡಲು ವಿಶ್ವವಿದ್ಯಾಲಯದ ಅನುಮತಿ ಬೇಕೆಂದೂ, ಅಂತಹ ಅನುಮತಿಯನ್ನು ಪಡೆದುಕೊಂಡು ಬಂದರೆ ಸಭಾಂಗಣವನ್ನು ನೀಡುವುದಾಗಿಯೂ ಹೇಳಿದರು.

ಈ ಹಿಂದೆಲ್ಲಾ ಇದೇ ಕಾಲೇಜಿನ ಕ್ಯಾಂಪಸ್‌ನಲ್ಲಿ ಎಬಿವಿಪಿಗಳು ಆಡಿದ್ದೇ ಆಟವಾಗಿತ್ತು, ಕಾರಣ ಕಿವಿಯಿದ್ದೂ ಕೇಳಿಸದಂತಿದ್ದ ರಿಸ್ಕ್‌ಗೆ ಕೈಯೊಡ್ಡದ ಬೋನ್‌ಲೆಸ್ ಪ್ರಾಂಶುಪಾಲರಿದ್ದದ್ದು. ಆದರೆ ಇದೀಗ ಇಲ್ಲಿ ಪ್ರಭಾರ ಪ್ರಾಂಶುಪಾಲರಾಗಿರುವ ಸೀತಾರಾಮ ಪೂಜಾರಿ ಖಡಕ್ ವ್ಯಕ್ತಿಯಾಗಿದ್ದಾರಲ್ಲದೆ ತಮ್ಮ ಕಾಲೇಜು ಚೆಡ್ಡಿಗಳ ಅಡ್ಡೆಯಾಗದಂತೆ ನೋಡಿಕೊಳ್ಳಲಾರಂಭಿಸಿದ್ದಾರೆ. ಇದೇ ಈಗ ಚೆಡ್ಡಿಗಳಿಗೆ ಅಂಡುಸುಟ್ಟ ಅನುಭವವನ್ನು ನೀಡಿದೆ.

ಈ ಘಟನೆಯ ಸಂಪೂರ್ಣ ಹಿನ್ನೆಲೆ ಹೀಗಿದೆ: ಎಬಿವಿಪಿ ಸಂಘಟನೆಯ ವತಿಯಿಂದ ಸಿಪಾಯಿ ದಂಗೆಯ ಆಚರಣೆಗೆ ಯೂನಿವರ್ಸಿಟಿಯ ರವೀಂದ್ರ ಕಲಾಭವನವನ್ನು ಕೇಳಿದ್ದರು ಹೀಗೆ ಖಾಸಗಿ ಕಾರ್ಯಕ್ರಮಗಳಿಗೆ ಕಲಾಭವನ ಪಡೆಯಲು ಯೂನಿವರ್ಸಿಟಿ ಅನುಮತಿ ಬೇಕಾಗಿದ್ದು ಅದು ಇಲ್ಲದ್ದಕ್ಕೆ ಪ್ರಾಂಶುಪಾಲರು ರವೀಂದ್ರ ಕಲಾಭವನ ಕೊಡಲು ನಿರಾಕರಿಸಿದ್ದರು. ಇದರಿಂದ ಕುಪಿತನಾದ ಚೆಡ್ಡಿಗಳ ನಾಯಕ ಗಣೇಶ್ ಕಾರ್ನಿಕ್ ಎಂಬಾತ ಏಕಾಏಕಿ ಪ್ರಾಂಶುಪಾಲರ ಮೇಲೆ ಏರಿಹೋಗಿ "ಇದೆಲ್ಲಾ ಸರಿಯಲ್ಲ, ನೀನು ನಾಲಾಯಕ್" ಎಂದೆಲ್ಲಾ ಅರಚಾಡಿದ್ದ.

ಅಂದಹಾಗೆ ಈತ ಹಿಂದೊಮ್ಮೆ ಖಾಸಗೀ ಕಾಲೇಜೊಂದರಲ್ಲಿ ಮ್ಯಾನೇಜರ್ ಆಗಿದ್ದು ಈಗ ಅಧ್ಯಾಪಕರ ಕ್ಷೇತ್ರದಿಂದ ಎಂಎಲ್‌ಸಿ ಆಗಿದ್ದಾನೆ. ತಾನು ಎಂಎಲ್‌ಸಿ ಆಗಿರುವುದೇ ಚೆಡ್ಡಿಗಳ ಅಜೆಂಡಾವನ್ನು ಕಾಲೇಜುಗಳ ಮೇಲೆ ಹೇರುವುದಕ್ಕೆಂದು ಭಾವಿಸಿರುವಂತಿದೆ. ಇಂತಹ ದರ್ಪದಲ್ಲಿ ಅಂದು ಈ ಗಣೇಶ್ ಕಾರ್ನಿಕ್ ಅಕ್ರಮವಾಗಿ ಮೂರು ಕ್ಲಾಸ್ ರೂಮ್‌ಗಳನ್ನು ಪ್ರವೇಶಿಸಿ ಪ್ರತಿ ತರಗತಿಯಲ್ಲಿ ತಲಾ 20 ನಿಮಿಷ ಲೆಕ್ಚರ್ ಬಿಗಿದು ರಾದ್ಧಾಂತ ಎಬ್ಬಿಸಿದ್ದ. ಇವರ ಅರೆಚಾಟ-ಕಿರುಚಾಟದಿಂದ ಕ್ಲಾಸುಗಳು ಸರಿಯಾಗಿ ನಡೆಯಲಾಗದಿದ್ದನ್ನು ಗಮನಿಸಿದ ಪ್ರಾಂಶುಪಾಲರು ಕೊನೆಗೆ ಕಲಾಭವನದಲ್ಲಿ ಸಭೆ ಮಾಡಿಕೊಂಡು ಹೋಗಿ ಅಂದರು. ಆದರೆ ಅದಕ್ಕೆ ಸೊಪ್ಪು ಹಾಕದ ಗಣೇಶ್ ಕಾರ್ನಿಕ್ ಕಾಲೇಜಿನ ಧ್ವಜಕಟ್ಟೆಯ ಬಳಿ ಕುರ್ಚಿ ಹಾಕಿ ತನ್ನ ರಕ್ತ ಕಾರುವ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದ. ಅವತ್ತು ಅವನೊಂದಿಗಿದ್ದವರು ಪರ ಸ್ತ್ರೀಯರ ಲೋಲ ಚಕ್ರವರ್ತಿ ಸೂಲಿಬೆಲೆ ಎಂಬ ಆರ್ ಎಸ್ ಎಸ್ ದಂಡ ಮತ್ತು ಯೋಗೀಶ್‌ಭಟ್ಟ ಎಂಬ ಮತ್ತೋರ್ವ ಚೆಡ್ಡಿ ಪಿಂಡ.

ಅವತ್ತು ಈ ಮೂವರಿಗೆ ಕುಮ್ಮಕ್ಕು ಕೊಟ್ಟವನೇ ಕಾಲೇಜಿನಲ್ಲಿ ಹಿಂದಿ ವಿಭಾಗದ ಮುಖ್ಯಸ್ಥನಾಗಿರುವ ಮುರಳೀಧರ ನಾಯಕ ಎಂಬ ಚೆಡ್ಡಿ ಚತುರ. ಈತ ಎಬಿವಿಪಿ ಕಾರ್ಯಕರ್ತರೊಂದಿಗೆ ಸೇರಿಕೊಂಡು ಪತ್ರಕರ್ತರ ಸಮಕ್ಷಮದಲ್ಲೇ ಪ್ರಾಂಶುಪಾಲರ ವಿರುದ್ಧ ವಾಗ್ವಾಳಿ ನಡೆಸಿದ. ಹೀಗೆ ವಾಗ್ವಾಳಿ ನಡೆಯುತ್ತಿರುವಾಗಲೇ ಪ್ರಾಂಶುಪಾಲರಿಗೆ ಬೆದರಿಕೆ ಕರೆಗಳು ಬರಲಾರಂಭಿಸಿದರು. ಕೊನೆಗೆ ಸಂಜೆ ಆರು ಗಂಟೆಗೆ ಕಾಲೇಜಿನ ಮೈದಾನದಲ್ಲಿ ಎಬಿವಿಪಿಯವರ ಬೈಠಕ್ ಕೂಡಾ ನಡೆಯಿತು.

ಅಷ್ಟೊತ್ತಿಗೆ ಪ್ರಾಂಶುಪಾಲರಿಗೆ ನಿರಂತರವಾಗಿ ಬರುತ್ತಿದ್ದ ಬೆದರಿಕೆ ಕರೆಗಳಿಂದ ಬೇಸತ್ತು ಅವರು ಫೋನ್ ಕನೆಕ್ಷನ್ ಅನ್ನೇ ಸ್ಥಗಿತಗೊಳಿಸಿ ಕೂತರು. ಅದೇ ಸಂಜೆ ಏಳು ಗಂಟೆಗೆ ಎಬಿವಿಪಿಯವರಿಗೆ ಯಾಕೆ ಅನುಮತಿ ನೀಡಲಿಲ್ಲ ಎಂದು ಪ್ರಶ್ನಿಸಲೆಂದೋ ಏನೋ, ಉನ್ನತ ಶಿಕ್ಷಣ ಮಂತ್ರಿ ಡಿ.ಎಚ್. ಶಂಕರಮೂರ್ತಿ ಕಡೆಯಿಂದ ಫೋನ್ ಬಂತು. ಪ್ರಾಂಶುಪಾಲರು ಅದನ್ನು ಸ್ವೀಕರಿಸದಿದ್ದ ಕಾರಣಕ್ಕೆ ಕುಪಿತ

ಗೊಂಡ ಚಡ್ಡಿ ಮಂತ್ರಿ ಶಂಕರಮೂರ್ತಿ ಪ್ರಾಂಶುಪಾಲರನ್ನು ಕೂಡಲೇ ತಮ್ಮ ಸ್ಥಾನದಿಂದ ಅಮಾನತ್ತು ಗೊಳಿಸಬೇಕೆಂದು ವಿಶ್ವವಿದ್ಯಾಲಯಕ್ಕೆ ಆದೇಶ ಹೊರಡಿಸಿದರು. (ಆದರೆ ಮಂಗಳೂರು ವಿವಿಯನ್ನು ಹಲವು ನಿಯಮಾವಳಿಗಳ ಪ್ರಕಾರ ನಡೆಯುವುದರಿಂದ ಮತ್ತು ಕಾಲೇಜಿನಲ್ಲಿ ವಾಸ್ತವವಾಗಿ ನಡೆದದ್ದು ಏನೆಂದು ಅಲ್ಲಿನ ಮೇಲಧಿಕಾರಿಗಳಿಗೆ ಗೊತ್ತಿದ್ದರಿಂದ ಅವರು ಈ ತನಕ ಈ ಅಮಾನತು ಆಜ್ಞೆಯನ್ನು ಜಾರಿಗೊಳಿಸಿಲ್ಲ)

ಇಷ್ಟೆಲ್ಲ ರಾದ್ಧಾಂತ ನಡೆಸಿದ ಚಡ್ಡಿಗಳಿಗೆ ನೆಮ್ಮದಿಯಾಗಲಿಲ್ಲ, ಮರುದಿನ 9.30 ಗಂಟೆಗೆ ಮತ್ತೆ ಗಣೇಶ್ ಕಾರ್ನಿಕ್, ಶಾಸಕ ಯೋಗೀಶ್ ಭಟ್ ಸೇರಿದಂತೆ 65 ಜನ ಹೊರಗಿನ ಎಬಿವಿಪಿ ಸಿಂಪಥೈಸರ್ಸ್ ಏಕಾಏಕಿ ಕ್ಯಾಂಪಸಿಗೆ ನುಗ್ಗಿದರು. ಹಾಗೆ ನುಗ್ಗಿದವರು ಪ್ರತಿಭಟನಾ ಭಾಷಣ ಮಾಡಿ, ತರಗತಿಗಳು ನಡೆಯುತ್ತಿರುವುದನ್ನೂ ಲೆಕ್ಕಿಸದೇ ಅಟ್ಟಹಾಸಗೈದರು. ಆದರೆ ಇವರ ಈ ಗೂಂಡಾಗಿರಿ, ಆಟಾಟೋಪಗಳನ್ನು ನೋಡಿ ನೋಡಿ ಸುಸ್ತಾದ ವಿದ್ಯಾರ್ಥಿಗಳ್ಯಾರೂ ಅತ್ತ ಗಮನ ನೀಡಲಿಲ್ಲ. ಎಬಿವಿಪಿಯ ಕಾರ್ಯಕರ್ತರು ಪಾಠ ನಡೆಯುತ್ತಿದ್ದರೂ ತರಗತಿಗೆ ನೇರ ನುಗ್ಗಿ ಒತ್ತಾಯಿಸಿದಾಗಲೂ ಕ್ಯಾರೇ ಅನ್ನಲಿಲ್ಲ. ಎಬಿವಿಪಿ ಮತ್ತು ಅವರ ಬೆಂಬಲಿಗರ ಈ ಗೂಂಡಾಗಿರಿ ವರ್ತನೆ, ಪ್ರಾಂಶುಪಾಲರ ಮೇಲೆ ಮಾನಸಿಕ ಹಲ್ಲೆಗೆ ಪ್ರತಿಯಾಗಿ ಉಪನ್ಯಾಸಕರೂ ಆನಂತರ ಕಪ್ಪು ಬ್ಯಾಡ್ಜ್ ಹಾಕಿ ಮೌನಪ್ರತಿಭಟನೆ ನಡೆಸಿ ಪ್ರಾಂಶುಪಾಲರಿಗೆ ನೈತಿಕ ಧೈರ್ಯ ತುಂಬಿದರು.

ಈಗ ವಿಷಯ ಅದಲ್ಲ, ಯೂನಿವರ್ಸಿಟಿ ಕಾಲೇಜಿನಲ್ಲಿ ಎಬಿವಿಪಿಯವರಿಗೆ ಪೋಷಕನಾಗಿದ್ದು, ಮೊನ್ನೆಯ ಸಿಪಾಯಿಗಿರಿಯಲ್ಲಿ ಭಾಗವಹಿಸಿದ್ದ ಮುರಳೀಧರ ನಾಯಕನ ಪಾಲಿಗೆ ಅದೇ ಈಗ ತಿರುಗುಬಾಣವಾಗಿದೆ.

ಮಂಗಳೂರು ಯೂನಿವರ್ಸಿಟಿ ಕಾಲೇಜಿನಲ್ಲಿ 40 ವರ್ಷದಿಂದ ವಿದ್ಯಾರ್ಥಿಗಳ ಸಹಕಾರ ಸಂಘವೊಂದು ಅಸ್ತಿತ್ವದಲ್ಲಿದೆ. ವಿದ್ಯಾರ್ಥಿಗಳ ಯೋಗಕ್ಷೇಮಕ್ಕಾಗಿ, ಶಿಕ್ಷಣಕ್ಕೆ ಸಂಬಂಧಪಟ್ಟ ಪರಿಕರ ಸ್ಟೇಷನರಿ ಸಾಮಗ್ರಿಗಳನ್ನು ನ್ಯಾಯೋಜಿತ ಬೆಲೆಯಲ್ಲಿ ಒದಗಿಸಲೋಸುಗ ಸ್ಥಾಪಿಸಿದ ಈ ಸೊಸೈಟಿ, ಈಗ ಸೊಸೈಟಿಯಾಗಿ ಉಳಿಯದೇ ಮುರಳೀಧರ ನಾಯಕ್‌ನ ಖಾಸಗಿ ಅಂಗಡಿಯಂತಾಗಿದೆ. ಅಲ್ಲಿನ ಸಂದಿಗೊಂದಿಗಳಲ್ಲಿ ಪ್ರೇಮ ಸಲ್ಲಾಪಕ್ಕೆಂದೇ ಕಾಯಿನ್ ಫೋನ್‌ಗಳು, ಸರಿರಾತ್ರಿ ತನಕವೂ ತೆರೆದಿರುತ್ತಿದ್ದ ಸ್ಟೇಷನರಿ ಅಂಗಡಿಯಲ್ಲಿ ವಿವಿಧ ರೀತಿಯ ಗೋಲ್‌ಮಾಲ್‌ಗಳು ನಡೆಯುತ್ತಿದ್ದವು. ವಿದ್ಯಾರ್ಥಿ ಪ್ರತಿನಿಧಿಗಳು, ಪ್ರಾಂಶುಪಾಲರು ಅಧ್ಯಕ್ಷರಾಗಿರುವ ಈ ಸೊಸೈಟಿಯ ವ್ಯವಹಾರವನ್ನು ಅಧ್ಯಕ್ಷ-ಉಪಾಧ್ಯಕ್ಷರ ಜಂಟಿ ಖಾತೆಯಲ್ಲಿ ನಡೆಸಬೇಕು.

ಆದರೆ ಕಳೆದ 16 ವರ್ಷಗಳಿಂದ ಹಾಳೂರಿಗೆ ಉಳಿದವನೇ ಗೌಡ ಎಂಬಂತೆ ಈ ಮುರಳೀಧರ ನಾಯಕನೇ ಉಪಾಧ್ಯಕ್ಷರ ಕಂ ಈ ಸೊಸೈಟಿಯ ಸರ್ವಸ್ವ ಎಂಬಂತಾಗಿಹೋಗಿದ್ದಾನೆ. ಒಂದು ಸಾವಿರ, ಎರಡು ಸಾವಿರಕ್ಕೆ ಸೇಲ್ಸ್‌ಗರ್ಲ್‌ಗಳನ್ನಿಟ್ಟು ವ್ಯಾಪಾರ ಮಾಡುವುದು, ಅಲ್ಲಿ ಬಂದ ಹಣವನ್ನು ತನ್ನ ಕಿಸೆಗೇ ಹಾಕಿಕೊಳ್ಳುವುದು, ಇವೆಲ್ಲ ಎಗ್ಗಿಲ್ಲದೇ ನಡೆಯುತ್ತಿತ್ತು. ಇಂತಹ ಮುರಳೀಧರ ನಾಯಕ್‌ನ ಎಲ್ಲಾ ನಖರಾ ಬಾಜಿಗಳಿಗೆ ರಕ್ಷಾ ಕವಚದಂತೆ ಎಬಿವಿಪಿ ಇತ್ತು. ಈ ಒಂದು ಕನೆಕ್ಷನ್‌ಗೆ ಹೆದರಿಯೇ ಈತನಕ ಯಾರೂ ಈತನ ತಂಟೆಗೆ ಹೋಗಿರಲಿಲ್ಲ.

ಇದೀಗ ಪ್ರಾಂಶುಪಾಲರಾದ ಸೀತಾರಾಮ ಪೂಜಾರಿಯವರು ಧೈರ್ಯ ಮಾಡಿ ಸೊಸೈಟಿಗೆ ಲಗ್ಗೆ ಇಟ್ಟಿದ್ದಾರೆ. ಅಲ್ಲಿನ ಎಲ್ಲಾ ಕಡತಗಳನ್ನು ಸೀಜ್ ಮಾಡಿ ವಶಪಡಿಸಿಕೊಂಡಿದ್ದಾರೆ. ಇದನ್ನು ಕಂಡು ಮುರಳೀಧರ ನಾಯಕ ಕಕ್ಕಾಬಿಕ್ಕಿಯಾಗಿದ್ದಾನೆ. ಈ ಸೊಸೈಟಿಯ ಹಗರಣದ ತನಿಖೆಗೆಂದೇ ಉಪನ್ಯಾಸಕರನ್ನೊಳಗೊಂಡ ತನಿಖಾ ತಂಡವನ್ನು ರಚಿಸಲಾಗಿದ್ದು, ಆ ತಂಡವು ಅಲ್ಲಿದ್ದ ಕಡತಗಳನ್ನು ಸೀಜ್ ಮಾಡಿದಾಗ ಆಘಾತಕಾರಿ ಅಂಶವೊಂದು ಬೆಳಕಿಗೆ ಬಂದಿದೆ. ಅದುವೇ ವಿದ್ಯಾರ್ಥಿನಿಯರ ಮಾರ್ಕ್ಸ್‌ಕಾರ್ಡ್ ತೆಗೆದಿಟ್ಟು, ಬ್ಲಾಕ್‌ಮೇಲ್ ಮಾಡುವ ಅಂಶ!

ಇದಕ್ಕೆ ಸಾಕ್ಷಿಯೆಂಬಂತೆ ಐವತ್ತು ವಿದ್ಯಾರ್ಥಿನಿಯರ ಮಾರ್ಕ್ಸ್‌ಕಾರ್ಡ್‌ಗಳು ಸೊಸೈಟಿಯಲ್ಲಿ ಪತ್ತೆಯಾಗಿವೆ. ಈ ಕಾರ್ಡುಗಳು ಚಡ್ಡಿ ಮುರಳೀಧರ ನಾಯಕ್‌ನ ಲೈಂಗಿಕ ಕತೆಗಳನ್ನು ಬಿಚ್ಚಿಡಲೂಬಹುದು ಎಂದು ಅಂದಾಜಿಸಲಾಗಿದೆ (ಪ್ರಕರಣ ಇನ್ನೂ ತನಿಖೆಯ ಹಂತದಲ್ಲಿ ಇರುವುದರಿಂದ ಈ ದಾಹಿತಿಯನ್ನು ಮುಂದೆ ವಿವರಿಸಬೇಕಷ್ಟೇ).

ಅಂತೂ ಎಬಿವಿಪಿಯನ್ನು ಪುಸಲಾಯಿಸಿ ಪ್ರಾಂಶುಪಾಲರ ವಿರುದ್ಧ ಚಡ್ಡಿಗಳನ್ನು ಛೂಬಿಟ್ಟು ವಿಕೃತ ಆನಂದ ಅನುಭವಿಸಲು ಹೋದ ಈ ಮುರಳೀಧರ ನಾಯಕ್‌ನ [illegible] ಸದ್ಯ ಕೋಲು ಕೊಟ್ಟು ಹೊಡೆಸಿಕೊಂಡಂತಾಗಿದೆ.

■ ವರದಿಗಾರ

ಕನಕ ಹೌಸಿಂಗ್ ಸೊಸೈಟಿಯಲ್ಲಿ ಕಳ್ಳಾಕುಳ್ಳ!

ರಕ್ತ ಸಂಬಂಧಿಗಳಿಗೇ ಮತ್ತೆ ಮತ್ತೆ ಸೈಟು, ಸದಸ್ಯರಲ್ಲದವರಿಗೂ ಸೈಟು, ಪ್ರಶ್ನಿಸಿದ ಅಧಿಕಾರಿ-ರಾಜಕಾರಣಿಗಳಿಗೆಲ್ಲ ಸೈಟು; ಒಟ್ಟಿನಲ್ಲಿ ಕನಕ ಗೃಹ ನಿರ್ಮಾಣ ಸಹಕಾರ ಸಂಘ ಎಂಬ ದಗಲುಬಾಜಿ ಸೊಸೈಟಿಯಲ್ಲಿ ಕಳ್ಳರಿಗಷ್ಟೇ ಸೈಟೆಂಬುದು ಗ್ಯಾರಂಟಿಯಾಗಿ ಬಿಟ್ಟಿದೆ.


ಕರಿಯಪ್ಪಗೌಡ

ಸಹಕಾರಿ ಮಂತ್ರಿ ಜಿ.ಟಿ ದೇವೇಗೌಡರಿಗೆ ಕಣ್ಣು ಮಂಜೋ ಅಥವಾ ಬುದ್ಧಿಗೆ ಮಂಕೋ ಬಲ್ಲವರ್‍ಯಾರು? ಏಕೆಂದರೆ ಕಾಂಗ್ರೆಸ್ ಪುಢಾರಿಗಳ ಹೌಸಿಂಗ್ ಸೊಸೈಟಿಗಳನ್ನೆಲ್ಲ ಒಂದರ ಮೇಲೊಂದಾಗಿ ದಂಡಿಸುತ್ತಲೇ ಬಂದ ಜಿ.ಟಿ ದೇವೇಗೌಡರಿಗೆ ಈ ಕನಕ ಹೌಸಿಂಗ್ ಸೊಸೈಟಿಯ ವಿರುದ್ಧ ಬಂದ ಬಂಡಿಗಟ್ಟಲೇ ಕಂಪ್ಲೇಂಟುಗಳೇ ಕಣ್ಣಿಗೆ ರಾಚ ಬೇಕಿತ್ತು. ಬಹುಜನ ಸಮಾಜ ಪಕ್ಷದ ನಾಯಕ ಮಾರಸಂದ್ರ ಮುನಿಯಪ್ಪರಂಥ ನಾಯಕರೇ ಸೈಟು ವಂಚಿತರ ಪರವಾಗಿ ಬೀದಿಗಿಳಿದಾಗಲೂ ಸಣ್ಣದೊಂದು ತನಿಖೆಯನ್ನಾದರೂ ಮಾಡಿಸಬೇಕಿತ್ತು.

ಸಂಬಂಧಿಕರಿಗೇ ಸೈಟು ಕೊಟ್ಟವರೆ. ಜೊತೆಗೆ ಸೂತ್ರಧಾರ ಪುಟ್ಟಸ್ವಾಮಿಯ ಸಂಬಂಧಿಗಳೆ.

ತನ್ನ ಸಂಬಂಧಿಗಳನ್ನೇ ಆಯ್ದು ಸದಸ್ಯರನ್ನಾಗಿ ಮಾಡಿ ಸೊಸೈಟಿ ಕಟ್ಟಿದ ಪುಟ್ಟಸ್ವಾಮಿಯ ಕರಾಮತ್ತು ಗೊತ್ತಿಲ್ಲದೇ ಬೆಂಗಳೂರಿನ ಸಾವಿರಾರು ಮಂದಿ ಇದಕ್ಕೆ ಸದಸ್ಯರಾಗುತ್ತಲೇ ಬಂದರು. ಕಾಲಾನುಕಾಲಕ್ಕೆ ಅವರಿಂದ ಸೈಟಿಗೆಂದು ಪುಟ್ಟಸ್ವಾಮಿ ದುಡ್ಡು ಕಟ್ಟಿಸಿಕೊಂಡೇ ಬಂದ. 1986 ರಿಂದ 90 ನೇ ಇಸವಿ ವರೆಗೆ ಕದಿರೇನಹಳ್ಳಿಯಲ್ಲಿ ಹಂಚಿದ 157 ಸೈಟುಗಳು ಅಷ್ಟೇ ಸಂಖ್ಯೆಯ ಸದಸ್ಯರಿಗೆ ದಕ್ಕಬೇಕಿತ್ತು. ಆದರೆ ಪುಟ್ಟಸ್ವಾಮಿ ಮತ್ತು ಆತನ ಸಂಬಂಧಿಕ ಡೈರೆಕ್ಟರುಗಳ ಹದಿನಾಲ್ಕು ಫ್ಯಾಮಿಲಿಗಳೇ


ಪುಟ್ಟಸ್ವಾಮಿ


ಅಧಿಕಾರಿಗಳನ್ನೆ ಬುಟ್ಟಿಗೆ ಹಾಕಿಕೊಂಡಿದ್ದ!

ಹೋಗಲಿ, ಸುಬ್ರಹ್ಮಣ್ಯಪುರದ ಮೂರನೇ ಹಂತದಲ್ಲಾದರೂ ತಮಗೆ ಗ್ಯಾರಂಟಿ ಸೈಟು ಸಿಗಬಹುದೆಂದು ಅನೇಕ ಸದಸ್ಯರು ಕಾದಿದ್ದೇ ಕಾದಿದ್ದು. ಒಟ್ಟು 24 ಎಕರೆಯಲ್ಲಿ 12 ಎಕರೆಗೆ ಲೇಔಟ್ ಮಾಡಿದ ಪುಟ್ಟಸ್ವಾಮಿ ಈ ಬಾರಿ ಒಟ್ಟು 380 ಸೈಟುಗಳನ್ನು ವಿಂಗಡಿಸಿದ್ದ. ಆದರೆ ಕೊಟ್ಟಿದ್ದಾದರೂ ಯಾರಿಗೆ?

ಪುಟ್ಟಸ್ವಾಮಿಯ ಅಣ್ಣನ ಮಗ ಜೈರಾಮ್, ಮತ್ತೊಬ್ಬ ಸಂಬಂಧಿ ಕೆ. ಲಿಂಗಯ್ಯ ಬಿಡಿಎ ಅಧಿಕಾರಿ ಸದಾನಂದ ಹೆಗಡೆ, ಸಂಬಂಧಿಗಳಾದ ಡಾ. ಸುರೇಶ್, ಜಯಶ್ರೀ ಇತ್ಯಾದಿಗಳೆಲ್ಲ ಸೇರಿ ಈ ಬಾರಿ ಸರಿಸುಮಾರು ನೂರು ಸೈಟುಗಳನ್ನು ಕೊಳ್ಳೆ ಹೊಡೆದರು. ಕಳೆದ 25 ವರ್ಷಗಳಿಂದ ಸೈಟಿಗಾಗಿ ದುಡ್ಡು ಕಟ್ಟಿ ಕಾಯುತ್ತಾ ಕೂತವರು ಒಂದೆಡೆಯಾದರೆ, 2007 ರಲ್ಲಿ ಒಂದೇ ದಿನಕ್ಕೆ ಸದಸ್ಯರಾಗಿ ಅವತ್ತೇ ಸೈಟು ಗಿಟ್ಟಿಸಿದವರು ಇನ್ನೊಂದೆಡೆ. ಹೀಗೆ ಸೈಟು ಪಡೆದ ಕೆಲವರಿಗೆ



ಕನಕ ಬಡಾವಣೆಯ ಬೋರ್ಡು


ತಲೆಎತ್ತಿದ ಕನಕ ಲೇಔಟ್


ಕನಕ ಸೊಸೈಟಿಯ ಆಫೀಸು

ಒಂದು ಹೌಸಿಂಗ್ ಸೊಸೈಟಿ ಅಥವಾ ಸಹಕಾರಿ ಸಂಸ್ಥೆಯೊಂದು ಏನೆಲ್ಲಾ ದುರಾಚಾರಕ್ಕೆ ಕಾರಣವಾಗ ಬಹುದೋ ಅದಕ್ಕೆ ಈ ಕನಕ ಸೊಸೈಟಿಗಿಂತ ಬೇರೆ ನಿದರ್ಶನವೇ ಬೇಕಿಲ್ಲ. ಇದರ ಹಾಲಿ ಅಧ್ಯಕ್ಷನ ಹೆಸರು ಕರಿಯಪ್ಪಗೌಡ. ಈತ ಮಾಜಿ ಮೈಕೋ ನೌಕರ. ಹೆಸರಿಗಷ್ಟೇ ಈತ ಅಧ್ಯಕ್ಷನಾದರೂ ಕನಕ ಗೃಹ ನಿರ್ಮಾಣ ಸಹಕಾರ ಸಂಘವನ್ನು ತನ್ನ ಅಪ್ಪನ ಆಸ್ತಿಯಂತೆ ಆಳುತ್ತಲೇ ಬಂದವನು ಎಸ್.ಕೆ. ಪುಟ್ಟಸ್ವಾಮಿ. ಈತ ಕೂಡ ಮೈಕೋದ ನಿವೃತ್ತ ನೌಕರ. ಈ ಕನಕ ಹೌಸಿಂಗ್ ಸೊಸೈಟಿ ಅಸ್ತಿತ್ವಕ್ಕೆ ಬಂದದ್ದು 1972 ರಲ್ಲಿ. ನಂ. 554, 9 ನೇ ಅಡ್ಡರಸ್ತೆ, ಜಯನಗರ 7 ನೇ ಬಡಾವಣೆಯಲ್ಲಿ ಇದಕ್ಕೊಂದು ಆಫೀಸಿದೆಯಾದರೂ ಅದು ಯಾವತ್ತೂ ಬಾಗಿಲು ಮುಚ್ಚೇ ಇರುತ್ತದೆ.

ಕನಕಪುರ, ಮಳವಳ್ಳಿ, ಸಾತನೂರು ಭಾಗದ ಒಕ್ಕಲಿಗ ಕಾರ್ಮಿಕರೇ ಬಹುತೇಕ ಸದಸ್ಯರಾಗಿರುವ ಈ ಸೊಸೈಟಿಯು 1986 ರಲ್ಲಿ ಬನಶಂಕರಿಯ ಕದಿರೇನಹಳ್ಳಿಯಲ್ಲೊಂದು ಲೇಔಟ್ ಮಾಡಿ 157 ನಿವೇಶನಗಳನ್ನು ಹಂಚಿದೆ. 1990 ರಲ್ಲಿ ಮತ್ತೆ 8.03 ಎಕರೆ ಭೂಮಿಯನ್ನು ಬಿಡಿಎನಿಂದ ಪಡೆದು ಮತ್ತೆ 91 ಸೈಟುಗಳನ್ನು ವಿತರಿಸಿದೆ. 96 ರಲ್ಲಿ ಪಕ್ಕದ ಸುಬ್ರಹ್ಮಣ್ಯಪುರದಲ್ಲಿ ಮತ್ತೆ ಬಿಡಿಎಯಿಂದ ಒಟ್ಟು 24 ಎಕರೆ ಭೂಮಿ ಗಿಟ್ಟಿಸಿ 380 ಮಂದಿಗೆ ಸೈಟು ಕೊಟ್ಟಿದೆ. ಕೋಣನ ಕುಂಟೆಯಲ್ಲಿರುವ ಜಮೀನು, ಕದಿರೇನಹಳ್ಳಿಯಲ್ಲಿರುವ ಭೂಮಿ ಎಲ್ಲವನ್ನೂ ಲೆಕ್ಕಹಾಕಿದರೆ ಈ ಹೊತ್ತಿಗಾಗಲೇ ಹತ್ತಿಪ್ಪತ್ತು ವರ್ಷದ ಹಿಂದೆಯೇ ದುಡ್ಡುಕಟ್ಟಿದ ಅದರ ಪ್ರತಿಯೊಬ್ಬ ಸದಸ್ಯನೂ ಸೈಟು ಗಿಟ್ಟಿಸಬೇಕಿತ್ತು.

ಜಮೀನಿದೆ. ಮುಕ್ಕಾಲು ಪಾಲೂ ಸೈಟೂ ಹಂಚಿಕೆಯಾಗಿದೆ. ಆದರೆ ಸೈಟು ಕೋರಿ ಸದಸ್ಯರಾದವರು, ದುಡ್ಡು ಕಟ್ಟಿದವರ್‍ಯಾರಿಗೂ ಈತನಕ ಸೈಟು ಸಿಕ್ಕಿಲ್ಲ. ಹಾಗಾದರೆ ಸೈಟು ಸಿಕ್ಕಿದ್ದಾದರೂ ಯಾರಿಗೆ?

ಹಕೀಕತ್ತೆಂದರೆ ಸದರಿ ಹೌಸಿಂಗ್ ಸೊಸೈಟಿಯಿಂದ ಯಾರೆಲ್ಲ ಸೈಟುಗಿಟ್ಟಿಸಿದ್ದಾರೋ ಅವರೆಲ್ಲ ಎಸ್.ಕೆ. ಪುಟ್ಟಸ್ವಾಮಿ ಮತ್ತು ಕರಿಯಪ್ಪಗೌಡನ ರಕ್ತ ಸಂಬಂಧಿಗಳೆ. ಇನ್ನು ಉಳಿಕೆ ಡೈರೆಕ್ಟರ್‌ಗಳಾದ ಹನುಮಯ್ಯ, ಅಪ್ಪಾಜಿಗೌಡ, ಪುಟ್ಟೇಗೌಡ ಎಲ್ಲರೂ ತಂತಮ್ಮ

ಅಷ್ಟೂ ಸೈಟನ್ನು ಲಪಟಾಯಿಸಿಬಿಟ್ಟವು.

ಪುಟ್ಟಸ್ವಾಮಿ ಒಬ್ಬನೇ ತನಗೊಂದು, ತನ್ನ ಮಗಳು ಮಧುಮತಿಗೊಂದು, ಪತ್ನಿ ಜಯಮ್ಮ, ಮಗ ಶ್ರೀನಿವಾಸ, ಸೊಸೆ ಶೀಲಾ, ಅಳಿಯ ಮುಕುಂದರಾಜು, ಮತ್ತೊಬ್ಬಳು ಮಗಳು ಪ್ರಭಾವತಿ, ಆಕೆಯ ಗಂಡ ಸುರೇಶರ ಹೆಸರಿಗೆ ಒಟ್ಟು ಎಂಟು ಸೈಟುಗಳನ್ನು ಲಪಟಾಯಿಸಿಬಿಟ್ಟ. ಕರಿಯಪ್ಪಗೌಡನೂ ತನಗಷ್ಟೇ ಅಲ್ಲದೆ, ತನ್ನ ಪತ್ನಿ ಶಾರದಮ್ಮ, ಮಗಳು ರಷ್ಮಿ, ಮಗ ಅನೀಲರ ಹೆಸರಲ್ಲಿ ಒಟ್ಟೂ ನಾಲ್ಕು ಸೈಟುಗಳನ್ನು ದೋಚಿದ.

ಹೋಗಲಿ, ಎರಡನೇ ಹಂತದಲ್ಲಾದರೂ ಸೈಟು ಸಿಗುತ್ತಾ ಎಂದು ಚಾತಕ ಪಕ್ಷಿಗಳಂತೆ ಉಳಿಕೆ ಸದಸ್ಯರು ಕಾದರು. 1990 ರಲ್ಲಿ ಒಟ್ಟು 91 ಸೈಟುಗಳನ್ನು


ಬೀದಿಗೆ ಬಿದ್ದ ಬಡಪಾಯಿಗಳು

ಹಂಚಲಾಯಿತು. ಈ ಬಾರಿ ಕೆ.ವಿ. ರಮೇಶ್ ಎಂಬ ಖದೀಮ ಉಪಾಧ್ಯಕ್ಷ ತನಗೊಂದು, ಪತ್ನಿ ವಿಜಯ ಮತ್ತು ತನ್ನ ನಾಲ್ವರು ಹೆಣ್ಣು ಮಕ್ಕಳಿಗೆ ಒಂದೊಂದರಂತೆ ಒಟ್ಟು 5 ಸೈಟುಗಳನ್ನು ನುಂಗಿದ್ದ! ಇಲ್ಲೂ ಅಷ್ಟೆ. ದೊಡ್ಡಲಿಂಗಯ್ಯ, ಪ್ರೇಮಾಮಣಿ, ಮುತ್ತುರಾಜು, ಕೆಂಚಪ್ಪ, ಗವಿಗೌಡ, ಚಾಮಯ್ಯ ಮುದ್ದುವೀರೇಗೌಡ, ನಾಗರತ್ನ, ಕರಿತಮ್ಮಯ್ಯ ಕುನ್ನಮರಿಗೌಡ, ಎಲ್. ತಿಮ್ಮಯ್ಯ ಇತ್ಯಾದಿ ಮಾಜಿ ಡೈರೆಕ್ಟರ್‌ಗಳೆಲ್ಲ ತಮ್ಮ ಹೆಂಡತಿ-ಮಕ್ಕಳ ಹೆಸರಿಗೆ ಅರ್ಧರ್ಧ ಡಜನ್ ಸೈಟು ಗಿಟ್ಟಿಸಿಬಿಟ್ಟರು. ಇದರ ವಿರುದ್ಧ ಅನೇಕ ಸದಸ್ಯರು ಕೋರ್ಟಿಗೂ, ಇನ್ನೂ ಕೆಲವರು ಸಹಕಾರಿ ಇಲಾಖೆಗೂ ದೂರು ಕೊಟ್ಟರೆ ಖದೀಮ ಪುಟ್ಟಸ್ವಾಮಿ ಸರ್ಕಾರಿ

ಈಗಾಗಲೇ ಬಿಡಿಎ ಸೈಟು ಕೊಟ್ಟಿತ್ತು. ಸಾಲದ್ದಕ್ಕೆ ಸಂಘಕ್ಕೆಂದು ಬಿಡಿಎ ನೋಟಿಫೈ ಮಾಡಿಕೊಟ್ಟಿದ್ದ ತನ್ನ ಸಂಬಂಧಿ ದೊಡ್ಡಮ್ಮ ಎಂಬಾಕೆಯ ಕೋಣನಕುಂಟೆಯ ಎರಡೆಕರೆ ಭೂಮಿಯನ್ನೇ ಪುಟ್ಟಸ್ವಾಮಿ ಲಕ್ಷ್ಮಣ ಎಂಬ ನೆಲಗಳ್ಳನಿಗೆ ಮಾರಿಹಾಕಿದ್ದ!

ಅನೇಕ ಸೈಟುಗಳನ್ನು ಸದಸ್ಯರಲ್ಲದವರಿಗೆ ದುಬಾರಿ ರೇಟಿಗೆ ವಿತರಿಸಿದ್ದಾನೆ. ಸೊಸೈಟೀಸ್ ಆಕ್ಟ್ ಪ್ರಕಾರ ಸದಸ್ಯರಲ್ಲದವರಿಗೆ, ಈಗಾಗಲೇ ಸೈಟಿದ್ದವರಿಗೆ, ಒಂದೇ ಕುಟುಂಬದ ಸದಸ್ಯರಿಗೆ ಸೈಟು ಹಂಚುವಂತಿಲ್ಲ. ಸೈಟು ಕೊಡುವುದಕ್ಕೂ ಜೇಷ್ಠತಾ ಪಟ್ಟಿ ಮಾಡಬೇಕು. ಆ ಪ್ರಕಾರವೇ ಸೈಟು ಹಂಚಬೇಕು. ವಿಚಿತ್ರವೆಂದರೆ ಕನಕ ಹೌಸಿಂಗ್ ಸೊಸೈಟಿಗೆ ಕಾಯ್ದೆ ಕಾನೂನು, ರೀತಿ-ರಿವಾಜು ಯಾವುದೂ ಲೆಕ್ಕಕ್ಕಿಲ್ಲ. ಏಕೆಂದರೆ ಅಲ್ಲಿ ಪುಟ್ಟಸ್ವಾಮಿ ಮತ್ತು ಕರಿಯಪ್ಪಗೌಡನ ಹೊರತಾಗಿ ಬೇರೆ ಯಾರೂ ಅಧ್ಯಕ್ಷರಾಗುವುದೇ ಸಾಧ್ಯವಿಲ್ಲ.

ಪಾರ್ಕು, ಆಟದ ಮೈದಾನಕ್ಕೆಂದು ಮೀಸಲಿದ್ದ ಸೀಎ ನಿವೇಶನಗಳನ್ನೇ ಪುಟ್ಟಸ್ವಾಮಿ ಗ್ಯಾಂಗ್ ಮಾರಿ ಹಾಕಿದೆ. ದಶಕಗಟ್ಟಲೇ ಕಾದು ದುಡ್ಡು ಕಟ್ಟಿದ ನಿಜ ಸದಸ್ಯರ ಪಾಲಿಗೆ ಗರಟೆ ಚಿಪ್ಪು ಬಿಟ್ಟರೆ ಬೇರೇನೂ ಇಲ್ಲಿ ಗ್ಯಾರಂಟಿಯಂತಿಲ್ಲ. ಕೋರ್ಟ್ ಆದೇಶ ಇಲ್ಲಿ ಲೆಕ್ಕಕ್ಕೇ ಇಲ್ಲ. ಹಕೀಕತ್ತೆಂದರೆ ಕನಕ ಸೊಸೈಟಿಯ ಖದೀಮ ಪುಟ್ಟಸ್ವಾಮಿಗೆ ದೇವೇಗೌಡರ ನಂಬಿಕಸ್ತ ಬಂಟ ಸಾತನೂರಿನ ಜೆಡಿಎಸ್ ನಾಯಕ ದುಂತೂರು ವಿಶ್ವನಾಥನೇ ಗಾಡ್‌ಫಾದರ್. ಕಳೆದ ಚುನಾವಣೆಯಲ್ಲಿ ಡಿಕೇಶಿ ವಿರುದ್ಧ ಸ್ಪರ್ಧಿಸಿದ್ದ ಈತನೇ ಕುಮಾರಣ್ಣನ ಮೂಲಕ ಪುಟ್ಟಸ್ವಾಮಿ ಗ್ಯಾಂಗನ್ನು ರಕ್ಷಿಸುತ್ತಿದ್ದಾನೆ.

ಸಂಘಕ್ಕೆ ಆಡಳಿತಾಧಿಕಾರಿ ನೇಮಿಸಿ ಪುಟ್ಟಸ್ವಾಮಿ ಮತ್ತು ಆತನ ದುಷ್ಕೂಟವನ್ನು ಜೈಲಿಗೆ ಪಟ್ಟಬೇಕಿದ್ದ ಸಹಕಾರಿ ಮಂತ್ರಿ, ಜಿ.ಟಿ ದೇವೇಗೌಡರೇ [illegible] ನಿಂತಿದ್ದಾರೆಂದರೆ, ಖದೀಮ ಪುಟ್ಟಸ್ವಾಮಿಗೆ [illegible] ಭಯ? ಆತನಿಗೆ ಕೋರ್ಟು-ಕಾನೂನು ಯಾವ ಲೆಕ್ಕ.

■ ರಾ. ಸೋಮನಾಥ್

ದಾವಣಗೆರೆ: ಕ್ರೈಸ್ತರ ಮೇಲಿನ ದಾಳಿಗೆ ಪೊಲೀಸರ ಕುಮ್ಮಕ್ಕು

ಸ್ಥಳೀಯ ಸಂಸ್ಥೆಗಳ ಚುನಾವಣಾ ಫಲಿತಾಂಶಗಳು ಘೋಷಣೆಯಾಗುತ್ತಲೇ ರಾಜಕೀಯ ಕಿತಾಪತಿಗಳು ಶುರುವಾಗಿವೆ. ದಾವಣಗೆರೆ ನಗರಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅಂದುಕೊಂಡಿದ್ದಕ್ಕಿಂತಲೂ ಹೆಚ್ಚು ಮಣ್ಣು ಮುಕ್ಕಿದ್ದರೆ, ಜೆ.ಡಿ.ಎಸ್. ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡಿದೆ. ಆದರೆ ಭಾರತೀಯ ಜನತಾಪಕ್ಷ ಸರಳ ಬಹುಮತವನ್ನು ಪಡೆದುಕೊಂಡ ಮರುದಿನವೇ ಭಜರಂಗದಳದ ಗೂಂಡಾಗಳು ತಮ್ಮ ಹೀನಚಾಳಿಯನ್ನು ಶುರುವಿಟ್ಟುಕೊಂಡಿದ್ದಾರೆ. ಸೆ. 10ರಂದು ರಾತ್ರಿ 8-9 ಗಂಟೆಗೆ ಸಮಯದಲ್ಲಿ ಜೀಪು ಮತ್ತು ಬೈಕುಗಳಲ್ಲಿ ಬಂದ ಸುಮಾರು 20 ರಿಂದ 30 ಮಂದಿ ಭಜರಂಗಿಗಳು ದಾವಣಗೆರೆ ನಗರದಲ್ಲಿನ 'ನಿತ್ಯಜೀವ ದೇವಾಲಯ' ಚರ್ಚಿನ ಮೇಲೆ ದಾಳಿ ಮಾಡಿ ಧಾರ್ಮಿಕ ಅಲ್ಪಸಂಖ್ಯಾತರಿಗೆ ಮುಂದಿನ ಕರಾಳ ದಿನಗಳ ಮುನ್ಸೂಚನೆಯನ್ನು ನೀಡಿದ್ದಾರೆ.

ಇದೇ ಮೊದಲ ದಾಳಿಯಲ್ಲ !

2006 ನವೆಂಬರ್ 26 ರಂದು ದಾವಣಗೆರೆ ನಗರದ ಎ.ವಿ.ಕೆ. ಕಾಲೇಜು ರಸ್ತೆಯಲ್ಲಿರುವ 'ರಂಗಮಹಲ್' ನಲ್ಲಿ ಕ್ರೈಸ್ತ ಸಮುದಾಯದ ಕುಟುಂಬ ಆಶೀರ್ವಾದ ಕೂಟಗಳು ನಡೆಯುತ್ತಿದ್ದವು. ಬೆಂಗಳೂರಿನಿಂದ ಬಂದ ಪಾಸ್ಟರ್ ಬೆಂಜಮಿನ್ ಎಂಬುವವರು ಪ್ರವಚನ ನೀಡುತ್ತಿದ್ದ ಸಂದರ್ಭದಲ್ಲಿ ಭಜರಂಗದಳದ ರಾಜಶೇಖರ್ ಎನ್ನುವವನು ತನ್ನ ಚೇಲಾಗಳೊಂದಿಗೆ ಬಂದು ಗಲಾಟೆಯನ್ನೆಬ್ಬಿಸಿ ಕಾರ್ಯಕ್ರಮವನ್ನು ಅಸ್ತವ್ಯಸ್ತಗೊಳಿಸಿದ್ದ. ಆಗ ರಾಜಶೇಖರ್ ದಾಂಧಲೆ ಮಾಡುತ್ತಿದ್ದ ಫೋಟೋಗಳು ಸ್ಥಳೀಯ ಪತ್ರಿಕೆಗಳಲ್ಲಿ ದೊಡ್ಡದಾಗಿ ಪ್ರಕಟವಾಗಿದ್ದವು. ಹೀಗೆ ಪತ್ರಿಕೆಗಳಿಗೆ ಫೋಜು ನೀಡಿ ಭಜರಂಗದಳದವರು ಪ್ರಸಿದ್ಧರಾದರೇ ಹೊರತು ಇವರ ಮೇಲೆ ಪೊಲೀಸರು ಯಾವುದೇ ಕೇಸುಗಳನ್ನು ದಾಖಲಿಸಲಿಲ್ಲ!



ಭಜರಂಗಿ ಪಡೆ ಧ್ವಂಸಗೊಳಿಸಿರುವ ಚರ್ಚಿನ ಒಂದು ದೃಶ್ಯ.

ಮತ್ತೊಂದು ದಾಳಿ


ದಿ: 20-8-2007 ರಂದು ದಾವಣಗೆರೆ ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿರುವ 'ಫುಲ್ ಗಾಸ್ಪೆಲ್ ಅಸೆಂಬ್ಲಿ'ಯಲ್ಲಿ ಬೈಬಲ್ ಪಠನ ಮಾಡಲು ಕೆಲವು ಟೀಚರುಗಳು ಹಾಗೂ ವಿದ್ಯಾರ್ಥಿಗಳು ಸೇರಿದ್ದರು. ಈ ಕ್ಲಾಸುಗಳು ಮುಗಿದನಂತರ 24 ಮಂದಿ ಸಂಜೆ ಐದು ಗಂಟೆ ಸುಮಾರಿಗೆ ಪಕ್ಕದಲ್ಲಿರುವ ಕುಂದುವಾಡ ಕೆರೆಗೆ ವಾಯುವಿಹಾರಕ್ಕಾಗಿ ಹೋಗಿದ್ದಾರೆ. ಅಲ್ಲಿಗೆ ಹೋಗಿದ್ದಾಗ ಅವರುಗಳ ಕೈಲಿ ಬೈಬಲ್ ಇರಲಿ, ಧರ್ಮ ಪ್ರಚಾರದ ಕುರಿತ ಒಂದು ಕರಪತ್ರವೂ ಇರಲಿಲ್ಲ. ಎಲ್ಲರೂ ಕೆರೆಯ ಮಧ್ಯದಲ್ಲಿರುವ ಮಂಟಪದಲ್ಲಿ ಆಟವಾಡುತ್ತಿದ್ದರು. ಅದೇ ಸಮಯದಲ್ಲಿ ಈ 24 ಮಂದಿಯಲ್ಲಿದ್ದ ಗಂಗಾಧರ ನಾಯ್ಕ ಎಂಬಾತ ಹತ್ತಿರದಲ್ಲಿಯೇ ಹಾದು ಹೋಗುತ್ತಿದ್ದ ರಾಘವೇಂದ್ರ ಕಠಾರೆ ಎನ್ನುವವನನ್ನು (ಪರಿಚಯವಿದ್ದುದರಿಂದ) ಮಾತನಾಡಿಸಿದ್ದಾರೆ (ರಾಘವೇಂದ್ರ ಕಠಾರೆ ಭಜರಂಗದಳದ ಸಹಕಾರ್ಯದರ್ಶಿ ಎನ್ನಲಾಗುತ್ತಿದೆ). ಇದಾದ ಸ್ವಲ್ಪ ಹೊತ್ತಿನಲ್ಲೇ ಭಜರಂಗದಳದ 20-25 ಮಂದಿ ಗೂಂಡಾಗಳು ಬಂದು ಆಟವಾಡುತ್ತಿದ್ದ ಕ್ರೈಸ್ತರ ಮೇಲೆ ದಾಳಿ ಮಾಡಿದ್ದಾರೆ. ಈ ದಾಳಿಯಲ್ಲಿ ಚಂದನ್ ಎಂಬ ಪಾಸ್ಟರ್‌ಗೆ ತೀವ್ರವಾದ ಹೊಡೆತಗಳು ಬಿದ್ದಿವೆ. ಹಲವರು ಹೆದರಿ ತಪ್ಪಿಸಿಕೊಂಡು ಓಡಿಹೋಗಿದ್ದಾರೆ. ಉಳಿದ ನಾಲ್ಕು ಮಂದಿ ಪುರುಷರು, ಆರು ಮಂದಿ ಮಹಿಳೆಯರನ್ನು ಪೊಲೀಸರು ಬಂಧಿಸಿ ವಿದ್ಯಾನಗರದ ಠಾಣೆಗೆ ತಂದಿದ್ದಾರೆ. ಬಂಧಿತರಾದ ವಿಜಯ, ವಾಣಿ, ಜ್ಯೋತಿ, ಪುಷ್ಪ ಹಾಗೂ ಶಿಲ್ಪರನ್ನು 'ತಲೆ ಹಿಡಿಯೋಕೆ ಹೋಗಿದ್ರೇನೇ?' ಎಂದೆಲ್ಲಾ ಬಾಯಿಗೆ ಬಂದಹಾಗೆ ಅಶ್ಲೀಲವಾಗಿ ಬೈದು ಅವರ ಬೆರಳುಗಳಿಗೆ ಬೆತ್ತಗಳಿಂದ ಹೊಡೆದು ತುಂಬಾ ಹೀನಾಯವಾಗಿ ನಡೆಸಿಕೊಂಡಿದ್ದಾರೆ. ರಾತ್ರಿ 11.00 ಗಂಟೆಯವರೆಗೂ ಠಾಣೆಯಲ್ಲಿ ಇರಿಸಿಕೊಂಡಿದ್ದೇ ಅಲ್ಲದೆ ಹೊಡೆತ ತಿಂದು ಅವಮಾನಿತರಾದ ಇವರ ಮೇಲೆಯೇ ಕೇಸು ದಾಖಲಿಸಿದ್ದಾರೆ; ಇವರ ಮೇಲೆ ದಾಳಿ ಮಾಡಿ ಮಾರಣಾಂತಿಕವಾಗಿ ಹಲ್ಲೆ ನಡೆಸಿದ ಭಜರಂಗಿಗಳ ಮೇಲೆ ಪೊಲೀಸರು ಯಾವ ಕೇಸನ್ನೂ ದಾಖಲಿಸಲಿಲ್ಲ.


ಪೊಲೀಸರ ಪಕ್ಷಪಾತವೇ ಮೂರನೇ ದಾಳಿಗೆ ಕಾರಣ

ಭಜರಂಗದಳದ ಗೂಂಡಾಗಳು ಇಷ್ಟು ಬಹಿರಂಗವಾಗಿ ದಾಳಿ, ಹಲ್ಲೆ ಮಾಡಿದರೂ ಇವರ ಮೇಲೆ ಪೊಲೀಸರು ಕೇಸುಗಳನ್ನು ದಾಖಲಿಸಿ ಹಣಿಯದೇ ಇರುವುದು ಬಿ.ಜೆ.ಪಿ. ಮಂತ್ರಿ ರವೀಂದ್ರನಾಥ, ಸಂಸದ ಸಿದ್ದೇಶ್ ಪ್ರಭಾವದಿಂದಲೇ ಎನ್ನುವ ಮಾತು ಪೊಲೀಸ್ ವಲಯದಿಂದಲೇ ಕೇಳಿಬರುತ್ತಿದೆ. ರಾಜಕಾರಣಿಗಳ ಮರ್ಜಿಗೆ ಒಳಗಾಗಿ ಗೂಂಡಾಗಳನ್ನು ರಕ್ಷಿಸಿದ್ದರಿಂದಲೇ ಭಜರಂಗದಳದವರು ಮೂರನೇ ದಾಳಿಗೆ ಸಜ್ಜಾಗಿದ್ದಾರೆ. ಅಕ್ಟೋಬರ್ 1ರ ರಾತ್ರಿ ಜಯನಗರದಲ್ಲಿನ ನಿತ್ಯಜೀವ ದೇವಾಲಯ ಚರ್ಚಿಗೆ ನುಗ್ಗಿದ ಭಜರಂಗಿಗಳು ಅಲ್ಲಿನ ಪೀಠೋಪಕರಣಗಳು, ಸಂಗೀತೋಪಕರಣಗಳು, ಕಿಟಕಿಗಳ ಗಾಜು ಹಾಗೂ ಹುಂಡಿಯನ್ನು ಒಡೆದು ನುಚ್ಚುನೂರು ಮಾಡಿ ಚರ್ಚಿನ ವೇದಿಕೆಯನ್ನು ಧ್ವಂಸಗೊಳಿಸಿ ಓಡಿಹೋಗಿದ್ದಾರೆ. ಭಜರಂಗಿಗಳ ದಾಳಿಯ ಸುದ್ದಿ ತಿಳಿದುಕೊಂಡ ಈ ಚರ್ಚಿನ ಪಾಸ್ಟರ್ ಇಮಾನುವೆಲ್ ಬಂದುನೋಡುವ ಹೊತ್ತಿಗೆ ದಾಳಿ ಮಾಡಿದವರು ಯಾರೂ ಅಲ್ಲಿರಲಿಲ್ಲ. ಆದರೆ ಸ್ವಲ್ಪ ಹೊತ್ತಿನಲ್ಲೇ ಈ ಹಿಂದಿನ ಎರಡು ದಾಳಿಗಳಿಗೂ ನೇತೃತ್ವ ವಹಿಸಿದ್ದ ರಾಜಶೇಖರ್ ಎನ್ನುವವನು ಚರ್ಚಿನ ಹತ್ತಿರ ಬಂದು ಘಟನೆಯ ವಿವರ ಕೇಳಿದ್ದಾನೆ. ಅಲ್ಲಿ ಸೇರಿದ್ದ ಕ್ರೈಸ್ತ ಧರ್ಮೀಯರು ಒಕ್ಕೊರಲಿನಿಂದ 'ನೀನೇ ಈ ದಾಳಿ ನಡೆಸಿದ್ದು' ಎಂದಿದ್ದಾರೆ! ರಾಜಶೇಖರ್ ತಕ್ಷಣ ಮೊಬೈಲ್ ಮೂಲಕ ಮಾತನಾಡಿ ತನ್ನ ಕಡೆಯವರಿಗೆ ವಿಷಯ ತಿಳಿಸಿದ್ದಾನೆ.

ಚರ್ಚಿನ ಮೇಲೆ ದಾಳಿ-ಪೊಲೀಸರ ಪಾತ್ರ

ಭಜರಂಗದಳದವರು ಚರ್ಚಿನ ಮೇಲೆ ನಡೆಸಿದ ದಾಳಿಯ ಕುರಿತು ಮಾಧ್ಯಮದವರಿಗೆ ವಿಷಯ





ಸೋಂಭೇರಿ ರಾಜಕಾರಣಿಗಳಿಗಿನ್ನು ಉಳಿಗಾಲವಿಲ್ಲ


ಕಲಬುರ್ಗಿ

"ಕಾಂಗ್ರೆಸ್‌ನ ಭದ್ರಕೋಟೆ" ಎಂದೇ ಕರೆಯುತ್ತಿದ್ದ ಕಲಬುರ್ಗಿ ಜಿಲ್ಲೆ ಇತ್ತೀಚಿನ ಮಹಾನಗರಪಾಲಿಕೆ, ಪುರಸಭೆ, ಪಟ್ಟಣ ಪಂಚಾಯತಿ ಚುನಾವಣೆಯ ಫಲಿತಾಂಶಗಳಿಂದ ಆ ಪಕ್ಷದ ಪಾಲಿಗೆ ಛಿದ್ರಕೋಟೆಯಾಗಿದೆ. ಇದಕ್ಕೆ ಬಹುಮುಖ್ಯ ಕಾರಣರು ಧರಂ-ಕರಂ ಎನ್ನದೇ ವಿಧಿಯಿಲ್ಲ. ಅತಿಯಾದ ಆತ್ಮವಿಶ್ವಾಸ ಹಾಗೂ ಜನಗಳ ಬಗೆಗಿನ ಅಸಡ್ಡೆ ಎಂತಹ ಹೊಡೆತ ಕೊಡುತ್ತದೆ ಎಂಬುದನ್ನು ಈ ಫಲಿತಾಂಶ ತೋರಿಸಿಕೊಟ್ಟಿದೆ.

ಹಾಗೆ ನೋಡಿದರೆ ಕಲಬುರ್ಗಿ ಮಹಾನಗರಪಾಲಿಕೆಯನ್ನು ಅನಾಮತ್ತಾಗಿ ತನ್ನ ಕೊರಳಿಗೆ ಹಾಕಿಕೊಳ್ಳುವ ಎಲ್ಲಾ ಸವಲತ್ತುಗಳು ತಾನಾಗಿಯೇ ಕಾಂಗ್ರೆಸ್‌ಗೆ ಒದಗಿ ಬಂದಿದ್ದವು. ಶರಣಬಸವಪ್ಪಗೌಡನ ಭ್ರಷ್ಟ ಹಾಗೂ ಬೇಷರಮ್ ಮುಖ, ತಡಕಲ್‌ನ ಮುಖಹೀನ ನಡವಳಿಕೆಗಳು, ಎಸ್. ಕೆ. ಕಾಂತಾರನ್ನು ಪಾಲಿಕೆ ಚುನಾವಣೆಗಳಿಂದ ದೂರ ಇರಿಸಿದ್ದು, ಬಿಜೆಪಿಯ ಚಂದ್ರಶೇಖರ ಪಾಟೀಲನ ನವಾಬಗಿರಿಯ ನಡವಳಿಕೆಗಳೆಲ್ಲ ಕಾಂಗ್ರೆಸ್‌ಗೆ ಪ್ಲಸ್ ಪಾಯಿಂಟ್‌ಗಳಾಗಿದ್ದವು. ಆದರೆ ಇವನ್ನೆಲ್ಲ ಸರಿಯಾಗಿ ಉಪಯೋಗಿಸಿಕೊಳ್ಳದ ಕಾಂಗ್ರೆಸ್ ಹಳ್ಳದ ಹಾದಿಯನ್ನು ಹಿಡಿದು ಕೊನೆಗೆ ಅದರೊಳಗೆ ಬಿದ್ದಿತು. ಒಂದು ಕಡೆ ಕಾಂತಾ, ಇನ್ನೊಂದು ಕಡೆ ಖಮರುಲ್ಲ ಇಸ್ಲಾಂನ ಜಿದ್ದಾಜಿದ್ದಿ ರಾಜಕೀಯದಿಂದಾಗಿ ಅರಳದೇ ಇದ್ದ 'ಕಮಲ' ಗುರುತಿನ ಪಕ್ಷ ತನ್ನ ನಿರೀಕ್ಷೆಗೂ ಮೀರಿ ಯಶಸ್ಸನ್ನು ಪಡೆದು ಅಧಿಕಾರದ ಚುಕ್ಕಾಣಿ ಹಿಡಿಯುವ ಎತ್ತುಗಡೆಯಲ್ಲಿ ತೊಡಗಿದೆ.

'ತನ್ನಬಿಟ್ಟು ಇನ್ನಾರಿದ್ದಾರೆ?' ಎಂದೇ ಸೆಡ್ಡು ಹೊಡೆಯುತ್ತಿದ್ದ ಧರಂಸಿಂಗ್‌ರವರ ಜೇವರ್ಗಿಯಲ್ಲಿಯೂ ಕಾಂಗ್ರೆಸ್‌ನ ಬೇರುಗಳಿಗೆ ದಕ್ಕೆ ತಗುಲಿದೆ. ಯಾರು ತನ್ನ ಹಿಂದೆ ತಿರುಗಾಡಿ ಚಮಚಾಗಿರಿ ಮಾಡುತ್ತಾರೋ ಅಂತಹವರಿಗೆ ಮಾತ್ರ ಕಾಂಗ್ರೆಸ್ ಟಿಕೆಟು ನೀಡಲಾಗಿತ್ತು, ಹಾಗೆ ಟಿಕೆಟ್ ಪಡೆದಾತ ಕಳೆದ ಬಾರಿ ಆಯ್ಕೆಯಾದಾಗ ಮಾಡಿದ ಕಳಪೆ ಕಾಮಗಾರಿ, ಚೋರತನಗಳನ್ನೊಂದೂ ನೋಡುವ ಗೋಜಿಗೇ ಯಾರೂ ಹೋಗಲಿಲ್ಲ, ಇದರ ಲಾಭ ಪಡೆದ ಜೆಡಿಎಸ್ ಸಾಧನೆ ಅಭೂತಪೂರ್ವವೆಂದೇ ಹೇಳಬೇಕು. ಇಲ್ಲಿ ದೊಡ್ಡಪ್ಪಗೌಡ ಪರಬೋಲಿಯ ಕಮಲವೂ ಅರಳಿದೆ. ಜೆಡಿಎಸ್ ಮತ್ತು ಬಿಜೆಪಿ ಹೊಂದಾಣಿಕೆಯಾದರೆ ಪುರಸಭೆ ಕಾಂಗ್ರೆಸ್‌ಗಳಿಗೆ ಕೈತಪ್ಪಿದಂತೆಯೇ ಸೈ. ಇದು ಧರಂಸಿಂಗ್ ಎಂಬ ಮಾಜಿ ಮುಖ್ಯಮಂತ್ರಿಯ ಜನಪ್ರಿಯತೆಗೆ ಸಾಕ್ಷಿ!

ಶರಣಬಸವಪ್ಪ ದರ್ಶನಾಪುರನ ಭ್ರಷ್ಟಾಚಾರದ ಹಗರಣಗಳು, ಪುರಸಭೆಯ ಗೋಲ್‌ಮಾಲ್ ರಾಜಕೀಯದಿಂದ ಬಸವಳಿದಿದ್ದ ಶಹಾಪುರದ ಜನ ಈ ಬಾರಿ ಕಾಂಗ್ರೆಸ್‌ನತ್ತ ಮುಖ ಮಾಡಿದ್ದರು. ಆದರೆ ಫೇರ್ ಅಂಡ್ ಲವ್ಲಿ ಖ್ಯಾತಿಯ ಮಾಜಿ ಶಾಸಕ ಶಿವಶೇಖರಪ್ಪ ಪಾಟೀಲ, ಚಂದ್ರಶೇಖರ ಆರಬೋಳ, ಡಾ. ಚಂದ್ರಶೇಖರ ಸುಬೇದಾರ, ಸುರೇಂದ್ರ ಪಾಟೀಲ ವಡ್ನಾಳ ಈ ಸದವಕಾಶವನ್ನು ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲ, ಕಾಂಗ್ರೆಸ್‌ನ ಕೆಲವು ನಾಯಕರ ನಡುವಿನ ಸಮನ್ವಯದ ಕೊರತೆಯೂ ಎದ್ದು ಕಾಣುತ್ತಿತ್ತು, ಕೆಲವು ಕಡೆ ಅಸಮರ್ಥ ಕ್ಯಾಂಡಿಡೇಟುಗಳನ್ನು ಹಾಕಿದರು. ಇನ್ನು ಕೆಲವು ವಾರ್ಡಗಳಲ್ಲಿ ಕೊನೆಕೊನೆಯ ಕ್ಷಣದವರೆಗೂ ಅಭ್ಯರ್ಥಿಗಳ ಹುಡುಕಾಟದಲ್ಲೇ ತೊಡಗಿದ್ದರು. ಇಂತಹ ಪರಿಸ್ಥಿತಿಯಲ್ಲಿ ದರ್ಶನಾಪುರರ ಪಟಾಲಂಗೆ ಮತ್ತೆ ಮಿಂಚಲು ಅವಕಾಶ ಸಿಕ್ಕಿದಂತಾಯಿತು.



ಸುಭಾಷ್ ಗುತ್ತೇದಾರ್


ಸೇಡಂನ ಶಾಸಕರಾಗಿ ತನ್ನ ತಾಲೂಕಿನ ಉಸ್ತುವಾರಿಗಿಂತಲೂ ಕಲಬುರ್ಗಿ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿಯೆ ಜಾಸ್ತಿ ಆಸಕ್ತಿ ತಳೆದಿದ್ದ ಶರಣಪ್ರಕಾಶ ಪಾಟೀಲನ ಸರ್ವಾಧಿಕಾರ ಧೋರಣೆಗಳಿಂದ ಕಾಂಗ್ರೆಸ್ ನೆಲಕಚ್ಚಿದೆ. ಸ್ಥಳೀಯ ಸಮಸ್ಯೆಗಳನ್ನು ಕಡೆಗಣಿಸಿ ಸರಕಾರದ ದುಡ್ಡನ್ನೆಲ್ಲ ನೇರ ತನ್ನ ಜೇಬು ತುಂಬಿಕೊಳ್ಳುವ ದಂಧೆಗೆ ಇಳಿದದ್ದು ಪ್ರಕಾಶಗೆ ಮುಳುವಾಯಿತು. ಕೆಲವು ಕಡೆ ಅಯೋಗ್ಯ ಅಭ್ಯರ್ಥಿಗಳೂ ಪಕ್ಷವನ್ನು ಕಂದಕಕ್ಕೆ ತಳ್ಳಿದರು. ಇದನ್ನು ಹೀಗೆ ಬಿಟ್ಟರೆ ಮುಂದೊಂದು ದಿನ ಶರಣಪ್ರಕಾಶನ ಪ್ರಕಾಶ ಬರೀ ಖರ್ಗೆ ಸುತ್ತ ಗಿರಕಿಹೊಡೆಯುತ್ತಲೇ ತಿರುಗಬೇಕಾಗಬಹುದೇನೋ?

ಸುರಪುರ ಎಲ್ಲ ತಾಲೂಕುಗಳಿಗಿಂತ ವಿಭಿನ್ನ ರಾಜಕೀಯ ನಿಲುವುಗಳಿರುವ ತಾಲೂಕು. ಶಾಸಕ ರಾಜುಗೌಡ ಹೇಳಿಕೊಳ್ಳುವಂತಹ ಕೆಲಸ ಮಾಡದೇ ಇದ್ದರೂ ಅವನ ಸರಳತನ ಬಹಳಷ್ಟು ಜನರನ್ನು ಆಕರ್ಷಿಸಿತ್ತು. ಇದನ್ನು ಸರಿಯಾಗಿ ಗ್ರಹಿಸಿದ ರಾಜರುಗಳಾದ ಕಾಂಗ್ರೆಸ್‌ನ ವೆಂಕಟಪ್ಪನಾಯಕ, ರಂಗಪ್ಪ ನಾಯಕ, ಮೌನೇಶನಾಯಕ ತಮ್ಮ ಗದ್ದುಗೆ ಬಿಟ್ಟು ಮೊದಲ ಬಾರಿಗೆ ಕೆಳಗೆ ನಡೆದಾಡಿದರು. ಜೊತೆಗೆ ಶಾಸಕನ ತಮ್ಮ ಶಂಭುಗೌಡನ ದುರ್ನಡತೆಯೂ ಇವರಿಗೆ ಪ್ಲಸ್ ಪಾಯಿಂಟ್ ಆಯಿತು. ಆದರೂ ಬಿಜೆಪಿಯ ಬಲದಿಂದಲೇ ಇಲ್ಲಿ ಜೆಡಿಎಸ್ ಅಧಿಕಾರದ ಗದ್ದುಗೆ ಏರಬೇಕು.

ಶಾಸಕ ವಿಶ್ವನಾಥಪಾಟೀಲ ಹೆಬ್ಬಾಳನ ಮತಕ್ಷೇತ್ರವಾಗಿರುವ ಚಿತ್ತಾಪುರ ಪುರಸಭೆ ಒಂದಿಷ್ಟು ಗುಣಮಟ್ಟದ ಕಾಮಗಾರಿ ಆರಂಭಿಸಿದೆಯಾದರೂ ಹೆಬ್ಬಾಳನ ಧನದ ದಾಹ ಅದನ್ನೆಲ್ಲ ನುಂಗಿಹಾಕಿದೆ. ಹಾಗಾಗಿ ಚಂಚನಸೂರ ಇಲ್ಲಿ ಸಮಬಲ ವಾಗಿ ನಿಂತು 11 ಸ್ಥಾನಗಳನ್ನು ಪಡಕೊಂಡಿದ್ದಾನೆ. ಪಕ್ಷೇತರ ಅಭ್ಯರ್ಥಿಯನ್ನು ದುಡ್ಡಿನಿಂದ ಖರೀದಿಸಿ ಕಾಂಗ್ರೆಸ್‌ನ ಮಾನ ಉಳಿಸಬಹುದೆನಿಸುತ್ತದೆ.

ಸಾರಾಯಿ ದುಡ್ಡಿನ ಮದದಿಂದ ಮೆರೆಯುತ್ತಿದ್ದ ಅಫಜಲಪುರದ ಮಾಜಿ ಶಾಸಕ ಮಾಲಿಕಯ್ಯ ಗುತ್ತೇದಾರನ ಗುತ್ತಿಗೆಯ ಅವಧಿ ಮುಗಿಯುತ್ತಿರುವಂತೆ ಕಾಣುತ್ತಿದೆ. ಹಾಗೇ ನೋಡಿದರೆ ಎಂ. ವೈ. ಪಾಟೀಲ ಹಾಗೂ ಅವರ ಸುಪುತ್ರ ಸಾರಾಸಗಟಾಗಿ ತಮ್ಮ ಮಾನ ಮರ್ಯಾದೆಯನ್ನೆಲ್ಲ ತೆಗೆದಿಟ್ಟು ಗೆಬರಿಕೊಂಡು ತಿನ್ನುವ ಸ್ಪರ್ಧೆಯ ಸದಾವಕಾಶವನ್ನು ಉಪಯೋಗಿಸಿಕೊಳ್ಳದ ಮಾಲಿಕಯ್ಯನಿಂದಾಗಿ ಜೆಡಿಎಸ್ ಇಲ್ಲಿ 12 ಸ್ಥಾನಗಳನ್ನು ಪಡೆದು ಅಧಿಕಾರದ ಕುರ್ಚಿ ಹಿಡಿಯುತ್ತದೆ.


ಜೆಡಿಎಸ್‌ನಿಂದ ಗೆದ್ದು ಶಾಸಕರಾಗಿರುವ ಬಿ. ಆರ್. ಪಾಟೀಲ್ ಎಂಬ ಸಮಾಜವಾದಿ ಸಿದ್ದರಾಮಯ್ಯನವರ ದೋಸ್ತಿ ಹಿಡಿದು ಪುರಸಭೆಯ ಕಾಂಗ್ರೆಸ್ ಟಿಕೆಟ್ ಹಂಚಿಕೆಯನ್ನು ಪಡೆದುಕೊಂಡಿದ್ದರು. ಇದು ಇಲ್ಲಿನ ಕಾಂಗ್ರೆಸ್ ನಾಯಕ, ಮಾಜಿ ಶಾಸಕ ಸುಭಾಷ್ ಗುತ್ತೇದಾರನಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಹಾಗಾಗಿ ಈತನೂ ತಾನೇನು ಕಮ್ಮಿ? ಎಂದು ಹೈಕಮಾಂಡ್‌ಗೆ ತೋರಿಸಿಕೊಳ್ಳಲು ಪಕ್ಷೇತರ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಸುಸ್ತಾಗಿದ್ದಾನೆ. ತನ್ನ ಪ್ರತಿಷ್ಠೆಯನ್ನು ಪಣಕ್ಕಿಟ್ಟ ಬಿ. ಆರ್. ಪಾಟೀಲ್‌ರಿಂದಾಗಿ ಕಾಂಗ್ರೆಸ್ ಇಲ್ಲಿ ಚೇತರಿಸಿಕೊಂಡಿದೆ.




ಬಿ.ಆರ್. ಪಾಟೀಲ್

ಶಹಾಬಾದ ಶಾಸಕ ಸುನಿಲ್ ವಲ್ಯಾಪುರ್ ತನಗೆ ದೊರಕಿದ ಶಾಸಕತ್ವವೇ ಮಹತ್ವದ್ದು, ಅದಂತೂ ದೊರಕಿಯಾಗಿದೆ ಎಂದು ನಿಶ್ಚಿಂತತೆಯಿಂದ ಕೈ ಬಿಸಿಮಾಡಿಕೊಳ್ಳಲು ಹೊರಟಿದ್ದಾನೆ. ಶಾಸಕತ್ವ ಎನ್ನುವುದು ಹಣ ಮಾಡುವ ಒಂದು ದಂಧೆ ಎಂದು ಭಾವಿಸಿರುವ ಇವರಿಂದ ಅಭಿವೃದ್ಧಿ ಯಾವ ದಿಕ್ಕು ಹಿಡಿಯುತ್ತದೆ ಎಂದು ಬಿಚ್ಚಿ ಹೇಳಬೇಕಿಲ್ಲ. ಹೀಗಾಗಿ ಇಲ್ಲಿ 31 ಸ್ಥಾನಗಳಲ್ಲಿ ಕೇವಲ 15 ಸ್ಥಾನಗಳನ್ನು ಪಡಕೊಂಡು ಬಹುಮತದಿಂದ ವಂಚಿತವಾಗಿದೆ. ಬಿಜೆಪಿಯ ಶರಣಪ್ಪ ಹದನೂರು ಫಲಿತಾಂಶ ಪ್ರಕಟವಾಗುತ್ತಲೇ ಜೆಡಿಎಸ್‌ನೊಂದಿಗೆ

ತಿಳಿಸುವಂತೆ ಪೊಲೀಸರು ಮಾಡಿದರಾದರೂ ಪ್ರಜಾವಾಣಿ ಪತ್ರಿಕೆ ಮತ್ತು ಸುವರ್ಣ ಟಿ.ವಿ.ಯವರು ಮಾತ್ರ ಈ ಕುರಿತು ಚಿತ್ರ ಸಮೇತ ವರದಿ ಮಾಡೇಬಿಟ್ಟರು! ಆಗಲೇ ಈ ಸುದ್ದಿ ಹೊರ ಜಗತ್ತಿಗೆ ಗೊತ್ತಾಗಿದ್ದು, ಸೆ. 11ರ ಬೆಳಗ್ಗೆ ಈ ವರದಿಗಾರ ಘಟನೆ ನಡೆದ ಸ್ಥಳಕ್ಕೆ ಹೋದಾಗ ದಾವಣಗೆರೆ ಜಿಲ್ಲಾ ಎಸ್.ಪಿ. ರವೀಂದ್ರ ಪ್ರಸಾದ್ ಪಾಸ್ಟರ್ ಇಮಾನುವೆಲ್ ಮತ್ತು ಸಂಗಡಿಗರಿಗೆ ಹಿತವಚನ ರೂಪದ ಬೆದರಿಕೆಗಳನ್ನು ಹಾಕುತ್ತಿರುವುದು (ಒಡೆದು ಹಾಕಿರುವ ವಸ್ತುಗಳನ್ನು ಬೇಗ ತೆಗೆಸಿ ಎಂದು ಮುಂತಾಗಿ) ಕಂಡು ಬಂದಿತು. "ಈ ಹಿಂದೆ ಎರಡು ಬಾರಿ ಭಜರಂಗದಳದವರು ದಾಳಿ ಮಾಡಿದ್ದರೂ ಅವರ ಮೇಲೆ ಪೊಲೀಸ್ ಇಲಾಖೆ ಕ್ರಮ ಕೈಗೊಂಡಿಲ್ಲ, ಪೊಲೀಸರು ಸಂಘ ಪರಿವಾರಕ್ಕೆ ಬೆಂಬಲ ನೀಡುತ್ತಿರುವಂತಿದೆಯಲ್ಲಾ?" ಎಂದು ಎಸ್.ಪಿ.ಯನ್ನು ಪ್ರಶ್ನಿಸಿದಾಗ "ಅವರ ಮೇಲೆ ಕೇಸು ಹಾಕಿದ್ದೇವೆ" ಎಂದು ಅರ್ಧಂಬರ್ಧ ಸುಳ್ಳು ಮಾತನಾಡಿ ಎಸ್.ಪಿ. ಅಲ್ಲಿಂದ ಹೊರಟುಹೋದರು. ಆದರೆ, ಈ ಸಂಬಂಧ ರಾಜಶೇಖರನನ್ನು ಬಂಧಿಸಿದ ಪೊಲೀಸರು ಈಗಾಗಲೇ ಬಿಡುಗಡೆ ಮಾಡಿದ್ದಾರೆ.


ಪಾಸ್ಟರ್ ಇಮಾನುವೇಲ್


ಎಸ್ಪಿ ರವೀಂದ್ರ ಪ್ರಸಾದ್

ಇನ್ನೊಂದು ವಿಷಯವೇನೆಂದರೆ ಸೆ.10ರ ಸಂಜೆ ಕೆಲವು ಕ್ರೈಸ್ತ ಪಾಸ್ಟರ್‌ಗಳು ಮತ್ತವರ ಅನುಯಾಯಿಗಳು ರಾಮನಗರದಲ್ಲಿ ಏಸುವಿನ ಕುರಿತ ಚಲನಚಿತ್ರವನ್ನು ಪ್ರದರ್ಶಿಸುತ್ತಿದ್ದರು. ಅದೇ ಸ್ಥಳದಲ್ಲಿ ಹಲ್ಲೆಯನ್ನು ನಡೆಸಲು ಯೋಜಿಸಿದ್ದ ಭಜರಂಗಿಗಳಿಗೆ ಅದು ಸಾಧ್ಯವಾಗದೇ ಯಾರೂ ಇಲ್ಲದ ಚರ್ಚಿನ ಮೇಲೆ ದಾಳಿ ನಡೆಸಿ ವಸ್ತುಗಳನ್ನು ಧ್ವಂಸಗೊಳಿಸಿದ್ದಾರೆ. ಈ ವಿಷಯ ಪೊಲೀಸರಿಗೆ ಸ್ಪಷ್ಟವಾಗಿ ಗೊತ್ತಿದೆ! ಎಲ್ಲಾ ಜನಾಂಗದ ಜನತೆ ಸೌಹಾರ್ದಯುತವಾಗಿ ಬದುಕಬೇಕೆಂಬ ಸಂಪೂರ್ಣ ಕಾಳಜಿ ಪೊಲೀಸರಿಗೆ ಇರದಿದ್ದರೂ ಬೇಡ ಆದರೆ ಕಾನೂನನ್ನು ಗೌರವಿಸುವ ಕಿಂಚಿತ್ತು ಪ್ರಯತ್ನವನ್ನಾದರೂ ಇವರು ಮಾಡಿದರೆ ಈ ಚರ್ಚಿನ ಮೇಲೆ ದಾಳಿ ನಡೆಸಿದವರು ಯಾರೆಂಬುದನ್ನು ಪತ್ತೆ ಹಚ್ಚಬಹುದು. ಆದರೆ ಪೊಲೀಸರು ಈ ಕೆಲಸವನ್ನು ಮಾಡುತ್ತಾರೆಯೇ?

ಪ್ರತಿಭಟನೆಗೆ ತಯಾರಿ- ಪೊಲೀಸರ ಅಡ್ಡಗಾಲು

ಒಂದಲ್ಲ ಮೂರು ಬಾರಿ ದಾಳಿಗೆ ಒಳಗಾದ ಕ್ರೈಸ್ತ ಸಮುದಾಯ ಅನಿವಾರ್ಯವಾಗಿ 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ' ಅಡಿಯಲ್ಲಿ ಪ್ರತಿಭಟನೆಗೆ ಮುಂದಾಗಿದ್ದೇ ಪೊಲೀಸರಿಗೆ ಉರಿ ಹತ್ತಿಕೊಂಡಂತಾಗಿ ಪ್ರತಿಭಟನೆಗೆ ಪರವಾನಗಿ ಕೇಳಲು ಹೋದಾಗ, ಈ ಪ್ರತಿಭಟನೆ ಬೇಕಾ? ಬಹಳ ಜನ ಸೇರಬಾರದು! ಎಂದು ಡಿ.ವೈ.ಎಸ್.ಪಿ. ಮೂರ್ತಿ ಚೌಕಾಶಿ ನಡೆಸಿದರು. ಅಕ್ಟೋಬರ್ 3ರ ಸಂಜೆಯ ಹೊತ್ತಿಗೆ ಎಸ್.ಪಿ. ರವೀಂದ್ರಪ್ರಸಾದ್ ಪಾಸ್ಟರ್ ಇಮಾನುವೆಲ್‌ಗೆ ಫೋನು ಮಾಡಿ ಭಾಷಾಭಿಮಾನ ದಿಂದಲಾದರೂ ಐಕ್ಯತೆಯನ್ನು ಒಡೆಯಬಹುದೆಂದು ತಮಿಳಿನಲ್ಲಿ ಮಾತನಾಡಿ 'ಪ್ರತಿಭಟನೆ ಮಾಡಬೇಡಿ...' ಎಂದು ಪ್ರಾರಂಭಿಸಿ, ಕೋಮು ಸೌಹಾರ್ದ ವೇದಿಕೆ ನಕ್ಸಲೀಯರನ್ನು ಬೆಂಬಲಿಸುವ ಸಂಘಟನೆ, ಅವರನ್ನು ಸೇರಿಸಿಕೊಳ್ಳಬೇಡಿ ಎಂಬಿತ್ಯಾದಿ ಕುತಂತ್ರಗಳನ್ನು ಹೆಣೆದಾಗ ಇಮಾನುವೆಲ್ 'ನಾವು ನೊಂದಿದ್ದೇವೆ, ಇಂತಹ ಸಂದರ್ಭದಲ್ಲಿ ಕೋ.ಸೌ.ವೇ. ನಮ್ಮ ಬೆಂಬಲಕ್ಕೆ ನಿಂತಿದೆ ನಾಳೆ ನಾವು ಪ್ರತಿಭಟನೆಯನ್ನು ಮಾಡಿಯೇ ತೀರುತ್ತೇವೆ' ಎಂದಿದ್ದಾರೆ. ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಶಾಂತಿಯುತ ಪ್ರತಿಭಟನೆಗಳು ಇಲ್ಲಿನ ಪೊಲೀಸರಿಗೆ ಸಮಸ್ಯೆಯಾಗಿ ಕಾಣುವುದಾದರೆ ಸಂಘ ಪರಿವಾರದವರು ಈ ಹಿಂದೆ 'ವಿರಾಟ್ ಹಿಂದೂ ಸಮಾಜೋತ್ಸವ' ನಡೆಸುತ್ತಿದ್ದ ಸಂದರ್ಭದಲ್ಲಿ ಹತ್ತಿಪ್ಪತ್ತು ಸಾವಿರ ಜನರನ್ನು ಮೆರವಣಿಗೆಗೆ ತಂದು ಕುಡಿದ ಮತ್ತಿನಲ್ಲಿ ಕುಣಿದು, ವಿಕಾರವಾಗಿ ಕೇಕೆ ಹಾಕಿ ರಸ್ತೆ ಸಂಚಾರಕ್ಕಷ್ಟೇ ಅಲ್ಲದೇ ಸಮಾಜದ ಶಾಂತಿಯುತ ಬದುಕಿಗೆ ಭಂಗ ತಂದಿದ್ದು ಇಲ್ಲಿನ ಪೊಲೀಸರಿಗೇಕೆ ಸಮಸ್ಯೆಯಾಗಿ ಕಾಣಲಿಲ್ಲ? ಸೌಹಾರ್ದತೆಗಾಗಿ ಒಂದೆರಡು ಸಾವಿರ ಜನರು ಕೋಮುವಾದಿಗಳ ವಿರುದ್ಧವಾಗಿ ಶಾಂತಿಯುತವಾಗಿ ಪ್ರತಿಭಟಿಸಿದರೆ ಪೊಲೀಸರೇಕೆ ತೊಣಚಿ ಹೊಕ್ಕಂತಾಡುತ್ತಾರೆ? ಮೆರವಣಿಗೆಯಲ್ಲಿ ಇಷ್ಟೇ ಜನ ಇರಬೇಕು, ಇಂಥದ್ದೇ ರಸ್ತೆಯಲ್ಲಿ ಹೋಗಬೇಕೆಂಬ ಸಲ್ಲದ ನಿಬಂಧನೆಗಳನ್ನೇಕೆ ವಿಧಿಸುತ್ತಾರೆ? ಕಾನೂನು ರಕ್ಷಿಸಬೇಕಾದ ಪೊಲೀಸರು ಸಂಘ ಪರಿವಾರದವರ ಸ್ವೇಚ್ಛಾಚಾರಕ್ಕೆ ಅನುಮತಿ ಕೊಟ್ಟು ಕೋಮು ಸೌಹಾರ್ದವನ್ನು ಬಯಸುವವರಿಗೆ ಇಲ್ಲದ ಹಣೆಪಟ್ಟಿಗಳನ್ನು ಹಚ್ಚುವುದು ಸಮಾಜದ ಸೌಹಾರ್ದಯುತ ಬದುಕನ್ನು ಸ್ವತಃ ಪೊಲೀಸರೇ ನಾಶಪಡಿಸಿದಂತಾಗುವುದಿಲ್ಲವೇ? - ಈ ಪ್ರಶ್ನೆಗಳಿಗೆ ಇಂದಲ್ಲಾ ನಾಳೆ ಪೊಲೀಸರು ಉತ್ತರಿಸಲೇಬೇಕಾಗುತ್ತದೆ.


ಪ್ರಕರಣವನ್ನು ಖಂಡಿಸಿ ಕೋಮು ಸೌಹಾರ್ದ ವೇದಿಕೆಯ ಪ್ರತಿಭಟನಾ ಮೆರವಣಿಗೆ


ಪ್ರತಿಭಟನೆ ನೀಡಿದ ಹೊಸ ಆಶಯ

ಅಕ್ಟೋಬರ್ 4ರಂದು ದಾಳಿಗೊಳಗಾದ ಚರ್ಚಿನ ಮುಂಭಾಗದಲ್ಲಿ 'ಕರ್ನಾಟಕ ಕೋಮು ಸೌಹಾರ್ದ ವೇದಿಕೆ', ಜಿಲ್ಲಾ ಕ್ರೈಸ್ತ ಒಕ್ಕೂಟ, ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ (ಬಿ. ಕೃಷ್ಣಪ್ಪ ಸ್ಥಾಪಿತ) ಮತ್ತು ಜನಪರ ವಿದ್ಯಾರ್ಥಿ ಸಂಘಟನೆಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ಪ್ರಾರಂಭವಾಗಿ ನಗರದ ಮುಖ್ಯ ರಸ್ತೆಗಳ ಮೂಲಕ ಹಾದು, ಗಾಂಧಿ ಸರ್ಕಲ್‌ನಲ್ಲಿ ಮಾನವ ಸರಪಳಿಯನ್ನು ನಿರ್ಮಿಸಿ, ಅಲ್ಲಿಂದ ಜಯಮೃತ್ಯುಂಜಯ ಶರಣರೊಂದಿಗೆ ಒಟ್ಟು ಆರೇಳು ಕಿ.ಮೀ. ಕಾಲ್ನಡಿಗೆ ಮೂಲಕ ಜಿಲ್ಲಾಧಿಕಾರಿಗಳ ಕಚೇರಿ ಸೇರಿ ಒಂದು ಗಂಟೆಯ ಕಾಲ ಉರಿಬಿಸಿಲಿನಲ್ಲಿ ಬಹಿರಂಗ ಸಭೆ ನಡೆಸಿ, ಭಜರಂಗಿಗಳ ದಾಳಿ - ಪೊಲೀಸರ ಪಕ್ಷಪಾತ ನೀತಿಯ ಕುರಿತು ಕರ್ನಾಟಕ ಮುಖ್ಯಮಂತ್ರಿಗೆ ತಲುಪಿಸಲು ಜಿಲ್ಲಾಧಿಕಾರಿಗೆ ಮನವಿ ಪತ್ರವನ್ನು ಅರ್ಪಿಸಲಾಯಿತು. ಆದರೆ ಗೊಂದಲ ಆತಂಕಗಳಿಂದ ಪ್ರತಿಭಟನೆಗಿಳಿದಿದ್ದ ಕ್ರೈಸ್ತ ಸಮುದಾಯಕ್ಕೆ ಈ ಪ್ರತಿಭಟನೆ ಹೊಸ ಆಶಯ ಮತ್ತು ತಮ್ಮ ರಕ್ಷಣೆಗಾಗಿ ಇತರರೂ ಇದ್ದಾರೆಂಬ ಖಚಿತ ಭರವಸೆಯನ್ನು ಮೂಡಿಸಿದೆ.

■ ಚಂದ್ರಶೇಖರ ತೋರಣಘಟ್ಟ

ದೋಸ್ತಿಯ ಮಾತಾಡಿದ್ದಾರೆ. ಹಾಗೇನಾದರೂ ಲೆಕ್ಕಾಚಾರ ನಡೆದರೆ ಕಾಂಗ್ರೆ ಇಲ್ಲಿ ಮೂಲೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ.

ಡಾ. ವೀರಬಸವಂತರೆಡ್ಡಿ ಮುದ್ನಾಳ್ ಎಂಬ ಸಂಭಾವಿತ ಜೆಡಿಎಸ್ ಶಾಸಕನ ಸರಳತೆಗಳೇ ಜೆಡಿಎಸ್‌ಗೆ ಇಲ್ಲಿ ವರದಾನವಾಗಿದೆ. ಹಾಗಾಗಿ ನಗರಸಭೆಯ 31 ಸ್ಥಾನಗಳಲ್ಲಿ 18 ಸ್ಥಾನವನ್ನು ತನ್ನ ಮಡಿಲಿಗೆ ಹಾಕಿಕೊಂಡಿದೆ. ಖರ್ಗೆ, ಡಾ. ಮಲಕರೆಡ್ಡಿ, ಸುಭಾಸಗೌಡ ಕರಣಗಿ, ಚೆನ್ನಾರೆಡ್ಡಿ ತುನ್ನೂರು, ಮಲ್ಲಣ್ಣಗೌಡ ಕೌಳೂರ, ಶರಣಗೌಡ ಮಲ್ಹಾರ, ಸಿದ್ಧಲಿಂಗರೆಡ್ಡಿ ಉಳ್ಳೇಸೂಗೂರರ ನಡುವಿನ ಸಮರ ಕಾಂಗ್ರೆ ಇಲ್ಲಿ ಹಳ್ಳದ ಹಾದಿ ಹಿಡಿದಿದೆ.


ದರ್ಶನಾಪುರ

ಚಿಂಚೋಳಿಯಲ್ಲಿ ಹೇಗಾದರೂ ಸೈ ಶಾಸಕ ವೈಜನಾಥ ಪಾಟೀಲರನ್ನು ಹಣಿಯಬೇಕೆಂದು ಸಂಕಲ್ಪಿಸಿರುವ ಎಚ್. ಡಿ. ಕುಮಾರಸ್ವಾಮಿಯ ಸರಕಾರ ಇಕ್ಕಟ್ಟಿಗೆ ಸಿಲುಕಿಸುವ ನಾಟಕ ಯಾರೂ ಅರಿಯದೇನಾಗಿರಲಿಲ್ಲ, ಕೈಲಾಸನಾಥ ಪಾಟೀಲ ಗುಂಪಿನ 11 ಜನ ಅಭ್ಯರ್ಥಿಗಳು ಗೆದ್ದುಬಂದಿದ್ದಾರೆ. ವೈಜನಾಥ ಪಾಟೀಲರ ಪರವಾಗಿ ಪಕ್ಷೇತರರಾಗಿ ನಿಂತಿರುವ 7 ಜನ ಅಭ್ಯರ್ಥಿಗಳು ಗೆದ್ದು ಬಂದು ಸಂತೃಪ್ತಿ ಪಡಬೇಕಾಗಿದೆ.


ಆಡಳಿತ ಪಕ್ಷದ ದುರಾಡಳಿತವೇ ಆ ಪಕ್ಷಗಳ ಅಭ್ಯರ್ಥಿಗಳಿಗೆ ಮುಳುವಾಗುತ್ತದೆ, ಆ ಕಾರಣದಿಂದ ತಮ್ಮನ್ನು ತಾವೇ ಸೋಲಿಸಿಕೊಳ್ಳುತ್ತಾರೆ ಎಂದು ಭಾವಿಸಿದ್ದ ಕಾಂಗ್ರೆಗಳು ಎಂದಿನಂತೆ ಗಡದ್ದಾಗಿ ನಿದ್ದೆ ಹೊಡೆಯುತ್ತಿದ್ದರು. ಆದರೆ ಕಾಲ ಬದಲಾಗಿದೆ. ಕಾಲಕ್ಕೆ ತಕ್ಕಂತೆ ಬದಲಾಗದ ಕಾಂಗ್ರೆಗಳು ತಮ್ಮ ಫ್ಯೂಡಲ್ ಗುಣಗಳನ್ನು ಮುಂದುವರೆಸಿಕೊಂಡು ಹೋದರೆ ಕಲಬುರ್ಗಿಯಲ್ಲಷ್ಟೆ ಅಲ್ಲ, ಇಡೀ ಕರ್ನಾಟಕದಲ್ಲಿಯೇ ಸೋಲ[illegible] ಹಿಡಿಯಬೇಕಾಗುತ್ತದೆ.

ಆ ಎಚ್ಚರ ಅವರಲ್ಲಿ ಮೂಡುವುದೆಂದು?

■ ವಿಶ್ವಾರಾಧ್ಯ ಸತ್ಯಂಪೇಟೆ

ತಿಂದು ತೇಗಿರುವ ಗಡವಗಳು

ಖಾನಾಪುರ ಪಂಚಾಯತಿಯನ್ನು ಸಂಪೂರ್ಣ ರಾಜ್ಯ ರಾಜಕಾರಣಿಗಳೆಲ್ಲ ಕುರ್ಚಿಯ ದೊಂಬರಾಟದಲ್ಲಿ ತೊಡಗಿದ್ದರೆ ಇತ್ತ ಅಧಿಕಾರಿಗಳು ಯಾವಾಗ ತಿಂದು ತಿಪ್ಪೆ ಸಾರಿಸೇವು ಎಂದು ಸಜ್ಜಾಗಿರುವಂತಿದೆ. ಕಲಬುರ್ಗಿಯಲ್ಲಂತೂ ಶರಣಬಸಪ್ಪ ದರ್ಶನಾಪುರನ ಕೃಪಾಕಟಾಕ್ಷವೋ ಅಥವಾ ಆತನ ಕಾಲುಗುಣವೋ ಏನೋ ಇಲ್ಲಿನ ಬಹುತೇಕ ಅಧಿಕಾರಿಗಳು, ಮರಿ ಪುಢಾರಿಗಳು ಸರಕಾರದ ಖಜಾನೆಗೆ ಹಾಡುಹಗಲೇ ಕನ್ನಹಾಕತೊಡಗಿದ್ದಾರೆ.



ರಾಜ್ಯ ಮಟ್ಟದ ನಾಯಕರನ್ನು ತಮ್ಮ ಆರಾಧ್ಯದೈವ ಎಂದು ನಂಬಿರುವ ಇಲ್ಲಿನ ಪುಢಾರಿಗಳು ಸರಕಾರದ ಅನುದಾನದ ಹಣವನ್ನು ಯಾವ ಕೆಲಸ ಬೊಗಸೆ ಮಾಡದೆ ನೇರ ನುಂಗಿ ಗಪ್-ಚುಪ್ ಕುಳಿತುಕೊಳ್ಳುತ್ತಾರೆ. ಕಲಬುರ್ಗಿ ಜಿಲ್ಲೆಯ ಶಹಾಪುರ ತಾಲೂಕಿನ ಖಾನಾಪುರ ಗ್ರಾಮ ಪಂಚಾಯತಿಯ ಕಥೆ ನೋಡಿದರೆ ಮೇಲಿನ ಮಾತು ನೂರಕ್ಕೆ ನೂರು ಸತ್ಯ ಎಂದು ಮನವರಿಕೆಯಾಗುತ್ತದೆ.

ಖಾನಾಪುರ ಗ್ರಾಮದ ಹಾಗೂ ಆ ಪಂಚಾಯತಿಗೆ ಸೇರಿದ ಹಳ್ಳಿಗಳ ಕುಡಿಯುವ ನೀರು, ರಸ್ತೆ, ಚರಂಡಿ, ಶೌಚಾಲಯ, ಸಾರ್ವಜನಿಕ ಲೈಟುಗಳಿಗೆ ಸಲ್ಲಬೇಕಾದ ಹಣವನ್ನೆಲ್ಲ ಸಂಪೂರ್ಣವಾಗಿ ಇಲ್ಲಿನ ಕಾರ್ಯದರ್ಶಿ ಸಾಬಣ್ಣ ಹತ್ತಿಗೂಡೂರು ಹಾಗೂ ಅಧ್ಯಕ್ಷ ವಿಶ್ವನಾಥರೆಡ್ಡಿ ಎನ್. ಗಂಗೇಪುರಿ ಎಂಬ ಮಹಾಶಯರೇ ಅನಾಮತ್ತಾಗಿ ತಿಂದುಹಾಕಿದ್ದಾರೆ. ಸದಾ ಕುಡಿದು ತೂರಾಡುತ್ತಲೇ ಇರುವ ಪಂಚಾಯತಿ ಕಾರ್ಯದರ್ಶಿಗಂತೂ ಕೈಲಿ ಪೆನ್ನು ಹಿಡಿದು ಒಂದೇ ಒಂದು ಅಕ್ಷರವನ್ನು ಬರೆಯಲಿಕ್ಕೆ ಬರುವುದಿಲ್ಲ, ಅವನಿಗಿಷ್ಟು ಕುಡಿಯಲು ಹಣ ಕೊಟ್ಟು ಪಂಚಾಯತಿಯ ಎಲ್ಲಾ ಬಿಲ್ಲುಗಳನ್ನು ವಿಶ್ವನಾಥರೆಡ್ಡಿ ತನ್ನ ಬತ್ತಳಿಕೆಗೆ ಸೇರಿಸಿಕೊಂಡಿದ್ದಾನೆ. ಯಾರಾದರೂ ಈ ಬಗ್ಗೆ ಕೇಳಿದರೆ "ಯಾದಗಿರಿಯ ಎಂ.ಎಲ್.ಎ. ಡಾ. ವೀರಬಸವಂತರೆಡ್ಡಿ ಹಾಗೂ ದರ್ಶನಾಪುರ ನಮ್ಮ ಜನಾಂಗದವರೇ ಆಗಿರುವಾಗ ಯಾರೇನು ಮಾಡುತ್ತಾರೆ? ಅವರೇನು ತಿನ್ನುವುದಿಲ್ಲವೆ? ಈ ಸಂಪೂರ್ಣ ಹಣ ನಾನಷ್ಟೇ ತಿನ್ನುತ್ತೇನೆಯೆ? ಇದರಲ್ಲಿ ಅವರದೂ ಪಾಲಿದೆ" ಎಂದು ಬಾಯಿಗೆ ಬಂದಂತೆಲ್ಲ ಅರಚುತ್ತಾನೆ.

ಬೆಳಗಾವಿ


ಅಂದಂತೆ ತೀರಾ ಇತ್ತೀಚೆಗೆ ಗ್ರಾಮ ಸ್ವರಾಜ್ ಯೋಜನೆ ಅಡಿಯಲ್ಲಿ ಬಂದಿರುವ ಹಣದಲ್ಲಿ 6,40,000 ರೂಪಾಯಿಗಳನ್ನು ಯಾವ ಕಾಮಗಾರಿಗೂ ಟೆಂಡರ್ ಕರೆಯದೆ, ನಿಯಮಾವಳಿಗಳನ್ನು ಗಾಳಿಗೆ ತೂರಿ ಗುಳುಂ ಮಾಡಿದ್ದಾರೆ. ಪಂಚಾಯತಿಯ ಕೃ. ಗ್ರಾಮೀಣ ಬ್ಯಾಂಕ್ ಖಾತೆ ಸಂಖ್ಯೆ 104310 ಯನ್ನು ಗಮನಿಸಿದರೆ ಇದರ ಸತ್ಯ ಗೊತ್ತಾಗುತ್ತದೆ. ದಿನಾಂಕ 20-7-2007 ರಂದು 7800, ದಿ 23 ರಂದು ಒಂದು ಲಕ್ಷ, ದಿ 27 ರಂದು 70 ಸಾವಿರ, ದಿ 31 ರಂದು ಒಂದು ಲಕ್ಷ, ದಿ 3-8-2007 ರಂದು 63 ಸಾವಿರ (ಮೂರು ಪ್ರತ್ಯೇಕ ಚೆಕ್‌ಗಳ ಮೂಲಕ), ದಿ 7 ರಂದು 50 ಸಾವಿರ, ದಿ 13 ರಂದು 70 ಸಾವಿರ, ದಿ 24 ರಂದು 30 ಸಾವಿರ, ದಿ 1-9-2007 ರಂದು 25 ಸಾವಿರ ಹಾಗೂ ದಿ 13 ರಂದು 50 ಸಾವಿರ. ಹೀಗೆ ಒಟ್ಟು 6 ಲಕ್ಷ ನಾಲ್ಕು ಸಾವಿರ ರೂಪಾಯಿಗಳನ್ನು ಸ್ವಂತಕ್ಕೆ ಎಂದು ಬರೆದುಕೊಂಡು ಹಣ ಲಪಟಾಯಿಸಿದ್ದಾರೆ. ಪಂಚಾಯತಿಯ ಸದಸ್ಯರೇ ಆಗಿರಲಿ, ಅಧ್ಯಕ್ಷರೇ ಆಗಿರಲಿ ಹೀಗೆ ಸ್ವತಃ ತಮ್ಮ ಹೆಸರಿನ ಮೇಲೆ (ಚೆಕ್ ಮೂಲಕ) ದುಡ್ಡು ಪಡೆಯಬಾರದು ಎಂಬ ಸರಕಾರದ ನಿಯಮಗಳಿವೆ. ಆದರೆ ಅವೆಲ್ಲ ಇವರಿಗೆ ಯಾವ ಲೆಕ್ಕಕ್ಕೆ?



ಇದಷ್ಟೇ ಅಲ್ಲದೆ, ಖಾನಾಪುರ ಮತ್ತು ಗುಂಡಳ್ಳಿಯ ಮಿನಿ ವಾಟರ್ ಸಪ್ಲೈಗಾಗಿ ತಂದ ಜನರೇಟರ್ ಒಂದು ಕಚೇರಿಯಿಂದ ಮಟಾಮಾಯವಾಗಿದೆ. ಕೇಳಿದರೆ ಅಲ್ಲಿದೆ-ಇಲ್ಲಿದೆ ಎಂಬ ಅಸ್ಪಷ್ಟ ಉತ್ತರ ದೊರಕುತ್ತದೆ. ಮಳೆ ನೀರಿನ ಕೊಯ್ಲಿನ ಅಡಿಯಲ್ಲಿ ಗುಂಡಳಿ ತಾಂಡಾಕ್ಕೆ 50 ಸಾವಿರ, ಖಾನಾಪುರ ಶೌಚಾಲಯಕ್ಕೆ ಬಂದಿರುವ 40 ಸಾವಿರ ರೂಪಾಯಿ, ಸಂಪೂರ್ಣ ಸ್ವಚ್ಛತಾ ಆಂದೋಲನದ ಅಡಿಯಲ್ಲಿ ಬಂದಿರುವ 3 ಲಕ್ಷ ರೂಪಾಯಿ... ಹೀಗೆ ಜನರಿಗೆ ಸವಲತ್ತುಗಳನ್ನು ನಿರ್ಮಿಸಲೆಂದು ಬಂದಿದ್ದ ಬಹಳಷ್ಟು ಹಣವನ್ನು ಅನಾಮತ್ತಾಗಿ ನುಂಗಿ ಕುಂತಿದ್ದಾರೆ. ಇವರಿಬ್ಬರ ಈ ದೋಚುವಿಕೆಯ ಬಗ್ಗೆ ಗುಮಾನಿ ವ್ಯಕ್ತಪಡಿಸಿದ ಪಂಚಾಯತಿ ಸದಸ್ಯ ಭೀಮರಾಯ ಹೊಸ್ಮನಿಯ ಬಾಯಿ ಮುಚ್ಚಿಸಲು ದಿ. 17.9.2007 ರಂದು ಮತ್ತೆ 8 ಸಾವಿರ ರೂಪಾಯಿಗಳನ್ನು ಚೆಕ್ ನಂ. 1909387 ಮೂಲಕ ನೀಡಿದ್ದಾರೆ.

ರಾಜಕೀಯಕ್ಕೆ ಬರುವುದೆಂದರೆ ಹಣಮಾಡಿಕೊಳ್ಳುವುದು ಎಂದೇ ಭಾವಿಸಿರುವ ಇಂತಹವರಿಗೆ ಕಠಿಣ ಶಿಕ್ಷೆ ವಿಧಿಸಿ ಜೈಲಿಗೆ ಕಳಿಸಬೇಕಿದೆ. ಇಲ್ಲದೇ ಹೋದರೆ ಕೊಟ್ಟವ ಕೋಡಂಗಿ, ತಿಂದವ ಈರಭದ್ರ ಎಂಬಂತಾಗುತ್ತದೆ ಅಷ್ಟೆ! ಹಾಡು ಹಗಲೇ ದರೋಡೆ ನಡೆಸಿದ ಗ್ರಾಮ ಪಂಚಾಯತಿ ಅಧ್ಯಕ್ಷನ ಮೇಲೆ, ಸದಸ್ಯರೆಂಬ ಗಡವಗಳ ಮೇಲೆ ಕ್ರಮ ಕೈಗೊಳ್ಳುವ ತಾಕತ್ತು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಪಿ.ಜಿ.ಜಾಫರ್ ಅವರಿಗಾಗಲಿ ರಾಜ್ಯ ಪಂಚಾಯತ್ ಸಚಿವರಿಗಾಗಲಿ ಇದೆಯೆ?

■ ವರದಿಗಾರ



ಇಟಾಸ್ಕಾ ಎಂಬುದು ಏನು?

ಕಟ್ಟಾನ ನಕಲಿ ಕಂಪೆನಿಗೆ 448 ಎಕರೆ!

ರಾ. ಸೋಮನಾಥ್

ರೈತನ ಜೀವಕ್ಕೂ ಆತನ ಭೂಮಿಗೂ ಸರ್ಕಾರ ಕಟ್ಟುವ ಬೆಲೆಯೇನು? ಯಾರೋ ಭೂಗಳ್ಳನೊಬ್ಬ ತಾನು ಐಟಿ ಕಂಪೆನಿ ಮಾಡ್ತೀನಿ ಎಂದುಬಿಟ್ಟರೆ ಆತನಿಗೆ ರೈತರ ಭೂಮಿ ಕಿತ್ತುಕೊಡಬಹುದೆ? ನಿಜಕ್ಕೂ ಆತ ಐಟಿ ಪಂಡಿತನಾ? ಆತ ಹುಟ್ಟುಹಾಕಿದ ಸೋಕಾಲ್ಡ್ ಕಂಪೆನಿ ಅಸ್ತಿತ್ವದಲ್ಲಿದೆಯಾ? ಆತನಿಗೆ ಐಟಿ ಪಾರ್ಕ್ ಮಾಡುವ ಯೋಗ್ಯತೆಯಿದೆಯಾ?

ಇತ್ಯಾದಿ ಯಾವುದನ್ನೂ ವಿವೇಚಿಸದೇ ದೇವನಹಳ್ಳಿ ಅಂತರಾಷ್ಟ್ರೀಯ ಏರ್‌ಪೋರ್ಟ್ ಹಿಂಭಾಗದ ನೂರಾರು ರೈತರ ಬದುಕಿಗೆ ಬೆಂಕಿ ಇಟ್ಟದ್ದೆ ಕೆಐಎಡಿಬಿ (ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ).

ಯಾವುದು ನಕಲಿ ಕಂಪೆನಿ? ಅಂಥ ಕಂಪೆನಿಗೆ ನೂರಾರು ಎಕರೆ ಭೂಮಿಯನ್ನು ಕಿತ್ತುಕೊಡಬಹುದಾ? ಇತ್ಯಾದಿ ಪರಿಶೀಲಿಸಬೇಕಿದ್ದ ಭಾರೀ ಕೈಗಾರಿಕಾ ಮಂತ್ರಿಯೇ ನಕಲಿ ಐಟಿ ಕಂಪೆನಿಯೊಂದನ್ನು ಹುಟ್ಟುಹಾಕಿ, ಆ ನೆಪದಲ್ಲಿ ದುಬಾರಿ ಬೆಲೆಬಾಳುವ ನಾನೂರ ನಲವತ್ತೆಂಟು ಎಕರೆಗಳಷ್ಟು ಭೂಮಿಯನ್ನು ದೋಚಿದ ಕತೆ ನಿಜಕ್ಕೂ ರೋಚಕವೇ!


ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ನಕಲಿ ಕಂಪೆನಿಗಳ ಹೆಸರಲ್ಲಿ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ 15 ಊರುಗಳ 3644 ಎಕರೆಗಳಷ್ಟು ಭೂಮಿಗೆ ಗತಿ ಕಾಣಿಸಿದ ಕತೆಯನ್ನು ತಾವೆಲ್ಲ ಓದಿರುತ್ತೀರಿ. ಈ ಪೈಕಿ ಬಂದಿಕೋಡಿಗೇಹಳ್ಳಿಯೂ ಒಂದು. ಅದು ಬೆಂಗಳೂರು ಉತ್ತರ ತಾಲ್ಲೂಕು ಜಾಲ ಹೋಬಳಿಯ ದಲಿತರೇ ಬಹುಸಂಖ್ಯೆಯಲ್ಲಿರುವ ಪುಟ್ಟ ಊರು. ಅಲ್ಲಿ ITASCA ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಎಂಬ ಕಂಪೆನಿಯೊಂದಕ್ಕೆ ಐಟಿ ಪಾರ್ಕ್‌ಗೆಂದು ಕೆಐಎಡಿಬಿಯು 2007 ರ ಜೂನ್ ತಿಂಗಳಲ್ಲಿ ಇದೇ ಬಂದಿಕೋಡಿಗೇಹಳ್ಳಿಯ ನಾನೂರ ನಲವತ್ತೆಂಟು ಎಕರೆಗಳಷ್ಟು ದಲಿತರ ಭೂಮಿಯನ್ನು ವಶಪಡಿಸಿಕೊಳ್ಳುತ್ತದೆ.

ಅದೂ SEZ ಅಂದರೆ ವಿಶೇಷ ವಿತ್ತ ವಲಯದ ಹೆಸರಲ್ಲಿ! ಈ ಬಗ್ಗೆ ಅಷ್ಟೇ ತರಾತುರಿಯಲ್ಲಿ ಗೆಜೆಟ್ ನೋಟಿಫಿಕೇಷನ್ನೂ ಹೊರಬೀಳುತ್ತದೆ. ಸುದ್ದಿ ಕೇಳಿದ್ದೇ ಬಂದಿಕೋಡಿಗೇಹಳ್ಳಿಯ ದಲಿತರೆಲ್ಲ ಎದೆಬಡಿದುಕೊಂಡು ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡುವಿನ ಕಾಲಿಗೆ ಬೀಳುತ್ತಾರೆ. ಪ್ರತಿಭಟಿಸುತ್ತಾರೆ. ಮುಖ್ಯಮಂತ್ರಿಗೆ ಮನವಿ ಕೊಡುತ್ತಾರೆ. ಏನೇ ಅತ್ತೂ ಕರೆದು ಬೊಬ್ಬಿಟ್ಟರೂ ಕೈಗಾರಿಕಾ ಮಂತ್ರಿ ಕಟ್ಟಾ ಮಾತ್ರ ಕರಗಲೇ ಇಲ್ಲ.

ಕಾರಣ: ITASCA ಎಂಬುದು ಭಾರೀ ಕೈಗಾರಿಕಾ ಮಂತ್ರಿ ಕಟ್ಟಾನೇ ಭೂದರೋಡೆಗೆಂದು ಹುಟ್ಟುಹಾಕಿದ ನಕಲಿ ಐಟಿ ಕಂಪೆನಿಯಾಗಿತ್ತು!


ಹಿಂದೆ ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಇನ್‌ಫೋಸಿಸ್‌ನಂಥ ಅಪ್ಪಟ ಐಟಿ ಕಂಪೆನಿ ಸರ್ಜಾಪುರ ರಿಂಗ್‌ರಸ್ತೆಯ ಬೆಳ್ಳಂದೂರಿನಲ್ಲಿ ಕೇಳಿದ್ದ ನೂರಿಪ್ಪತ್ತು ಎಕರೆಯ ಬೇಡಿಕೆಯನ್ನೇ ಸರ್ಕಾರ ತಿರಸ್ಕರಿಸಿತ್ತು. ಅಂದರೆ ಈ ITASCA ಕಂಪೆನಿ ಇನ್‌ಫೋಸಿಸ್‌ಗಿಂತಲೂ ಶ್ರೇಷ್ಠ ಐಟಿ ಕಂಪೆನಿಯಾಗಿರಲೇಬೇಕಲ್ಲ? ಅದು ಅರ್ಜಿ ಹಾಕಿದ ಮಾತ್ರಕ್ಕೇ ತಲೆಬುಡ ಕೂಡ ವಿಚಾರಿಸದೇ 448 ಎಕರೆ ರೈತರ ಭೂಮಿ ಕಸಿಯಲು KIADB ಮುಂದಾಗುತ್ತದೆಯೆಂದರೆ, ಇದು ಇನ್ನೆಂಥಾ ಐಟಿ ಕಂಪೆನಿಯಿರಬೇಕು?

ತಮಾಷೆಯೆಂದರೆ ITASCA ಎಂಬ ಐಟಿ ಕಂಪೆನಿಯೇ ಅಸ್ತಿತ್ವದಲ್ಲಿಲ್ಲ!



ಮಲ್ಲೇಶ್ವರದ ಈ ಮನೆಯೇ ಇಟಾಸ್ಕಾದ ಕಾರ್ಪೊರೇಟ್ ಕಚೇರಿ

ಈ ಬಗ್ಗೆ ಪತ್ರಿಕೆ ಸಂಗ್ರಹಿಸಿದ ಮಾಹಿತಿಗಳೂ ವಿಚಿತ್ರವಾಗಿವೆ. ITASCA ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಪ್ರೈವೇಟ್ ಲಿಮಿಟೆಡ್ ಎಂಬುದು 2004 ರ ಜೂನ್ 11 ರಂದು ರಿಜಿಸ್ಟ್ರಾರ್ ಆಫ್ ಕಂಪೆನೀಸ್ ಆಕ್ಟ್ ಪ್ರಕಾರ ನೋಂದಾವಣೆಗೊಂಡಿದ್ದು ನಿಜ. ಅದು 2006 ರ ಆಗಸ್ಟ್ 24 ರಂದು ಕರ್ನಾಟಕ ಉದ್ಯೋಗ ಮಿತ್ರಕ್ಕೆ ವಿಚಿತ್ರ ಅರ್ಜಿಯೊಂದನ್ನು ಹಾಕುತ್ತದೆ. ತಾನು ಈಗಾಗಲೇ ಐಟಿ ಉದ್ದಿಮೆಯ ಯಶಸ್ವಿ ಕಂಪೆನಿಯೆಂದೂ, Uni and Multi Dimensional ಕಂಪ್ಯೂಟರ್ ಸೇವೆಯಲ್ಲಿ ತಾನು ಪರಿಣಿತವೆಂದೂ ಕಂಪ್ಯೂಟರ್ ಟ್ರೈಮ್ಸ್, ಹಾರ್ಡ್‌ವೇರ್ಸ್, ಸಾಫ್ಟ್‌ವೇರ್ ಮೇಂಟೇನೆನ್ಸ್, ಔಟ್ ಸೋರ್ಸಿಂಗ್, ಸಿಸ್ಟಂ ಇಂಟಗ್ರೇಷನ್ ಇತ್ಯಾದಿಗಳಲ್ಲೆಲ್ಲ ತಾನು ಎತ್ತಿದ ಕೈ ಎಂದೂ ಪ್ರಾಜೆಕ್ಟ್ ರಿಪೋರ್ಟ್ ಒಂದನ್ನು ಸಲ್ಲಿಸುತ್ತದೆ. ಇದೆಲ್ಲವನ್ನೂ SEZ ಗಂದೇ ಮಾಡುತ್ತೇನೆನ್ನುತ್ತದೆ.



ದಲಿತರ ಕೃಷಿ ಭೂಮಿ

ಹೀಗೆ ಅರ್ಜಿ ಸಲ್ಲಿಸಿದ ಕೇವಲ ನಾಲ್ಕೇ ದಿನಕ್ಕೆ ಅಂದರೆ 2006 ರ ಆಗಸ್ಟ್ 28 ರಂದು ಮುಖ್ಯಮಂತ್ರಿ ಕುಮಾರಸ್ವಾಮಿಯ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಹೈಲೆವೆಲ್ ಕ್ಲಿಯರೆನ್ಸ್ ಕಮಿಟಿಯ (HLCC) ಸದರಿ ಕಂಪೆನಿಯ SEZ ಯೋಜನೆಗೆ ಮಂಜೂರಾತಿ ಕೊಟ್ಟು ಬಿಡುತ್ತದೆ. ಅದರರ್ಥ ಬಂದಿಕೋಡಿಗೇಹಳ್ಳಿಯ 325 ಎಕರೆ ಭೂಮಿ ಕಸಿಯುವ ಪರವಾನಗಿ?

ಹೈಲೆವೆಲ್ ಕ್ಲಿಯರೆನ್ಸ್ ಕಮಿಟಿಯೆಂದರೆ ಅದು ಸಣ್ಣ ಮಾತೆ?

ಮುಖ್ಯಮಂತ್ರಿ ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಯಡಿಯೂರಪ್ಪ, ಭಾರೀ ಕೈಗಾರಿಕಾ ಮಂತ್ರಿ ಕಟ್ಟಾ, ಯೋಜನಾ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ ಗೌತಮ್ ಬಸು, ರಾಜ್ಯ ಮುಖ್ಯ ಕಾರ್ಯದರ್ಶಿ ಪಿ.ಬಿ. ಮಹಿಷಿ, ಕೈಗಾರಿಕಾ ಸಚಿವಾಲಯದ ಪ್ರಿನ್ಸಿಪಲ್ ಸೆಕ್ರೆಟರಿ ಕೆ.ಎಂ. ಶಿವಕುಮಾರ್, ನಗರಾಭಿವೃದ್ಧಿ ಪ್ರಿನ್ಸಿಪಲ್ ಸೆಕ್ರೆಟರಿ ಲಕ್ಷ್ಮೀ ವೆಂಕಟಾಚಲಂ, ಕೈಗಾರಿಕಾ ಇಲಾಖೆಯ ಕಾರ್ಯದರ್ಶಿ ಮಹೇಂದ್ರ ಜೈನ್ ಇತ್ಯಾದಿ 25 ಇಲಾಖೆಗಳ ವಿವಿಧ ಐಎಎಸ್ ಮುಖ್ಯಸ್ಥರಿದ್ದ ಸಮಿತಿಯದು!

ಐವತ್ತು ಕೋಟಿಗೂ ಅಧಿಕ ಬಂಡವಾಳ ಹೂಡುವ ಇಂಥ ಯಾವುದೇ ಯೋಜನೆಗೆ ಸರ್ಕಾರ ಮಂಜೂರಾತಿ ಕೊಡಬೇಕೆಂದರೆ; ಅಂಥ ಕಂಪೆನಿ ಕಳೆದ ಮೂರು ವರ್ಷಗಳ ತನ್ನ ವಹಿವಾಟಿನ ವಿವರ ಸಲ್ಲಿಸಬೇಕೆಂಬ ಕಾಯ್ದೆಯಿದೆ. ವಿಚಿತ್ರವೆಂದರೆ 2006 ರ ಆಗಸ್ಟ್ 24 ರಂದು ಉದ್ಯೋಗ ಮಿತ್ರಕ್ಕೆ ಅರ್ಜಿ ಸಲ್ಲಿಸಿದ ಇಟಾಸ್ಕಾ ತನ್ನ ಕಳೆದ ಮೂರು ವರ್ಷಗಳ ವಹಿವಾಟಿನ ವಿವರವನ್ನೇ ಕೊಟ್ಟಿಲ್ಲ, ತಾನು 75 ಸಾವಿರ ಮಂದಿ ಕನ್ನಡಿಗರಿಗೆ ಕೆಲಸ ಕೊಡುತ್ತೇನೆಂದೂ, 1130 ಕೋಟಿ ರೂಪಾಯಿಗಳಷ್ಟು ಬಂಡವಾಳ ಹೂಡುತ್ತೇನೆಂದೂ, ದಿನಕ್ಕೆ 40 ಲಕ್ಷ ಲೀಟರ್ ನೀರೂ, 46375 ಕಿಲೋವ್ಯಾಟ್ಸ್‌ಗಳಷ್ಟು ವಿದ್ಯುತ್ ಬೇಕೆಂದು ಅರ್ಜಿಯಲ್ಲಿ ತಿಳಿಸುತ್ತದೆ.

ಅಲ್ಲಿಗೆ ಇದು ಇನ್‌ಫೋಸಿಸ್, ವಿಪ್ರೋ, ಇಂಟೆಲ್‌ಗಳಂಥ ದೈತ್ಯ ಐಟಿ ಕಂಪೆನಿಗಳನ್ನೇ ಮೀರಿಸುವಂಥಾ ಕಂಪೆನಿಯಾಗಿರಲೇಬೇಕು ತಾನೆ?

ಹೀಗೆ HLCC ಯಲ್ಲಿ ಯೋಜನೆಗೆ ಅಂಗೀಕಾರ ಸಿಕ್ಕ ವಾರಕ್ಕೇ ಬಂಡಿಕೋಡಿಗೇಹಳ್ಳಿಯ 325 ಎಕರೆಗೆ ಬದಲಾಗಿ KIADB ಒಟ್ಟು 448 ಎಕರೆಗಳಿಗೆ ನೋಟೀಸು ಜಾರಿ ಮಾಡುತ್ತದೆ. 2007 ರ ಜೂನ್‌ನಲ್ಲಿ ಸ್ವಾಧೀನದ ಅಂತಿಮ ಅಧಿಸೂಚನೆಯೂ ನಡೆದು ಒಟ್ಟೂ 448 ಎಕರೆ ಇಟಾಸ್ಕಾ ಹೊಟ್ಟೆಗಿಳಿಯುತ್ತದೆ.

ಇಷ್ಟೆಲ್ಲ ಗಾಬರಿಯಿಂದ, ಯಾವುದೇ ನಿಯಮ ಪಾಲಿಸದೇ, ಕಾನೂನುಬಾಹಿರವಾಗಿ ಕಂಪೆನಿಯೊಂದಕ್ಕೆ 448 ಎಕರೆಗಳಷ್ಟು ರೈತರ ಭೂಮಿ ಕಿತ್ತುಕೊಟ್ಟ ಕೆಐಎಡಿಬಿ ಹೇಳಿಕೇಳಿ ಭಾರೀ ಕೈಗಾರಿಕಾ ಮಂತ್ರಿ ಕಟ್ಟಾನ ಅಧೀನ ಸಂಸ್ಥೆಯಾಗಿತ್ತು. ಹಾಗಂತ ಇಟಾಸ್ಕಾ ಕಂಪೆನಿಯ ಯಾವ ದಾಖಲೆಯಲ್ಲೂ ಕಟ್ಟಾನ ಹೆಸರಿಲ್ಲ, ಅದು ಕಟ್ಟಾನ ಬೇನಾಮಿ ಕಂಪೆನಿ. ತನ್ನ ಛೇಲಾ ಎಸ್.ವಿ. ಶ್ರೀನಿವಾಸ್ ಎಂಬಾತನನ್ನು ಛೂಬಿಟ್ಟು 2004ರ ಜೂನ್‌ನಲ್ಲೇ ಇಂಥದೊಂದು ನಕಲಿ ಐಟಿ ಕಂಪೆನಿಯೊಂದನ್ನು ಕಟ್ಟಾ ಹುಟ್ಟು ಹಾಕಿದ್ದ.

ಅದೂ ಎಂಥಾ ಹಾಸ್ಯಾಸ್ಪದವೆಂದರೆ; ಈ ಇಟಾಸ್ಕಾ ಕಂಪೆನಿಗೊಂದು ಅಧಿಕೃತ ಅಡ್ರೆಸ್ಸು, ಕಚೇರಿ, ಟೆಲಿಫೋನ್ ನಂಬರ್, ಕಂಪ್ಯೂಟರ್, ಯಾವುದೂ ಇಲ್ಲ, ಹೋಗಲಿ ಕಂಪೆನಿ ಹುಟ್ಟುಹಾಕಿದವರಾದರೂ ಐಟಿ ಪರಿಣಿತರಾ? ಎಂದು ಕೆದಕ ಹೊರಟರೆ ಚಿತ್ರವಿಚಿತ್ರ ಸತ್ಯಗಳೇ ಹೊರಬೀಳುತ್ತವೆ.

ಇಟಾಸ್ಕಾ ಕಂಪೆನಿಯ ಪ್ರಾಜೆಕ್ಟ್ ರಿಪೋರ್ಟ್‌ನ ಪ್ರತಿ ಹಿಡಿದು ಅಡ್ರೆಸ್ ಹುಡುಕ ಹೊರಟ ಈ ವರದಿಗಾರನಿಗೆ ಸಿಕ್ಕಿದ್ದು ಬೋರ್ಡೇ ಇಲ್ಲದ ಮಲ್ಲೇಶ್ವರದ ಮನೆ!

ನಂ. 20, 18 ನೇ ಕ್ರಾಸ್, 8 ನೇ ಮೇನ್ ಮಲ್ಲೇಶ್ವರ, ಬೆಂಗಳೂರು 55; ಇದು ಇಟಾಸ್ಕಾ ಎಂಬ ಕಾರ್ಪೊರೇಟ್ ಕಂಪೆನಿಯ ಅಧಿಕೃತ ವಿಳಾಸ. ಮಲ್ಲೇಶ್ವರದಂಥ ವಸತಿ ಪ್ರದೇಶದಲ್ಲಿ ಇನ್ನೆಂಥಾ ಐಟಿ ಕಂಪೆನಿಯಿದ್ದೀತು? ಅದು ಹೇಳಿಕೇಳಿ ಎಸ್.ವಿ. ಶ್ರೀನಿವಾಸ್ ಎಂಬ ಮೂವತ್ತರ ಪ್ರಾಯದ ನಿರುದ್ಯೋಗಿ ಶ್ರೀಮಂತನ ಮನೆ. ಈತ ಎಸ್.ಕೆ.ವಿ. ಚಲಪತಿ ಎಂಬ ಚಾರ್ಟರ್ಡ್ ಅಕೌಂಟೆಂಟನ ಮಗ. ಮಲ್ಲೇಶ್ವರದ 18 ನೇ ಕ್ರಾಸಿನಲ್ಲಿ 60x80 ಅಡಿ ನಿವೇಶನದ ಈ ಮನೆಗೆ ಕನಿಷ್ಠ ಇಟಾಸ್ಕಾ ಕಂಪೆನಿಯ ಬೋರ್ಡನ್ನಾದರೂ ಹಾಕಬೇಕೆಂಬ ಕನಿಷ್ಠ ತಿಳಿವಳಿಕೆಯೂ ಈತನಿಗಿದ್ದಂತಿಲ್ಲ.

ಈ ಎಸ್.ವಿ. ಶ್ರೀನಿವಾಸ್ ಇಟಾಸ್ಕಾ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರ್ ಅಂತೆ! ಹೇಳಿಕೇಳಿ ಈತ ಬಿ.ಎ. ಪದವೀಧರ. ಈತನ ಜೊತೆಗೆ ಇನ್ನೂ ಇಬ್ಬರು ಡೈರೆಕ್ಟರ್‌ಗಳಿದ್ದಾರೆ. ಅವರಲ್ಲಿ ಒಬ್ಬನ ಹೆಸರು ಬದ್ರಿಪ್ರಸಾದ್ ನಿಟ್ಟೂರ್. ಈತ ಎಂಬಿಎ ಪದವೀಧರ. ಎಸ್.ವಿ. ಶ್ರೀನಿವಾಸ್‌ನ ಅಕ್ಕ ವಂದನಾ ಎಂಬ ಗೃಹಿಣಿ

SEZ ಎಂದರೆ ಹೀಗೂ ಇರುತ್ತಾ?

ನಂದಗುಡಿಯ ನಿಖಿಲ್‌ಗಾಂಧಿಯ SEZ ಗೂ ಕಟ್ಟಾನ ಬಂದಿಕೋಡಿಗೇಹಳ್ಳಿಯ ಇಟಾಸ್ಕಾ SEZಗೂ ಏನು ವ್ಯತ್ಯಾಸ?

ಇಲ್ಲಿ ಬೇಕಾಬಿಟ್ಟಿ ಸರ್ಕಾರಿ ಬಿಟ್ಟಿ ಭೂಮಿ ಇಲ್ಲ ಎಂಬುದನ್ನು ಬಿಟ್ಟರೆ ಈ ಎರಡೂ SEZ ಗಳ ಮಧ್ಯೆ ಯಾವುದೇ ವ್ಯತ್ಯಾಸವಿಲ್ಲ, ಎರಡೂ ಭೂಕಬಳಿಕೆಗೆಂದೇ ಹುಟ್ಟಿಕೊಂಡ ನಕಲಿ ಕಂಪೆನಿಗಳು. ಕಾಯ್ದೆಯೇ ಹೇಳುವಂತೆ ಒಮ್ಮೆ ಯೋಜನೆಯೊಂದನ್ನು SEZ ಎಂದು ಘೋಷಿಸಲು ಆ ಭಾಗದ ಶೇ. 50 ಕ್ಕೂ ಅಧಿಕ ರೈತರಿಂದ ಒಪ್ಪಿಗೆ ಪತ್ರ ಪಡೆಯಬೇಕು. ಆದರೆ ಕಟ್ಟಾನಿಗೆ ಈ ಕಾಯ್ದೆ ಯಾವ ಲೆಕ್ಕ?

ರೈತರ ಒಪ್ಪಿಗೆಯಿಲ್ಲದೇ, ತನ್ನ ವಹಿವಾಟಿನ ದಾಖಲೆಯನ್ನೇ ಸಲ್ಲಿಸದೆ, ಆಫೀಸು, ಬೋರ್ಡು, ಫೋನು ಯಾವುದೂ ಇಲ್ಲದ ನಕಲಿ ಕಂಪೆನಿಯೊಂದಕ್ಕೆ 448 ಎಕರೆ ಮಂಜೂರು ಮಾಡುವ ಮುನ್ನ ಹೈಲೆವೆಲ್ ಕಮಿಟಿ ಇಟಾಸ್ಕಾದ ಅಸಲೀಯತ್ತನ್ನಾಗಲಿ, ಯೋಗ್ಯತೆಯನ್ನಾಗಲಿ ಏಕೆ ಪರಿಶೀಲಿಸಲಿಲ್ಲ? ಇದಕ್ಕೆಂದೇ ಒಂದು ಡಜನ್ ಐಎಎಸ್ ಅಧಿಕಾರಿಗಳಿದ್ದಾಗ್ಯೂ ಅವರ್ಯಾರೂ ಕಳ್ಳಕಂಪೆನಿಯ ಬಗ್ಗೆ ಏಕೆ ಚಕಾರವೆತ್ತಿಲ್ಲ?



ಕಟ್ಟಾನ ಪುತ್ರ ಜಗದೀಶ್

ಈ ಬಗ್ಗೆ ತನಿಖೆಯಾಗಬೇಕು. ತನಿಖೆಗೆ ಒತ್ತಾಯಿಸಿ ಜನಪರ ಸಂಘಟನೆಗಳು ಬೀದಿಗಿಳಿಯಬೇಕು. ಬಂದಿಕೋಡಿಗೇಹಳ್ಳಿಯ ದಲಿತರ ಮೇಲೆ ರೌಡಿಗಳನ್ನು ಛೂಬಿಟ್ಟು ಒಪ್ಪಿಗೆ ಪತ್ರಕ್ಕೆ ಬಲವಂತದ ಸಹಿ ಪಡೆಯುತ್ತಿರುವ ಕಟ್ಟಾನ ಕೇಡಿ ಪುತ್ರ ಜಗದೀಶನನ್ನು ಬಂಧಿಸಬೇಕು. ಈ ನಿಟ್ಟಿನಲ್ಲಿ ದಲಿತ ಸಂಘಟನೆಗಳು ಈ ಕೂಡಲೇ ಕಾರ್ಯಪ್ರವೃತ್ತರಾಗಬೇಕು. ಇದು ಪತ್ರಿಕೆಯ ಕಳಕಳಿಯ ಮನವಿ.

ಗಾಡ್‌ಫಾದರ್ ವೆಂಕಯ್ಯನೇ ಪಾರ್ಟ್‌ನರ್


ಈ ರೀತಿ ನಕಲಿ ಐಟಿ ಕಂಪೆನಿಗಳನ್ನು ಸೃಷ್ಟಿಸಿ ಬಡರೈತರ ನೂರಾರು ಎಕರೆ ಕೃಷಿ ಭೂಮಿಯನ್ನು ದೋಚಿದವರ ಪೈಕಿ ಮಂತ್ರಿ ಕಟ್ಟಾನೇ ಮೊದಲಿಗನೇನಲ್ಲ. ದೇಶಪಾಂಡೆ ಕೈಗಾರಿಕಾ ಮಂತ್ರಿಯಾಗಿದ್ದಾಗ ಬೆಂಗಳೂರಿನ ಕುಖ್ಯಾತ ಭೂಕಂಟಕರಾದ ಕುಪೇಂದ್ರ ರೆಡ್ಡಿ, ಪಿಚ್ಚರೆಡ್ಡಿ, ಕುಮಾರಸ್ವಾಮಿರೆಡ್ಡಿ, ರೆಡ್ಡಿ ವೀರಣ್ಣ ಮುಂತಾದವರೆಲ್ಲ ನಕಲಿ ಐಟಿ ಕಂಪೆನಿಗಳನ್ನು ಹುಟ್ಟುಹಾಕಿ ಬೆಳ್ಳಂದೂರು ಕರಿಯಮ್ಮನ ಅಗ್ರಹಾರ, ದೊಡ್ಡಕನ್ನಲ್ಲಿ ಮುಂತಾದ ಸರ್ಜಾಪುರ ರಿಂಗ್‌ರೋಡಿನ ಹಳ್ಳಿಗಳ ನೂರಾರು ಎಕರೆ ದೋಚಿಬಿಟ್ಟರು.



ಕುಪೇಂದ್ರ ರೆಡ್ಡಿ

ಎಕರೆಗೆ ಮಾರ್ಕೆಟ್ ರೇಟು ಎಂಟು ಕೋಟಿಯಿದ್ದರೆ ಕೆಐಎಡಿಬಿ ಕೊಡುವುದು ಎಕರೆಗೆ ಬರೇ ಐವತ್ತು ಲಕ್ಷದ ಪುಡಿಗಾಸಿನ ಪರಿಹಾರ!

ಮಂತ್ರಿಗೆ ಕೊಡುವ ಲಂಚವನ್ನೂ ಕಳೆದು ಎಕರೆಯೊಂದಕ್ಕೆ ಒಂದು ಕೋಟಿ ಹೋದರೂ ನಕಲಿ ಐಟಿ ಹುಟ್ಟುಹಾಕಿದ ಭೂಗಳ್ಳನೊಬ್ಬನಿಗೆ ಒಂದೆಕರೆಯನ್ನು KIADB ಯಿಂದ ನೋಟಿಫೈ ಮಾಡಿಸಿಬಿಟ್ಟರೆ ಸಲೀಸಾಗಿ ಏಳುಕೋಟಿಯ ಲಾಭಗಿಟ್ಟುತ್ತದೆ. ಹೀಗೆ ಮುನ್ನೂರು ಎಕರೆ ನೋಟಿಫೈ ಮಾಡಿಸಿಕೊಂಡ ಕುಪೇಂದ್ರ ರೆಡ್ಡಿ ಅದೊಂದರಿಂದಲೇ 2100 ಕೋಟಿ ಲಾಭ ಗಳಿಸಿದ್ದ. KIADB ಕಿತ್ತು ಕೊಟ್ಟ 300 ಎಕರೆಯನ್ನು Intel ಕಂಪೆನಿಗೆ ಮಾರಿಕೊಂಡ. ದೇಶಪಾಂಡೆ ಕಾಲದ ಐಟಿ ಕಾರಿಡಾರ್ ಭೂಕೊಳ್ಳೆಯ ಬಗ್ಗೆ ಇವತ್ತು ಸಿಬಿಐ ತನಿಖೆಯಾದರೂ ಇಂಥ ನೂರಾರು ಕರ್ಮಕಾಂಡಗಳು ಬೆಳಕಿಗೆ ಬರುತ್ತವೆ.



ದೇಶಪಾಂಡೆ

ಆ ಕಾಲದಿಂದಲೂ ಲ್ಯಾಂಡ್ ಗ್ರ್ಯಾಬಿಂಗ್ ದಂಧೆಯನ್ನೇ ತನ್ನ ಕುಲಕಸುಬನ್ನಾಗಿಸಿಕೊಂಡು ಬಂದವನು ಕಟ್ಟಾನಾಯ್ಡು. ಇಂಥವನೆ ಭಾರೀ ಕೈಗಾರಿಕಾ ಮಂತ್ರಿಯಾದರೆ, ಕೆಐಎಡಿಬಿಯಂಥ ನಿರಂಕುಶ ರೈತಕಂಟಕ ಸಂಸ್ಥೆಯೊಂದು ಆತನ ಕೈಗೇ ಸಿಕ್ಕಿಬಿಟ್ಟರೆ ನೆಲಗಳ್ಳತನವಲ್ಲದೇ ಬೇರೆ ಏನು ತಾನೇ ನಡೆಯಲು ಸಾಧ್ಯ?

ಈಗ ಏನಾಗಬೇಕಿತ್ತೋ ಅದೇ ಆಗಿದೆ. ನಕಲಿ ಐಟಿ ಕಂಪೆನಿಗಳ ಹೆಸರಲ್ಲಿ ತನ್ನದೇ ದಂಧೆಯ ರೆಡ್ಡಿ ಭೂಕಂಟಕರು ಭೂಮಿ ದೋಚಿದ್ದನ್ನು ನೋಡಿಕೊಂಡೇ ಬಂದಿದ್ದ ಕಟ್ಟಾ ಉಪಾಯವಾಗೇ ತನ್ನ ಛೇಲಾ ಎಸ್.ವಿ. ಶ್ರೀನಿವಾಸನನ್ನು ಬಿಟ್ಟು ನಕಲಿ ಐಟಿ ಕಂಪೆನಿಯೊಂದನ್ನು ಹುಟ್ಟುಹಾಕಿದ್ದ. ಬಂಡಿಕೋಡಿಗೇಹಳ್ಳಿಯ ಮೇಲೆ 2004 ರಿಂದಲೇ ಕಣ್ಣಿಟ್ಟಿದ್ದ ಕಟ್ಟಾನಿಗೆ ತಾನೇ ಭಾರೀ ಕೈಗಾರಿಕಾ ಮಂತ್ರಿಯಾಗಿದ್ದು ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತಾಗಿತ್ತು. ಅಷ್ಟಕ್ಕೂ ತನ್ನನ್ನೇ ಭಾರೀ ಕೈಗಾರಿಕಾ ಮಂತ್ರಿ ಮಾಡುವಂತೆ ಕಟ್ಟಾ ತನ್ನ ಗಾಡ್‌ಫಾದರ್ ವೆಂಕಯ್ಯ ನಾಯ್ಡುಗೆ ತಲೆ ತಿಕ್ಕಿದ್ದ. ಅಷ್ಟೇ ಅಲ್ಲ; ಬಂಡಿಕೋಡಿಗೇಹಳ್ಳಿಯ 448 ಎಕರೆ ಕೊಳ್ಳೆಗೇ ವೆಂಕಯ್ಯ ನಾಯ್ಡುವನ್ನೇ ಪಾಲುದಾರನನ್ನಾಗಿ ಮಾಡಿಕೊಂಡ.

ಇದು ಕಟ್ಟಾ-ವೆಂಕಯ್ಯ ಜಂಟಿ ದಕಾಯಿತಿ ಕೂಡ.

ಇಟಾಸ್ಕಾದ ಇನ್ನೊಬ್ಬಳು ಡೈರೆಕ್ಟರ್. ಈಕೆ ಬದ್ರಿ ಪ್ರಸಾದನ ಪತ್ನಿ. ಈ ಮೂವರೂ ಇದೇ ಮಲ್ಲೇಶ್ವರಂ ಮನೆಯ ಖಾಯಂ ವಾಸಿಗಳು. ಈ ಪೈಕಿ ಬದ್ರಿಪ್ರಸಾದ್‌ಗೆ ಅಷ್ಟಿಷ್ಟು ಕಂಪ್ಯೂಟರ್ ಪರಿಣಿತಿ ಬಿಟ್ಟರೆ ಎಂ.ಡಿ. ಶ್ರೀನಿವಾಸ್ ಮತ್ತು ಆತನ ಅಕ್ಕ ವಂದನಾ ಇಬ್ಬರೂ ಐಟಿ ವಿಷಯದಲ್ಲಿ ಅನಕ್ಷರಸ್ಥರೆ.

ಅಷ್ಟಕ್ಕೂ ಇಟಾಸ್ಕಾ ಧೂರ್ತ ಎಸ್.ವಿ. ಶ್ರೀನಿವಾಸ್ ಮಂತ್ರಿ ಕಟ್ಟಾನ ಕುಲಪುತ್ರ ಜಗದೀಶನ ಚೆಡ್ಡಿದೋಸ್ತ್. ಎಲ್ಲೆಂದರಲ್ಲಿ ಲ್ಯಾಂಡ್ ಡೀಲ್ ಮಾಡಿಕೊಂಡಿದ್ದ. ಯಾವತ್ತು ಕಟ್ಟಾ ಭಾರೀ ಕೈಗಾರಿಕಾ ಮಂತ್ರಿಯಾದನೋ ಯಾವುದೋ ಕಾಲಕ್ಕೆ ನೋಂದಾವಣೆಯಾಗಿದ್ದ ಅಸ್ತಿತ್ವದಲ್ಲೇ ಇಲ್ಲದ ಇಟಾಸ್ಕಾ ಕಂಪೆನಿಯನ್ನು ಶ್ರೀನಿವಾಸ್ ಖರೀದಿಸಿ ತಾನೇ ಅದರ ಎಂ.ಡಿ. ಯಾದ. ಹಕೀಕತ್ತೆಂದರೆ ಇಂಥಾದ್ದೊಂದು ಕಾರಸ್ಥಾನಕ್ಕೆ ಬಂಡವಾಳ ಹಾಕಿದ್ದೇ ಮಂತ್ರಿ ಕಟ್ಟಾನಾಯ್ಡು. ಏಕೆಂದರೆ



ಬಂಡಿಕೋಡಿಗೇಹಳ್ಳಿಯ ದಲಿತ ಸಂಘ


ಆ ಹೊತ್ತಿಗಾಗಲೇ ಬಂಡಿಕೋಡಿಗೇಹಳ್ಳಿಯಲ್ಲಿ ಕಟ್ಟಾ 28 ಎಕರೆಗಳಷ್ಟು ಕೃಷಿ ಭೂಮಿಯನ್ನು ಖರೀದಿಸಿಬಿಟ್ಟಿದ್ದ.

ಹೇಳಿಕೇಳಿ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಭೂಮಿ. ಎಕರೆಯೊಂದಕ್ಕೆ ಮಾರುಕಟ್ಟೆ ರೇಟೇ ಒಂದೂವರೆ ಕೋಟಿಯಷ್ಟಿದೆ. ಈ ರೀತಿ ನಕಲಿ ಐಟಿ ಕಂಪೆನಿಯೊಂದಕ್ಕೆ ಒಮ್ಮೆ ಕೆಐಎಡಿಯಿಂದ ಸ್ವಾಧೀನದ ಆದೇಶವಾಯಿತೆಂದರೆ, ರೈತರು ಬೇರೆ ಯಾರಿಗೂ ಮಾರುವಂತಿಲ್ಲ, ಕಟ್ಟಾ ಬಿಟ್ಟರೆ ಬೇರೆ ಯಾರೂ ಕೊಳ್ಳುವಂತಿಲ್ಲ.

ಇದೊಂದು ನಿರ್ಲಜ್ಜ ಭೂಕಬಳಿಕೆ ಎಂಬುದಕ್ಕೆ ಇಂಥ ಹತ್ತಾರು ಸಾಕ್ಷ್ಯಾಧಾರಗಳು ಇಟಾಸ್ಕಾ ಕಂಪೆನಿಯ ಪ್ರಾಜೆಕ್ಟ್ ರಿಪೋರ್ಟಿನಲ್ಲೇ ಸಿಗುತ್ತವೆ. ಇಟಾಸ್ಕಾ ತನ್ನ ಅರ್ಜಿಯಲ್ಲಿ ಸದ್ಯದ ತನ್ನ ವ್ಯವಹಾರದ ವಿವರಗಳನ್ನಾಗಲೀ ಈ ಹಿಂದಿನ ವ್ಯಾವಹಾರಿಕ ದಾಖಲೆಗಳನ್ನಾಗಲಿ ಕೊಟ್ಟೇ ಇಲ್ಲ. ಐಟಿ ಕಂಪೆನಿಯೆಂದರೆ ಕನಿಷ್ಠ ಅದಕ್ಕೊಂದು ವೆಬ್‌ಸೈಟಾದರೂ ಇರಬೇಕಲ್ಲ?

ಆದರೆ ಇಟಾಸ್ಕಾ ವೆಬ್‌ಸೈಟು, ಆಫೀಸು, ಕಂಪ್ಯೂಟರು, ಫೋನು, ಯಾವುದೂ ಇಲ್ಲದ ಕಂಪೆನಿ. 2010ನೇ ಇಸವಿ ಹೊತ್ತಿಗೆ ತಾನು 18878 ಕೋಟಿ ರೂಪಾಯಿ ವಹಿವಾಟು ನಡೆಸುತ್ತೇನೆನ್ನುತ್ತದೆ. ಹೀಗೆ 448 ಎಕರೆ ಭೂಮಿ ಲಪಟಾಯಿಸಿ ಇಟಾಸ್ಕಾದ ಬ್ಯಾಂಕ್ ಖಾತೆಯಲ್ಲಿ ಸದ್ಯ ಹತ್ತು ಲಕ್ಷ ಬಿಟ್ಟರೆ ಬೇರೆ ದುಡ್ಡಿಲ್ಲ.

ಇಂಥಾ ನಕಲಿ ಕಂಪೆನಿಯೊಂದಕ್ಕೆ, SEZ ಮಾಡಲು ಬಂಡಿಕೋಡಿಗೇಹಳ್ಳಿಯ ನೂರಾರು ರೈತರು ಬಲಿಯಾಗಬೇಕೆ? ■



ಕಳ್ಳ ಕಂಪನಿಗೆ ಭೂಮಿ ಮಂಜೂರಾತಿ ಆದೇಶ!

ಈ ಗೌಡನಿಗೆ ಅನ್ಯಾಯ ಮಾಡಿದೋರು ಏನಾದ್ರು ಗೊತ್ತಾ

ಬೀದಿ ಶ್ವಾನಗಳ ಪ್ರಣಯ ಚೇಷ್ಟೆಯಂತೆ ಅಂತ್ಯಗೊಂಡಿರುವ ಜೆಡಿಎಸ್ ಮತ್ತು ಬಿಜೆಪಿಗಳ ಅವತಾರ ನೋಡಿ ನಾಡಿನ ಜನತೆ ನರ ಹರಿಯುವಂತೆ ನಗುತ್ತಿರಬೇಕಾದರೆ, ಈ ಕಾಂಗ್ರೆಸ್ ಮನೆಯ ಮುತ್ಸದ್ಧಿಗಳು ತಮ್ಮ ತಮ್ಮದೇ ವಠಾರದಲ್ಲಿ ಕುಳಿತು ಕಡ್ಲೆಕಾಯಿ ಕಾಫಿಯೊಂದಿಗೆ ಚರ್ಚೆಗೆ ಕುಳಿತಿದ್ದರಂತಲ್ಲಾ, ಕಡ್ಲೆಕಾಯಿ ಮತ್ತು ಕಾಫಿಯ ಪಿತ್ತದಿಂದ ಮಲಬದ್ಧತೆಗೆ ತುತ್ತಾದಂತೆ ಕಾಣುತ್ತಿರುವ ಕಾಂಗ್ರೆಸಿಗಳು, ಕಡೆಗೂ ತಮ್ಮ ಪಾರ್ಟಿ ಕಚೇರಿಯಲ್ಲಿ ಸೇರಿ ಏನಾದರೂ ಮಾತನಾಡಲೇಬೇಕೆಂದು ತೀರ್ಮಾನಿಸಿದವಂತಲ್ಲಾ, ಅದರಂತೆ ಪಾರ್ಟಿ ಆಫೀಸಿಗೆ ಬಂದು ಎಲ್ಲರೂ ದೇವೇಗೌಡರ ಗುಣಗಾನ ಮಾಡಿ ಮೂರೇ ನಿಮಿಷಕ್ಕೆ ಬರಕಾಸ್ತಾಗಿ ಹೋದವಂತಲ್ಲಾ, ಥೂತ್ತೇರಿ!

ಥೂತ್ತೇರಿ

ಯಾಹೂ

* * * * * * * *

ದೇವೇಗೌಡ ಮತ್ತವರ ಮಕ್ಕಳು, ಮರಿಗಳು, ಬೀಗರು, ಬಿಜ್ಜರು, ನೆಂಟರು, ಇಷ್ಟರ ಕಾಟ ತಾಳಲಾರದೆ ಕಾಂಗ್ರೆಸ್‌ಗೆ ಓಡಿಬಂದ ಸಿದ್ಧರಾಮಯ್ಯ ಮತ್ತವರ ಪಟಾಲಂಗೆ ಅಲ್ಲೂ ನೆಮ್ಮದಿ ಇಲ್ಲವಾಗಿದೆಯಂತಲ್ಲಾ, ಮೂಲತಃ ಗುಲಾಮಿ ಸಂತತಿಯ ಕಾಂಗ್ರೆಸಿಗಳು ಹೈಕಮಾಂಡ್ ಹುಕುಂಗೆ ಬದ್ಧರಾಗಿ, ರಾಜಶೇಖರನ್ ಎಂಬ ದಿವಂಗತನಂತಿರುವ ಕೇಂದ್ರ ಮಂತ್ರಿಯ ಮುಖಂಡತ್ವದಲ್ಲಿ ಸರ್ಕಾರ ಮಾಡಿದರೆ ತಾವೆಲ್ಲಿಗೆ ಹೋಗುವುದು ಎಂಬ ಚಿಂತೆಯಲ್ಲಿ ಮುಳುಗಿಹೋಗಿ ದ್ದಾರಂತಲ್ಲಾ, ಇವರ ಸ್ಥಿತಿ ಕಂಡು ನಗುತ್ತಿರುವ ಸಿಂಧ್ಯಾ "ನೀವೇನು ಯೋಚನೆ ಮಾಡಬೇಡಿ, ನಾನೆಲ್ಲಾ ನಮ್ಮ ಅತ್ತಿಗೆಯಂತಿರುವ ಮಾಯಾವತಿಗೆ ಹೇಳಿ ಸರಿ ಮಾಡುತ್ತೇನೆ. ಬಿಎಸ್‌ಪಿಗೆ ಈಗ ಬ್ರಾಹ್ಮಣರೂ ಸೇರುತ್ತಿದ್ದಾರೆ. ಆದ್ದರಿಂದ ರಮೇಶ್ ಕುಮಾರ್ ಸಮೇತ ಸಿದ್ಧರಾಮಯ್ಯ ಮಹದೇವ ಪ್ರಸಾದ್ ಗಿಸಾದೆಲ್ಲಾ ಬರಬಹುದು" ಎಂದು ಬಿಎಸ್‌ಪಿ ಅಧ್ಯಕ್ಷರ ಗತ್ತಲ್ಲಿ ಹೇಳಿದ್ದಾರಂತಲ್ಲಾ, ಥೂತ್ತೇರಿ!!

* * * * * * * *

ತನ್ನ ಕಣ್ಣೆದುರೇ ನಡೆಯುತ್ತಿರುವ ಇಂತಹ ಅನ್ಯಾಯ ನೋಡಲಾಗದ ವೀರಶೈವ ಮಹಾಸಭಾದ ಅಧ್ಯಕ್ಷ ಭೀಮಣ್ಣ ಖಂಡ್ರೆ ಎಂಬಾತ ಬಸವಣ್ಣನವರ ವಚನವನ್ನು ಉರು ಹೊಡೆದುಕೊಂಡು ದಾರಿಯಲ್ಲಿ ಸಿಕ್ಕಸಿಕ್ಕವರಿಗೆಲ್ಲಾ,

"ನುಡಿದರೆ ಹವಳದ ಹಾರದಂತಿರಬೇಕು,
ನುಡಿದರೆ ಸಲಾಕೆಯಂತಿರಬೇಕು,
ನುಡಿದರೆ ಶರಣರೆಲ್ಲಾ ಹೌದೆಂದು ತಲೆ ಹಾಕಬೇಕು

ಅಂತ ನಮ್ಮ ಜಾತಿ ಬಸವಣ್ಣ ಹೇಳಿರುವಾಗ ಈ ದೇವೇಗೌಡ ಏನೇನೊ ಮಾತಾಡಕೂಡದು ಕಂಡ್ರೀ. ಕಳಬೇಡ ಕೊಲಬೇಡ, ಹುಸಿ ನುಡಿಬೇಡ ಅಂತ ನಮ್ಮ ಬಸವಣ್ಣ ಹೇಳಿದ್ರೂ ಈ ಜನ ಯಾಕಿಂಗೆ ಮಾಡ್ತಾರ್ರೀ" ಎಂದು ರೇಗಿದರಂತಲ್ಲಾ,

ಖಂಡ್ರೆ ವಚನ ಕೇಳಿ ಕೆಂಡಮಂಡಲವಾದ ಶರಣರು "ಅಲ್ರೀ ಖಂಡೆಯವರ, ನಿಮ್ಮ ಇಡೀ ಬಾಳೇವು ಬರೀ ಕಳ್ಳತನದಾಗ ನೆಡಿತು. ನೀನು ಕೆಎಸ್ಸಾರ್ಟೀಸಿ ಮಂತ್ರಿ ಆಗಿದ್ದಾಗ ಕಳ್ಳ ಟಿಕೆಟ್ ಪ್ರಿಂಟಾಕಿದ್ದು ಗುರತೇನ" ಎನ್ನಲಾಗಿ ಖಂಡ್ರೆ ಕಂಬಿ ಕಿತ್ತರಂತಲ್ಲಾ, ಥೂತ್ತೇರಿ!!

* * * * * * * *

ಇದ್ದಕ್ಕಿದ್ದಂತೆ ಭಾರತದ ರಾಜಕಾರಣ ಕಂಡ ಅಸಾಮಾನ್ಯ ಚತುರನಾಗಿ ಕಂಗೊಳಿಸುತ್ತಿರುವ ದೇವೇಗೌಡರನ್ನು ಮಾತನಾಡಿಸಬೇಕೆನಿಸಿತಲ್ಲಾ. ಕೂಡಲೇ ಫೋನ್ ಮಾಡಿದರೆ, ಸಿಕ್ಕೇಬಿಟ್ಟರು.

"ಹಲೋ ಸಾರ್, ನಾನು ಯಾಹೂ."

"ಏನೇಳಿ ಗುರುವೇ?"

"ಅಭಿನಂದನೆಗಳು ಸಾರ್!"

"ಈಗಲಾದ್ರು ಅರಿವಾಯ್ತಲ್ಲ?"

"ಇಂಥ ಬದಲಾವಣೆನ ನಾವು ಕೂಡ ನಿರೀಕ್ಷೆ ಮಾಡಿದ್ದೊ ಸಾರ್. ಆದ್ರೆ ನಿಮ್ಮ ಯಮಧೈರ್ಯದ ದರ್ಶನ ಈಗಾಯ್ತು."

"ಗೌರಿ ಸಿಸ್ಟರ್ ಏನೇಳ್ತರೆ?"

"ಅವ್ರುರೇನೇಳದೆಯಿದ್ರು, ಮುಖದಲ್ಲಿ ಏನೋ ನಿರಾಳದ ಕಳೆ ಕಾಣ್ತಾಯಿದೆ."

"ಆಕೆನಾ ಚಿಕ್ಕಮಗಳೂರಲ್ಲಿ ಅರೆಸ್ಟು ಮಾಡೀ ಬಳ್ಳಾರಿ ಜೈಲಿಗೆ ಕಳಿಸತಕ್ಕಂತಹ ಏರ್ಪಾಡು ಮಾಡಿದ್ರು ಬಿಜೆಪಿಗಳು. ಈ ದೇವೇಗೌಡ ಇರಲಾಗಿ ಅಂತಹ ಸಾಹಸ ಮಾಡೋದಿಕ್ಕೆ ಹೆದರಿದ್ರು. ಇಂತಹ ವಿಷಯಗಳನ್ನು ನಾನು ಎಲ್ಲಿ ಹೇಳಕ್ಕೋಗಲ್ಲ, ನಿಮ್ಮಂಥ ಪತ್ರಕರ್ತರೇ ತಿಳಕೊಂಡು ಪಬ್ಲಿಕ್ಕಿಗೆ ಅರಿವು ಮಾಡಿಕೊಬೇಕು!"

"ಎಡೂರಪ್ಪನಿಗೆ ಅನ್ಯಾಯಾಯ್ತು ಅಂತ ಇಲ್ಲಲ್ಲಿ ಮಾತಾಡ್ತ ಅವ್ರುರೆ ಸಾರ್."

"ಯಾರು ಮಾತಾಡ್ತಯಿದಾರೆ ಅಂತ ನನಗೆ ಗೊತ್ತು, ಆ ಮಹಾನುಭಾವರು ಹತ್ತೊಂಭತ್ತುನೂರ ಎಂಭತ್ತು ಮೂರನೇ ಇಸವಿಲಿ ನಡೆದಂತಹ ಅನ್ಯಾಯದ ಬಗ್ಗೆ ಪರಾಮರ್ಶೆ ಮಾಡಿಕೊಳ್ಳೋದು ಒಳ್ಳೆದು."

"ಆಗೇನ್ನಡಿತು ಸಾರ್?"

"ಜನತಾ ಪಾರ್ಟಿ ಪರವಾಗಿ ನಾನು ಇಡೀ ಕರ್ನಾಟಕವನ್ನು ಸುತ್ತಿ ಮತ ಯಾಚಿಸಿದೆ. ಜನತಾ ಪಾರ್ಟಿ ಗೆಲ್ತು. ಆದರೆ ಎಲ್ಲೊ ಇದ್ದ ಹೆಗಡೆ ಮಹಾಶಯರು ಬಂದು ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದರು. ಆಗ ನಡೆದ ಅನ್ಯಾಯನ ಯಾರೂ ಗುರುತುಸಕ್ಕೆ ಹೋಗಲಿಲ್ಲ. ಆ ಸಂದರ್ಭದಲ್ಲಾದ ಅನ್ಯಾಯದಿಂದ ನಾನು ಎಷ್ಟು ವರ್ಷ ಪರಿತಪಿಸಬೇಕಾಯ್ತು ಗೊತ್ತಾ?"

"ಹೌದು ಸಾರ್, ಆ ಬೊಮ್ಮಾಯಿ ದೆಸೆಯಿಂದ ನಿಮಗೆ ಮತ್ತೆ ಅನ್ಯಾಯಾಯ್ತು?"

"ಈ ದೇವೇಗೌಡನಿಗೆ ಅನ್ಯಾಯ ಮಾಡಿದೋರೆಲ್ಲಾ ಏನೇನಾದ್ರು ಅಂತ ನಾನು ಬಿಡಿಸಿ ಹೇಳಕ್ಕೋಗೊದಿಲ್ಲ. ಈ ರಾಜ್ಯದ ಜನತೆ ನೀವು ತಿಳದಂಗಿಲ್ಲ, ಅವುರು ಎಲ್ಲವನ್ನು ನೋಡ್ತಾಯಿದಾರೆ."

"ಈಗ ಮುಂದೇನು ಮಾಡ್ತಿರಿ ಸಾರ್?"



"ಮುಂದೆ ನಮ್ಮ ವಿರೋಧಿಗಳ ಚಟುವಟಿಕೆ ನೋಡಿ ಹೆಜ್ಜೆ ಇಡಬೇಕಾಗಿದೆ."

"ಎಂ.ಪಿ. ಪ್ರಕಾಶ್ ಮುಖ್ಯಮಂತ್ರಿ ಅಂತ ನೀವು ಘೋಷಣೆ ಮಾಡಿದ್ರೆ ಲಿಂಗಾಯಿತ್ರ ಸುಮ್ಮನಾಗತಿದ್ರೇನೊ?"

"ಅವರನ್ನ ಯಾಕೆ ಮುಖ್ಯಮಂತ್ರಿ ಮಾಡ್ಬಿ?"

"ಉಪಮುಖ್ಯಮಂತ್ರಿ ಮಾಡಿದ್ರಿ, ನೀವು ಹೇಳಿದಂಗೆ ಕೇಳೋರು, ಕಡಿಗೂ ಪವರು ನಿಮ್ಮ ಕೈಲೇ ಇರೋದು."

"ನೀವು ಹೇಳೋದು ಸರಿ. ಆದ್ರೆ ಪ್ರಕಾಶ್ ಪರ ಆ ಮಹದೇವಪ್ರಸಾದ್ ಅನ್ನೊ ಶರಣ ಮಂತ್ರಿ ಬಿಟ್ರೆ ಇನ್ನೊಂದು ನೊಣವೂ ಇಲ್ಲ. ಅಂತಹ ವ್ಯಕ್ತಿಯನ್ನು ಮುಖ್ಯಮಂತ್ರಿ ಮಾಡಿದ್ರೆ, ಲಿಂಗಾಯಿತರಿಗೆ ಸಮಾಧಾನವಾಗುತ್ತೆ ಅನ್ನೊ ಮಾತು ಸುಳ್ಳು."

"ಯಾಕ್ ಸಾರ್?"

"ಪ್ರಕಾಶ್ ಲಿಂಗಾಯಿತರ ವಿಶ್ವಾಸವನ್ನು ಕಳೆದುಕೊಂಡಿರತಕ್ಕಂತಹ ವ್ಯಕ್ತಿ."

"ಒಂದು ಟೈಮಲ್ಲಿ ನೀವು ಒಕ್ಕಲಿಗರ ವಿಶ್ವಾಸವನ್ನು ಕಳಕೊಂಡಿದ್ರಿ?"

"ಇರಬಹುದು, ಆದ್ರೆ ಈಗ ಪರಿಸ್ಥಿತಿ ಹಾಗಿಲ್ಲ. ಸ್ಥಳೀಯ ಸಂಸ್ಥೆ ಚುನಾವಣೆ ಎಲ್ಲರಿಗೂ ಉತ್ತರ ಕೊಟ್ಟದೆ."

"ಆ ಧೈರ್ಯದ ಮೇಲೆ ಚುನಾವಣೆಗೆ ಹೋಗ್ತಿ ಸಾರ್?"

"ಹೌದು, ಅದ್ರು ನಮ್ಮ ವಿರೋಧಿಗಳನ್ನು ಸೋಲಿಸೋದು ಅಷ್ಟು ಸುಲಭದ ಮಾತಲ್ಲ. ಮುಂದೆ ನಾವೇ ಮೆಜಾರಿಟಿ ಬರ್ತಿವಿ ಅಂತಾನೂ ಇಲ್ಲ. ಈಗ ಬಂದಿರೋವಷ್ಟು ಸೀಟು ಬಂದ್ರೂ ಸಾಕು. ಈ ದೇವೇಗೌಡನ ಸಹಕಾರವಿಲ್ಲದೆ ಯಾರು ಸರ್ಕಾರ ರಚನೆ ಮಾಡ್ತರೊ ನೋಡ್ತಿನಿ."

"ಥೂತ್ತೇರಿ!!!"

ಯಡ್ಡಿಗೆ ಕೈಕೊಟ್ಟಿದ್ದು ಚೆಡ್ಡಿಗಳು!

ಯಡಿಯೂರಪ್ಪ ಕರ್ನಾಟಕದ ಹೊಸ ಮುಖ್ಯಮಂತ್ರಿಯಾಗುವುದು ದೇವೇಗೌಡರಿಗೆ ಇಷ್ಟವಿತ್ತೋ ಇಲ್ಲವೋ ಆದರೆ ಸಂಘ ಪರಿವಾರದ ಮಾತೃಸಂಸ್ಥೆ RSS ಗೆ ಅದು ಸುತಾರಾಂ ಇಷ್ಟವಿರಲಿಲ್ಲ ಎಂದರೆ ನೀವು ನಂಬುತ್ತೀರಾ?

ರಾಜಕೀಯ ಪಿತೂರಿಗಳು, ಒಳಸಂಚುಗಳಿಗೆ ನಾನಾ ಮುಖಗಳಿರುತ್ತವೆ. ಮೇಲ್ನೋಟಕ್ಕೆ ಅದರ ಬೇರುಗಳು



ಕಾಣುವುದಿಲ್ಲ ನಿಜ. ಆದರೆ ಕೆದಕಿ ನೋಡಿದರೆ, ಅನುಮಾನ ಬರುವಂಥ ಸಂಗತಿಗಳ ಪೋಸ್ಟ್‌ಮಾರ್ಟಂ ಮಾಡಿದರೆ ಸತ್ಯ ಗೊತ್ತಾಗಲೇ ಬೇಕಲ್ಲ!

ದೇವೇಗೌಡ-ಕುಮಾರಸ್ವಾಮಿ ಬಿಜೆಪಿಯ ಯಡಿಯೂರಪ್ಪನನ್ನೇ ಮುಂದಿನ ಮುಖ್ಯಮಂತ್ರಿ ಮಾಡುತ್ತೇವೆಂದು ಮಾತು ಕೊಟ್ಟಿದ್ದರು, ಆಮೇಲೆ ನಾನಾ ನೆಪ ಹೇಳಿ ವಂಚಿಸಿದರು ಎಂಬುದು ನಿಜ.

ಆದರೆ ಗೌಡರಿಗೆ ಆ ನೆಪಗಳನ್ನು ಸೃಷ್ಟಿಸಿಕೊಟ್ಟವರ್‍ಯಾರು? ಗೌಡರು ಈಗ ಪ್ರಸ್ತಾಪಿಸುತ್ತಿರುವ ಕೋಮು ಗಲಭೆಗಳ ವಿಚಾರಕ್ಕೇ ಬರುವುದಾದರೆ....

ಅಕ್ಟೋಬರ್ 2 ಕ್ಕೆ ಮುನ್ನ ಅಂದರೆ ಯಡ್ಡಿ ಸಿಎಂ ಆಗಲು ಇನ್ನೂ ಕೇವಲ 15 ದಿನ ಬಾಕಿ ಇದ್ದಾಗ ಕರ್ನಾಟಕದ ಮೂರು ಕಡೆ ಕೋಮು ಗಲಭೆಗೆ ಪ್ರಚೋದನೆ ನೀಡುವ ಕೆಲಸ ನಡೆಯಿತು. ಈ ಗಲಭೆ ನಡೆದ ಸಮಯ ಹಾಗೂ ನಂತರದ ಘಟನಾವಳಿಗಳು ನಿಜಕ್ಕೂ ಬಿಜೆಪಿಯೊಳಗೇ ಇರುವ ಯಡ್ಡಿ ವಿರೋಧಿ ಬ್ರಾಹ್ಮಣ ಬಣದವರ ಬಗ್ಗೆಯೇ ಅನುಮಾನ ಮೂಡಿಸುವಂತಿವೆ.

ಘಟನೆ 1

ಸೆಪ್ಟೆಂಬರ್ 18 ನೇ ತಾರೀಖು ರಾತ್ರಿ ಬೆಂಗಳೂರಿನ ಬೊಮ್ಮನಹಳ್ಳಿಯಲ್ಲಿ ತಮಿಳುನಾಡಿನ ಬಸ್‌ಗೆ ಬೆಂಕಿ ಹಚ್ಚಿ ಇಬ್ಬರನ್ನು ಜೀವಂತವಾಗಿ ಸುಡಲಾಯಿತು. ಅದಕ್ಕೂ ಒಂದು ಗಂಟೆ ಮುನ್ನ ಕರುಣಾನಿಧಿ ಮಗಳು ಸೆಲ್ವಿ ಮನೆ ಮೇಲೆ ಪೆಟ್ರೋಲ್ ಬಾಂಬ್ ಎಸೆಯಲಾಗಿತ್ತು.

ಈ ದುರ್ಘಟನೆ ನಡೆದಾಗ ಯಡ್ಡಿ ಸಿಎಂ ಆಗಲು ಕೇವಲ 15 ದಿನ ಕಾಯಬೇಕಿತ್ತು.

ಘಟನೆ 2

ಸೆಪ್ಟೆಂಬರ್ 22 ರಂದು ಕರ್ನಾಟಕ ಕ್ರೈಸ್ತ ಸಮುದಾಯದ ಸುಮಾರು 10 ಸಾವಿರ ಜನ ತಮ್ಮ ಮೇಲಿನ ಚೆಡ್ಡಿಗಳ ಹಲ್ಲೆ ಪ್ರತಿಭಟಿಸಿ ಬೆಂಗಳೂರಿನಲ್ಲಿ ರ್‍ಯಾಲಿ ನಡೆಸಿದರೆ ಅದೇ ದಿನ ಅದೇ ಸಮಯಕ್ಕೆ ಅದೇ ಸ್ಥಳದಲ್ಲಿ ಹಿಂದೂ ಜಾಗರಣ ವೇದಿಕೆ ಹೆಸರಲ್ಲಿ ಪರ್ಯಾಯ ಪ್ರತಿಭಟನೆ ನಡೆಸಿ ದೊಂಬಿ ಎಬ್ಬಿಸುವ ಯತ್ನ ನಡೆಯಿತು.

ಪೊಲೀಸರು ಅತೀ ಪ್ರಯಾಸದಿಂದ ನಡೆಯಬಹುದಾಗಿದ್ದ ದೊಂಬಿ ತಪ್ಪಿಸಿದ್ದರು. ಯಡ್ಡಿ ಸಿಎಂ ಆಗಲು ಕೇವಲ 10 ದಿನವಿದ್ದಾಗ ನಡೆದ ಬಿಜೆಪಿಗಳ ಪ್ರಚೋದನಾಕಾರಿ ಪ್ರತಿಕ್ರಿಯೆ ಇದಾಗಿತ್ತು.

ಘಟನೆ 3

ಮೇಲಿನ ಎರಡೂ ಘಟನೆಗಳು ಅಷ್ಟು ಪರಿಣಾಮ ಬೀರಲಿಲ್ಲವೆಂದೋ ಏನೋ ದಾವಣಗೆರೆಯಲ್ಲಿ ಭಜರಂಗ ದಳದವರು ಚರ್ಚ್ ಮೇಲೆ ದಾಳಿ ಮಾಡಿದರು. ಯಡ್ಡಿ ಮುಖ್ಯಮಂತ್ರಿಯಾಗುವ ಗಡುವು ಬರಲು ಕೇವಲ ಒಂದು ದಿನವಿದ್ದಾಗ ನಡೆದ ಘಟನೆ ಇದು.

ಈ ಮೇಲಿನ ಮೂರು ಪ್ರಮುಖ ಘಟನೆಗಳಲ್ಲಿ ಭಾಗಿಯಾಗಿದ್ದವರು, ನಂತರ ಪೊಲೀಸ್‌ರಿಂದ ಅರೆಸ್ಟ್ ಆದವರೆಲ್ಲಾ ಬಿಜೆಪಿ, ಭಜರಂಗದಳ, RSS, ಹಿಂದೂ ಜಾಗರಣಾ ವೇದಿಕೆಯವರಾಗಿದ್ದರೆಂಬುದು ಏನನ್ನು ಸೂಚಿಸುತ್ತದೆ.

ಬಿಜೆಪಿ (ಯಡ್ಡಿ) ಕೈಗೆ ಅರ್ಧ ಅಧಿಕಾರ ಬಂದಾಗಲೇ ಇಷ್ಟು ಗಲಭೆಗಳು ನಡೆಯುತ್ತವೆ, ಇನ್ನು ನಾಳೆ ಪೂರ್ತಿ ಅಧಿಕಾರ ಸಿಕ್ಕರೆ ಏನೇನು ಅನಾಹುತಗಳಾಗಬಹುದು ಎಂದು ಜನ ಭಯಭೀತರಾಗಲಿ ಎಂಬ ದುರುದ್ದೇಶವಲ್ಲವೆ?

ಅಧಿಕಾರ ಹಸ್ತಾಂತರ ಖಚಿತವಿಲ್ಲ ಎಂದು ಅಪಸ್ವರ ತೆಗೆಯುತ್ತಿದ್ದ ಜೆಡಿಎಸ್‌ನವರಿಗೆ ಇನ್ನೂ solid ಆದ ನೆಪಗಳನ್ನು ಸೃಷ್ಟಿಸಿಕೊಡುವ ಸಂಚುಗಳಲ್ಲವೆ ಇವು?

ಕೊನೆಗೆ ಆಗಿದ್ದೂ ಅದೇನೆ, ಬಿಜೆಪಿಯನ್ನು ಅಧಿಕಾರದಿಂದ ದೂರವಿಡಬೇಕೆಂಬ ಗೌಡರ ಬಯಕೆಯನ್ನು ಬಿಜೆಪಿಯ ಯಡ್ಡಿ ವಿರೋಧಿ ಬಣದವರೇ ಈಡೇರಿಸಿಕೊಟ್ಟಂತಾಯಿತು. ಯಡ್ಡಿ ಮುಖದಲ್ಲಿ ಈಗ ಬರೀ ಪ್ರೇತಕಳೆ. ಕಣ್ಣಲ್ಲಿ ನೀರು ತುಂಬಿದೆ. ಯಡ್ಡಿಗೆ ಸಿಎಂಗಿರಿ ತಪ್ಪಿಸಿದ ಖುಷಿಯಲ್ಲಿ ಅವರ ವಿರೋಧಿ ಬಣದವರ ಕಣ್ಣಲ್ಲಿ 'ಅನಂತಾನಂತ' ಆನಂದಭಾಷ್ಪ!



ಅನಂತೂ ಗುಂಪಿನ ಪಾತ್ರ

ಒಂದು ಅತ್ಯಂತ ಸರಳ ವಿಚಾರ ಏನೆಂದರೆ ಅಧಿಕಾರ ಹಸ್ತಾಂತರಕ್ಕೆ ಕೇವಲ ಹದಿನೈದು ದಿನವಿದ್ದಾಗ ಸಂಘ ಪರಿವಾರ ಈ ರೀತಿಯ ದೊಂಬಿ, ಗಲಭೆಗಳನ್ನು ನಡೆಸುವ ಅಗತ್ಯ ಇರಲಿಲ್ಲ, ಅಂಥ ಯಾವುದೇ ಘಟನೆ ನಡೆದರೂ ಗೌಡರು ಅದನ್ನೇ ಪ್ರತ್ಯಸ್ತ್ರವಾಗಿ ಬಳಸಿಕೊಳ್ಳದೆ ಬಿಡುವುದಿಲ್ಲ ಎಂಬುದು ಯಾರಿಗಾದರೂ ಗೊತ್ತಿರಬೇಕಿತ್ತು.

ಬಿಳಿದಾಳೆ ಈಶ

ಕಾಮನ್‌ಸೆನ್ಸ್ ವಿಚಾರ ಇದು.

ಸಂದರ್ಭ ಅಷ್ಟು ಸೂಕ್ಷ್ಮವಾಗಿದ್ದಾಗಲೂ ಬೊಮ್ಮನಹಳ್ಳಿಯಲ್ಲಿ ಬಸ್‌ಗೆ ಯಾಕೆ ಬೆಂಕಿ ಹಾಕಲಾಯಿತು? ಈ ಕೃತ್ಯ ಯಾರ ಚಿತಾವಣೆಯಿಂದ ನಡೆಯಿತು? ಎಂಬ ಪ್ರಶ್ನೆಗಳಿಗೆ ಬಿಜೆಪಿಗಳೇ ಉತ್ತರ ಕೊಡಬೇಕಿದೆ.

ಎಲ್ಲರಿಗೂ ಗೊತ್ತಿರುವಂತೆ ಬಿಜೆಪಿಯೊಳಗೆ ಅಂತ ಒಗ್ಗಟ್ಟಿಲ್ಲ, ಯಡಿಯೂರಪ್ಪ ಬಣ, ಅನಂತ್‌ಕುಮಾರ್ ಬಣ, ಬಸವರಾಜ್ ಪಾಟೀಲ್ ಯತ್ನಾಳ್ ಗುಂಪುಗಳಿವೆ. ಇವು ಪ್ರಧಾನವಾಗಿ ಬ್ರಾಹ್ಮಣ-ಲಿಂಗಾಯತ ಜಾತಿ ಗುಂಪುಗಳು. ಇದಲ್ಲದೆ ಜಗದೀಶ್ ಶೆಟ್ಟರ್ ಗುಂಪಿದೆ.



ಯಡ್ಡಿ ವಿರೋಧಿ ಗ್ಯಾಂಗ್ ಸುಟ್ಟ ಬಸ್ (ಸೆಪ್ಟೆಂಬರ್ 18)

ಲಿಂಗಾಯತ ಯಡ್ಡಿಯ ಪ್ರಾಬಲ್ಯ ಕಂಟ್ರೋಲ್ ಮಾಡಲು ಇನ್ನೊಬ್ಬ ಲಿಂಗಾಯತ ನಾಯಕನಿರಲಿ ಎಂದು RSS ನವರೇ ಬೆಳೆಸಿದ ನಾಯಕ ಈ ಶೆಟ್ಟರ್.

ಕಳೆದ 20 ವರ್ಷಗಳಿಂದಲೂ ಬಿಜೆಪಿಯಲ್ಲಿ ಗಾಣದೆತ್ತಿನಂತೆ ದುಡಿಯುತ್ತಾ ಪ್ರಮುಖ ನಾಯಕನಾಗಿ ಬೆಳೆದ ಯಡ್ಡಿ ಒಂದು ರೀತಿ ಬಿಜೆಪಿಯೊಳಗೇ ಇರುವ ಇನ್ನಿತರರಲ್ಲಿ ಮತ್ಸರ ಮೂಡುವಂತೆ ಇಮೇಜ್ ಬೆಳೆಸಿಕೊಂಡಿದ್ದರು. 2004 ರಲ್ಲಿ ಎಲೆಕ್ಷನ್ ನಡೆದಾಗ ಬಿಜೆಪಿಗೆ ಬಹುಮತ ಖಚಿತ ಎಂಬ ನಿರೀಕ್ಷೆಯಿತ್ತು. ಆದರೆ 79 ಸೀಟುಗಳನ್ನಷ್ಟೇ ಗೆದ್ದ ಬಿಜೆಪಿಗೆ ಅಧಿಕಾರ ಮರೀಚಿಕೆಯಾಗಷ್ಟೇ ಉಳಿದಿತ್ತು. ಆಗ ರಾಜ್ಯ ಬಿಜೆಪಿ ಅಧ್ಯಕ್ಷರಾಗಿದ್ದವರು ಅನಂತ್‌ಕುಮಾರ್. ಬಿಜೆಪಿಗಳು ಆಗಲೇ ಜೆಡಿಎಸ್‌ನೊಂದಿಗೆ ಮೈತ್ರಿ ಸರ್ಕಾರ ರಚಿಸುವ ಪ್ರಸ್ತಾಪವಿಟ್ಟಿದ್ದರು. ಆದರೆ ಗೌಡರು ಒಪ್ಪದೆ ಕಾಂಗ್ರೆಸ್ ಜೊತೆ ದಳದ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ಆದರ ಬದಲಾಗಿ ಜೆಡಿಎಸ್-ಬಿಜೆಪಿ ಸಮ್ಮಿಶ್ರ ಸರ್ಕಾರ ಬಂದಿದ್ದರೆ ಅವತ್ತಿನ ಮಟ್ಟಿಗೆ ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿಯಾಗಿದ್ದದು ಅನಂತ್‌ಕುಮಾರ್ ಮಾತ್ರ. ಆದರ[illegible] ಯಾವಾಗ ಜೆಡಿಎಸ್-ಬಿಜೆಪಿ ಸಖ್ಯಕ್ಕೆ ಒಪ್ಪಲಿಲ್ಲವೋ[illegible] ಅನಂತೂ ನಿರಾಶೆಯಿಂದ ಸುಮ್ಮನಾಗಿಬಿಟ್ಟರು[illegible] ಯಡಿಯೂರಪ್ಪ ವಿರೋಧಿ ನಾಯಕರಾಗಿ ತಮ್ಮ ಜೀತ[illegible] ಮುಂದುವರೆಸಿದ್ದರು. ಪಾರ್ಟಿ ನಾಯಕ ಅನಂತ್‌ಕುಮಾರ್[illegible] ಅಂತೂ ಯಡ್ಡಿ ವಿರುದ್ಧ ನಾನಾ ಮಸಲತ್ತು ನಡೆಸುತ್ತಾ[illegible] ತುಳಿದು ಮೂಲೆಗುಂಪು ಮಾಡಲು ಯತ್ನಿಸುತ್ತಲೇ[illegible] ಇದ್ದರು. ತಮ್ಮ ರಾಜಕೀಯ ಜೀವನ ಬರಪೀಡಿತವಾಗೇ[illegible] ಮುಗಿದು ಹೋಯಿತೆಂಬ ಹತಾಶೆಗೆ ಬಿದ್ದಿದ್ದ ಯಡ್ಡಿ[illegible] ಹೇಗಾದರೂ ಮಾಡಿ ಸಿಂಗಲ್ ಮಂತ್ರಿಗಿರಿಯನ್ನಾದರೂ[illegible] ಗಿಟ್ಟಿಸಿಕೊಳ್ಳಲು ಪರದಾಡತೊಡಗಿದ್ದರು.

ಕುಮಾರಸ್ವಾಮಿ-ಯಡ್ಡಿ ರಹಸ್ಯವಾಗಿ ಭೇಟಿಯಾಗಿದ್ದು ಆಗಲೇ. ಯಡ್ಡಿ ಒಬ್ಬರೇ ಬಿಜೆಪಿ ಬಿಟ್ಟು ಹೊರಬರುವ ಬದಲಾಗಿ ಒಂದಿಷ್ಟು ಶಾಸಕರನ್ನು ಜೊತೆಗೆ ಕರೆತಂದರೆ ಏನಾದರೂ ಹೊಸ ಕಾಂಬಿನೇಷನ್ ಯೋಚಿಸಬಹುದೆಂದು ಕುಮಾರಸ್ವಾಮಿ ಸೂಚಿಸಿದಾಗ ಯಡ್ಡಿ ಒಪ್ಪಿದ್ದರು. ಬಳ್ಳಾರಿ ಗಣಿಖೋರರಾದ ಲಾಡ್ ಸೋದರರ ಹಣ ಬೆಂಬಲ ಸಿಗುವುದು ಖಚಿತವಾಗಿತ್ತಾದ್ದರಿಂದ ಬಿಜೆಪಿಯನ್ನೇ ವಿಭಜಿಸಲು ಯಡ್ಡಿ ಪಿತೂರಿ ನಡೆಸಿದ್ದರು. ಆಗ ಯಡ್ಡಿ ಆಸೆಗೆ ಕಲ್ಲು ಹಾಕಿದ್ದೇ ಅನಂತ್‌ಕುಮಾರ್. ಅವರು ಪಾರ್ಟಿ ವಿಭಜನೆಯನ್ನು ತಡೆದರಲ್ಲದೆ ಯಡ್ಡಿ ಮಿಸುಕಾಡಲು ಆಗದಂತೆ ಪಾತಾಳಕ್ಕೆ ತುಳಿದುಬಿಟ್ಟಿದ್ದರು.

ಯಡ್ಡಿ-ಅನಂತೂ ಬಣಗಳ ನಡುವಿನ ಜಗಳ[illegible] ಹಾದಿರಂಪ ಬೀದಿರಂಪದಂತೆ ನಡೆಯಿತು. ನಂತರ[illegible] ರಾಷ್ಟ್ರನಾಯಕ ವೆಂಕಯ್ಯ ನಾಯ್ಡು ಸಮ್ಮುಖದಲ್ಲಿ[illegible] ಚಾಮರಾಜಪೇಟೆಯ ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ[illegible] ಬಿಜೆಪಿ ಶಾಸಕರ ಸಭೆ ನಡೆಸಿ ಹೇಗೋ ಒಂದು ತೇಪೆ[illegible] ಹಾಕಿ ಭಿನ್ನಾಭಿಪ್ರಾಯ ಶಮನಗೊಳಿಸಲಾಗಿತ್ತು.

ಈ ಬೆಳವಣಿಗೆಗಳನ್ನೆಲ್ಲಾ ಗಮನಿಸುತ್ತಿದ್ದ RSS[illegible] ಯಡ್ಡಿ ಬಗ್ಗೆ ಅಂದೇ ಅಪನಂಬಿಕೆ ಬೆಳೆಸಿಕೊಳ್ಳಲು[illegible] ಪ್ರಾರಂಭಿಸಿತ್ತು. ಜುಜುಬಿ ಮಂತ್ರಿಗಿರಿಯ ಆಸೆಗೆ ಬಿದ್ದು[illegible] ಪಾರ್ಟಿಯನ್ನೇ ವಿಭಜಿಸಲು ಹೊರಟಿದ್ದ ಯಡ್ಡಿಯ[illegible] ರಾಜಕೀಯ ಭವಿಷ್ಯ ಬಹುಶಃ ಅಂದೇ ನಿರ್ಧಾರವಾಗಿತ್ತು[illegible] ಇದು ನಡೆದದ್ದು 2005 ರ ನವೆಂಬರ್-ಡಿಸೆಂಬರ್‌ನಲ್ಲಿ[illegible] ಮುಂದೆ 2006 ರ ಆರಂಭದಲ್ಲಿ ಕಾಂಗ್ರೆಸ್‌ನಿಂದ ದೂರ[illegible] ಸರಿದು ಜೆಡಿಎಸ್ ಸರ್ಕಾರ ರಚಿಸುವ ಯೋಚನೆ[illegible]



ದಾವಣಗೆರೆಯಲ್ಲಿ ಕ್ರೈಸ್ತರ ಮೇಲೆ ಭಜರಂಗದಳದ ಹಲ್ಲೆಗೆ ಪ್ರತಿಭಟನೆ (ಅಕ್ಟೋಬರ್ 1-2)

ಯಡ್ಡಿಗೇ ಚುಚ್ಚಿದ ಬಳ್ಳಾರಿ ಮುಳ್ಳು

ಯಡ್ಡಿ ಮುಖ್ಯಮಂತ್ರಿಯಾಗಬೇಕೆಂದರೆ ದೇವೇಗೌಡರ ಒಪ್ಪಿಗೆ ಬೇಕೇಬೇಕು ಎಂಬುದು ಶಾಲಾಬಾಲಕರಿಗೂ ತಿಳಿದಿದ್ದ ಸತ್ಯ. ಹೀಗಿರುವಾಗ ಅಧಿಕಾರ ಹಸ್ತಾಂತರದ ದಿನ ಇನ್ನೇನು ಹತ್ತಿರ ಬಂತೆನ್ನುವಾಗ ಬಿಜೆಪಿ ಶಾಸಕನೊಬ್ಬ ಗೌಡರಿಗೆ 'ಮುದಿ ಗೂಬೆ' ಅಂತ ಟಿವಿ ಚಾನಲ್‌ಗಳೆದುರು ನಿಂತು ಚೀರಿಕೊಂಡರೆ ಅದನ್ನು ಏನೆಂದು ಅರ್ಥೈಸುತ್ತೀರಿ?



ಈ ಜನಾರ್ದನ ರೆಡ್ಡಿ, ಶ್ರೀರಾಮುಲುಗೆ 'ಸ್ವಲ್ಪ ದಿನ ತಿಕಾ ಬಾಯಿ ಮುಚ್ಚಿಕೊಂಡಿರಿ' ಅಂತ ಯಾಕೆ ಅನಂತ್‌ಕುಮಾರ್, ಸದಾನಂದಗೌಡರು ಲಗಾಮು ಹಾಕಲಿಲ್ಲ. ಗೌಡ-ಕುಮಾರಸ್ವಾಮಿಯನ್ನು ಸಿಟ್ಟಿಗೆಬ್ಬಿಸಲು ಈ ಗುಂಪು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುತ್ತಿತ್ತೆನ್ನಲು ಇದಕ್ಕಿಂತ ಉದಾಹರಣೆ ಬೇಕೆ? ಯಡ್ಡಿಗೆ ಮುಖ್ಯಮಂತ್ರಿ ಹುದ್ದೆ ಸಿಗಲೇಬೇಕು ಎಂಬ ಬಯಕೆ ಇವರಿಗಿದ್ದಿದ್ದರೆ ಇವರೇಕೆ ಈ ಪರಿ ರಂಪಾಟಗಳನ್ನು ಸೃಷ್ಟಿಸುತ್ತಿದ್ದರು.

'ರಾಮು ಯಾವ ಕಾಲೇಜಿನಲ್ಲಿ ಇಂಜಿನಿಯರ್ ಕಲೀತಿದ್ದ?' ಎಂಬ ವಿಚಾರ ಯಡ್ಡಿ ಸಿಎಂಗಿರಿಗಿಂತ ಇವರಿಗೆ ದೊಡ್ಡದಾಗಿ ಕಾಣಿಸಿದ್ದು ಅನುಮಾನ ತರಿಸುವುದಿಲ್ಲವೆ?

'ದೇವೇಗೌಡ ಮುದಿ ಗೂಬೆ, ರಾಕ್ಷಸ' ಎಂಬ ಪ್ರಚೋದನಾಕಾರಿ ಹೇಳಿಕೆಗಳನ್ನು ಹಸ್ತಾಂತರ ದಿನ ಹತ್ತಿರಾಗುತ್ತಿದ್ದಾಗಲೇ ಈ ರೆಡ್ಡಿಗಳು ದೊಡ್ಡ ಗಂಟಲಲ್ಲಿ ಕಿರುಚುವಂತೆ ಮಾಡಿ ಯಡ್ಡಿ ಕೈಗೆ ಚಿಪ್ಪು ಕೊಡಿಸಿದ ಈ ನಾಯಕಮಣಿಗಳೇ ಈಗ ಯಡ್ಡಿ ಅಕ್ಕಪಕ್ಕ ನಿಂತು ಸಮಾಧಾನ ಮಾಡುತ್ತಿರುವುದು ಕುಚೋದ್ಯ ಅಲ್ಲವೇ?

ಶುರುವಾದಾಗ ಕುಮಾರಸ್ವಾಮಿ ಮತ್ತು ಯಡ್ಡಿ ನಡುವೆ ಮಾತುಕತೆಯಾಗಿ ತಲಾ 20 ತಿಂಗಳ ಅಧಿಕಾರ ಹಂಚಿಕೆಯ ಒಪ್ಪಂದವಾಯಿತು. ಆಗಲೂ ಈ ಸೂತ್ರಕ್ಕೆ ಬಿಜೆಪಿ ಹೈಕಮಾಂಡ್ ಅನ್ನು ಒಪ್ಪಿಸಲು ಯಡ್ಡಿ ಬಹಳ ಸರ್ಕಸ್ ನಡೆಸಿದ್ದರು. ಹೇಗೊ ಕೊನೆಗೆ ಒಪ್ಪಿಗೆಯಾದಾಗ ಯಡ್ಡಿಗೆ ಲಾಟರಿ ಹೊಡೆಯಿತು. ಅವರು ಕರ್ನಾಟಕದ ಉಪಮುಖ್ಯ ಮಂತ್ರಿಯಾಗಿಬಿಟ್ಟರು.

ಮತ್ತೊಂದೆಡೆ ಯಡ್ಡಿಯ ಈ ಬೆಳವಣಿಗೆಗಳನ್ನು ಈರ್ಷೆಯಿಂದ ಗಮನಿಸುತ್ತಿದ್ದ ಇನ್ನೊಂದು ವಿರೋಧಿ ಬಣ ಯಡ್ಡಿ ಕಾಲೆಳೆಯಲು ಸೂಕ್ತ ಅವಕಾಶಕ್ಕಾಗಿ ಕಾಯುತ್ತಿತ್ತು. ಹಾಗೆ ನೋಡಿದರೆ ಈ ಗುಂಪು ತನಗೆ ಸಿಕ್ಕ ಯಾವ ಅವಕಾಶವನ್ನು ಬಿಡಲಿಲ್ಲ.



ಆರೆಸ್ಸೆಸ್‌ನ ಗಣೇಶ್ ಉಡುಪ

ಜನಾರ್ದನ ರೆಡ್ಡಿ, ಶ್ರೀರಾಮುಲು ಬಾಯಿಂದ 'ಗೌಡರ ತಿಥಿ ಮಾಡಿಸುವ, ಕುಮಾರಸ್ವಾಮಿ ಮೇಲೆ ಕೊಲೆ ಯತ್ನದ ಆರೋಪ' ಮಾಡಿಸಿ ಪರಿಸ್ಥಿತಿಯನ್ನು ಹದಗೆಡಿಸಿದ್ದು ಇದೇ ಗುಂಪು. ಯಡ್ಡಿಗೆ ಒಮ್ಮೆ ಮುಖ್ಯಮಂತ್ರಿ ಹುದ್ದೆ ಸಿಕ್ಕೇಬಿಟ್ಟರೆ ಮುಂದಿನ ಕೆಲ ವರ್ಷಗಳಾದರೂ ಯಡ್ಡಿ ನಾಯಕತ್ವಕ್ಕೆ ಅಡೆತಡೆಗಳೇ ಇರುವುದಿಲ್ಲ ಎಂಬುದನ್ನು ಯೋಚಿಸಿದ ಈ ಗುಂಪು ಹಲವಾರು ಪಿತೂರಿಗಳಿಗೆ ಚಾಲನೆ ಕೊಟ್ಟಿತು. ಯಾವಾಗ ರಾಮಸೇತು ವಿವಾದದಲ್ಲಿ ಕರುಣಾನಿಧಿಯ ಚಾಟ ಯೇಟಿನ ಹೇಳಿಕೆ ಬಂತೋ ಮಿಂಚಿನ ವೇಗದಲ್ಲಿ ಕೆಲಸ ಮಾಡಿದ ಈ ಗುಂಪು ದೊಂಬ ಗಲಭೆಗಳಿಗೆ ಪ್ರಚೋದನೆ ನೀಡಿತು.

ಸೆಪ್ಟೆಂಬರ್ 18 ರಂದು ಬಸ್ ಬೆಂಕಿ ಘಟನೆ ನಡೆಸಿದ ಬೊಮ್ಮನಹಳ್ಳಿಯಲ್ಲಿರುವ ಮಂಜುನಾಥ ರೆಡ್ಡಿ, ಸತೀಶ್ ರೆಡ್ಡಿ ಯಡ್ಡಿ ವಿರೋಧಿ ಗುಂಪಿನವರು. ಅಷ್ಟೇ ಅಲ್ಲ, ಪಕ್ಷದ ಆನೇಕಲ್‌ನ ಬಿಜೆಪಿ ಶಾಸಕ ನಾರಾಯಣಸ್ವಾಮಿಗೆ ಮಂತ್ರಿಯಾಗುವ ಆಸೆ ಇತ್ತಾದರೂ ಯಡ್ಡಿ ಅವರನ್ನು ನಿರ್ಲಕ್ಷಿಸಿ ದಲಿತ ಕೋಟಾದಲ್ಲಿ ಬೀದರ್‌ನ ರೇವೂ ನಾಯಕ್‌ಗೆ ಅವಕಾಶ ಕೊಡಿಸಿದ್ದರು. ಈ ಪಿತೂರಿಯ ರೂವಾರಿಗಳಾದ RSSನ ಗಣೇಶ್ ಉಡುಪ, ಜೆಪಿನಗರದ ಕಾರ್ಪೊರೇಟರ್ ನಟರಾಜ್ ಹಾಗೂ ಅಷ್ಟು RSS. ಮುಖ್ಯವಾಗಿ ಇವರೆಲ್ಲ ಯಡ್ಡಿ ವಿರೋಧಿಗಳೆನ್ನುವುದು ಬಿಜೆಪಿಯಲ್ಲಿರುವವರಿಗೆಲ್ಲಾ ಗೊತ್ತು. ಈ ಷಡ್ಯಂತ್ರಗಳಲ್ಲಿ ಇವರೆಲ್ಲಾ ಕೇವಲ ದಾಳಗಳಾಗಿಯೇ ಬಳಕೆಯಾಗಿದ್ದಾರೆ. ಅಸಲಿ ಸೂತ್ರಧಾರರು ಮಾತ್ರ RSSನ ಹೆಡ್‌ಕ್ವಾಟ್ರಸ್ ಕೇಶವ ಶಿಲ್ಪದಲ್ಲೇ ಇದ್ದರು.

ಬಿಜೆಪಿಗೆ (ಯಡ್ಡಿಗೆ) ಸಿಗಲಿದ್ದ ಒಂದು ಸುವರ್ಣಾವಕಾಶಕ್ಕಿಂತ ಜುಜುಬಿ ಒಂದು ಕರುಣಾನಿಧಿಯ ಹೇಳಿಕೆ ಇವರಿಗೆ ಅಳಿವು ಉಳಿವಿನ ಪ್ರಶ್ನೆಯಾಗಬೇಕಿತ್ತಾ? ಆಕಸ್ಮಾತ್ ಪ್ರತಿಭಟಿಸುವುದೇ ಆದಲ್ಲಿ ಪತ್ರಿಕಾ ಹೇಳಿಕೆ ನೀಡಿ, ಧರಣಿ ಮಾಡಿ ತಮ್ಮ ನಿಲುವು ಹೇಳುವ ಅವಕಾಶ ಬಿಜೆಪಿಯವರಿಗೆ ಇತ್ತಲ್ಲವೆ?

ಇಷ್ಟೆಲ್ಲಾ ಅವಕಾಶಗಳಿದ್ದಾಗಲೂ ಬಸ್‌ಗೆ ಬೆಂಕಿ ಹಚ್ಚಿ ಇಬ್ಬರನ್ನು ಕೊಂದು ತಾವು ಸಿಕ್ಕಿಬಿದ್ದಿದ್ದೇ ಅಲ್ಲದೇ ಯಡಿಯೂರಪ್ಪನ ಬಾಯಲ್ಲಿ "ಇದರಲ್ಲಿ ಸಂಘ ಪರಿವಾರದವರ ಕೈವಾಡವಿಲ್ಲ" ಎಂಬ ಒತ್ತಾಯಪೂರ್ವಕ ಹೇಳಿಕೆಯನ್ನು ಬಿಜೆಪಿ ನಾಯಕರು ಕೊಡಿಸಿದ್ದರು.

ಯಾಕೆ ಸದಾನಂದಗೌಡರೇ ಆ ಹೇಳಿಕೆ ನೀಡಬಹುದಿತ್ತಲ್ಲ? ಅವರ ಬದಲಾಗಿ ಯಡ್ಡಿಯೇ ಪ್ರತಿಕ್ರಿಯೆ ನೀಡುವಂತೆ ಅವರಿಗೆ ಸೂಚಿಸಿದವರ್‍ಯಾರು?

ಈ ದುರ್ಘಟನೆ ನಡೆದ ಮೂರನೇ ದಿನ ಮಡಿವಾಳ ಪೊಲೀಸರು RSSನ ಹರೀಶ್ ಎಂಬಾತನನ್ನು ಅರೆಸ್ಟ್ ಮಾಡಿದರು. ಕೇಶವಶಿಲ್ಪದಲ್ಲೇ ಓಡಾಡಿಕೊಂಡಿದ್ದ ಗಣೇಶ್ ಈಗ ನಾಪತ್ತೆಯಾಗಿದ್ದಾನೆ.

ಯಡ್ಡಿ ಹುತಾತ್ಮರಾಗಿದ್ದಾರೆ!



ಆರೆಸ್ಸೆಸ್ ಹರೀಶ್

ಇದರಿಂದ ಸಿಗುವ ಅಲ್ಪಸ್ವಲ್ಪ ಸಿಂಪಥಿ ಓಟುಗಳು ನಾಳೆ ಬಿಜೆಪಿಗೆ ನೆರವಾಗಬಹುದು. ಆದರೆ ಮಜಾ ಸಂಗತಿ ಏನೆಂದರೆ "ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಒಂದು ವೇಳೆ ಬಿಜೆಪಿಗೆ ಮೆಜಾರಿಟಿ ಸಿಕ್ಕರೆ ಯಡಿಯೂರಪ್ಪನೇ ನಮ್ಮ ಮುಖ್ಯಮಂತ್ರಿ" ಎಂದು ಘೋಷಿಸಲು ಬಿಜೆಪಿ ನಾಯಕರು ಹಿಂದೇಟು ಹಾಕಿದ್ದಾರೆ. ದೇವೇಗೌಡರೇನೊ ಯಡ್ಡಿಗೆ ಚಾಪಾಳ ಮಾತ್ರ ಕೊಟ್ಟಿದ್ದಾರೆ ನಿಜ.

ಆದರೆ ಆ ಚೇಳಿ ಮಾತ್ರ ಗೌಡರ ಕೈಗೆ ತಲುಪಿಸಿದ್ದು ಮಾತ್ರ ಬಿಜೆಪಿಯೊಳಗಿರುವ ಯಡ್ಡಿ ವಿರೋಧಿಗಳೇ.

ಬಿಜೆಪಿ ಗರ್ಭಗುಡಿಯೊಳಗೆ 'ಅನಂತ' ಪ್ರಭಾವ ವಿರುವ ಗುಂಪದು.

ಲಿಂಗಾಯತರ ಕಿವಿಗೆ ಕಮಲದ ಹೂ

ಅಧಿಕಾರ ಹಸ್ತಾಂತರದ ರಂಪಾಟದಲ್ಲಿ ಈಗ ಯಡ್ಡಿಗೆ ನಷ್ಟವಾಗಿರುವುದು ಕೇವಲ ಮುಖ್ಯಮಂತ್ರಿ ಹುದ್ದೆ ಮಾತ್ರವಲ್ಲ. ಅದರ ಜೊತೆಗೆ ಯಡ್ಡಿಗಿದ್ದ ಮಾಸ್ ಲೀಡರ್ ಎಂಬ ಇಮೇಜನ್ನು ಕಿತ್ತುಕೊಳ್ಳಲಾಗುತ್ತಿದೆ.

ಎಂದಿನಂತೆ ಇದೂ ಕೂಡ ಬಿಜೆಪಿಯ 'ಗರ್ಭಗುಡಿ' ಗುಂಪಿನ ಪಿತೂರಿ. ಒಂದು ಕಾಲದ ಬಿಜೆಪಿಯ ಜನಪ್ರಿಯ ನಾಯಕ ಯಡ್ಡಿ ಈಗ ಕೇವಲ ಲಿಂಗಾಯತ ಜನಾಂಗದ ಲೀಡರ್ ಆಗಿಬಿಟ್ಟಿದ್ದಾರೆ ಸಂಘ ಪರಿವಾರದ ದೃಷ್ಟಿಯಲ್ಲಿ.

ಅಧಿಕಾರ ವಂಚಿತ ಯಡ್ಡಿಯನ್ನು ಮುಂದಿಟ್ಟುಕೊಂಡು ಬಿಜೆಪಿ ಮಾಡಲು ಹೊರಟಿರುವ ಜಾತಿ ರಾಜಕಾರಣವು ಸಾರಾಂಶದಲ್ಲಿ ಇದನ್ನೇ ಹೇಳುತ್ತಿದೆ.

ಜೆಡಿಎಸ್ ಜೊತೆ ಮುರಿದುಬಿದ್ದ ಮೈತ್ರಿಯನ್ನೇ ನೆಪವಾಗಿಟ್ಟುಕೊಂಡು ಅಕ್ಟೋಬರ್ 8 ರಿಂದ ಬಿಜೆಪಿ ನಡೆಸುತ್ತಿರುವ ಯಾತ್ರೆ ಕೇವಲ ಲಿಂಗಾಯತರನ್ನಷ್ಟೇ ಗುರಿಯಾಗಿಟ್ಟುಕೊಂಡಿದೆ.

ಸಿದ್ದಗಂಗಾ ಸ್ವಾಮಿಗಳ ಆಶೀರ್ವಾದ ಪಡೆದು ರಾಜ್ಯಾದ್ಯಂತ ಚಳವಳಿ ಮಾಡುತ್ತೇವೆನ್ನುತ್ತಿರುವ ಬಿಜೆಪಿಗೆ ಒಂದು ಚುನಾವಣಾ ರಾಜಕೀಯ ಪಕ್ಷಕ್ಕೆ ಎಲ್ಲಾ ಜಾತಿ ಜನಾಂಗಗಳ ಜನರ ಬೆಂಬಲ, ಸಹಾನುಭೂತಿ ಬೇಕಾಗುತ್ತದೆ ಎಂಬುದು ತಿಳಿದಿಲ್ಲವೆ?

ಖಂಡಿತಾ ತಿಳಿದಿದೆ.

ಆದರೆ ಹೀಗೆ ಮಾಡುವ ಮೂಲಕ ಸಿಕ್ಕಷ್ಟು ಲಿಂಗಾಯತರ ಬೆಂಬಲ consolidate ಮಾಡಿಕೊಳ್ಳುವುದು ಹಾಗೂ ಯಡ್ಡಿಯನ್ನು ಲಿಂಗಾಯತರ ವ್ಯಾಪ್ತಿಗಷ್ಟೇ ಸೀಮಿತಗೊಳಿಸುವ ಲೆಕ್ಕಾಚಾರ ಇದರ ಹಿಂದಿದೆ.

ಯಡ್ಡಿ ಇದಕ್ಕೆ ತಲೆಬಾಗಿ ಹರಕೆಯ ಕುರಿಯಾಗಲು ಹೊರಟಿದ್ದಾರೆ. ಹಾಗೆ ಹೇಳಬೇಕೆಂದರೆ ಕರ್ನಾಟಕದ ಲಿಂಗಾಯತ ಜನಾಂಗಕ್ಕೆ ಯಡ್ಡಿಯೊಬ್ಬನೇ ನಾಯಕನಾಗಿಲ್ಲ. ಜೆಡಿಎಸ್‌ನಲ್ಲಿ ಎಂ.ಪಿ. ಪ್ರಕಾಶ್, ಮಹಿಮಾ, ತಿಪ್ಪಣ್ಣ, ರಾಜಶೇಖರಮೂರ್ತಿ, ಕಾಂಗ್ರೆಸ್‌ನಲ್ಲಿ ಎಚ್.ಕೆ. ಪಾಟೀಲ್, ಖಂಡ್ರೆ ಇದ್ದಾರೆ. ಸ್ವತಃ ಬಿಜೆಪಿಯೊಳಗೆ ಯತ್ನಾಳ್, ಬಿ.ಬಿ. ಶಿವಪ್ಪ ನಂಥವರೂ ಇದ್ದಾರೆ.

ಒಕ್ಕಲಿಗರಿಗೆ, ದಲಿತರಿಗೆ, ಮುಸ್ಲಿಮರಿಗೆ, ಕುರುಬರಿಗೆ ಹೇಗೆ ಒಬ್ಬನೆ ಲೀಡರ್ ಇಲ್ಲವೋ ಅದೇ ರೀತಿ ಲಿಂಗಾಯತರಲ್ಲೂ ಏಕಮೇವಾದ್ವಿತೀಯ ನಾಯಕ ಅಂತ ಯಾರೂ ಇಲ್ಲ. ಎಲ್ಲರೂ 'ಹಮಾರಾ ಕುತ್ತಾ ಹಮಾರ ಗಲ್ಲಿಕಾ ಶೇರ್ ಹೈ' ಎಂಬಂತಿರುವವರೆ. ವಸ್ತುಸ್ಥಿತಿ ಹೀಗಿರುವಾಗ ಯಡ್ಡಿಗಾದ ವಂಚನೆಯನ್ನೇ ಗೋಳಾಡಿಕೊಂಡು ದೇಶದ ತುಂಬಾ ಟಾಂಟಾಂ ಹೊಡೆದರೂ ಬಿಜೆಪಿಗೆ ಸಿಗುವ ಲಾಭ ಅಷ್ಟರಲ್ಲೇ ಇದೆ. ಅಸಲಿಗೆ ಲಿಂಗಾಯತರಲ್ಲೇ ಈಗ ಒಗ್ಗಟ್ಟಿಲ್ಲ. ನೊಣಬ, ಸಾದರು, ಆರಾಧ್ಯರು, ಜಂಗಮರು, ಪಂಚಮಸಾಲಿಗಳು, ಗೌಡರು, ಬಣಜಿಗರು, ಶೆಟ್ಟರು, ರೆಡ್ಡಿ ಲಿಂಗಾಯತರೆಂಬ ಸೂರೆಂಟು ವಿಭಜನೆ ಈಗಾಗಲೇ ಇದೆ. ಈ ಪೈಕಿ ಯಡ್ಡಿ ಯಾವ ಲಿಂಗಾಯತರ ನಾಯಕ?

ಅತೀ ತಮಾಷೆಯ ವಿಚಾರ ಏನೆಂದರೆ ಅಖಿಲ ಭಾರತ ವೀರಶೈವ ಮಹಾಸಭಾದ ಕೆಲ ನಾಯಕರಿಗೆ ಯಡ್ಡಿ ತಲೆ ಕಂಡರಾಗುವುದಿಲ್ಲ. ಈ ಯಡಿಯೂರಪ್ಪ 15 ಪರ್ಸೆಂಟ್ ಲಿಂಗಾಯತ ಅಷ್ಟೇ ಎಂದು ಗೇಲಿ ಮಾಡುವ ಲಿಂಗಾಯತರೂ ಇದ್ದಾರೆ.

ಯಡ್ಡಿಗಾದ ವಂಚನೆಯನ್ನು ಬಿಜೆಪಿಯ ಅನಂತೂ ಗ್ಯಾಂಗ್ ಇನ್ನಿಲ್ಲದಂತೆ ಆನಂದಿಸುತ್ತಿದೆ.

ನೀವೇ ಈಗ ಗಮನಿಸಿ ನೋಡಿ: ಯಡ್ಡಿಗೆ ಸಿಎಂಗಿರಿ ಮಿಸ್ ಆಯಿತೆಂದು ಮೊದಲು ಪ್ರತಿಭಟಿಸಿದ್ದು ಕೇವಲ ವೀರಶೈವ ಸಂಘಟನೆಗಳೆ. ಆದರೆ ಅದೇ ರಾಮಸೇತು ವಿವಾದ, ಬೆನ್ನಿ ಹಿನ್ ಗಲಾಟೆ, ವಿರಾಟ್ ಹಿಂದೂ ಸಮಾಜೋತ್ಸವಗಳ ವಿಚಾರ ಬಂದಿದ್ದಾಗ ಕರ್ನಾಟಕದ ಗಲ್ಲಿಗಲ್ಲಿಗಳಲ್ಲೂ ಚೆಡ್ಡಿ ಬಿಚ್ಚಿಕೊಂಡು ಕುಣಿದು ಗಲಾಟೆ ಎಬ್ಬಿಸುತ್ತಿರಲಿಲ್ಲವೆ ಈ ಬಿಜೆಪಿಗಳು. ಈಗ ಯಡ್ಡಿ ವಿಚಾರ ಬಂದಾಗ ಮಾತ್ರ ಅದು ಲಿಂಗಾಯತರ ಹಣೆಬರ ಎಂಬಂತೆ ಬಿಂಬಿಸುತ್ತಿರುವುದೇಕೆ?


ಈ ಅವಕಾಶ ಬಳಸಿಕೊಂಡು ಲಿಂಗಾಯತರ ಸಿಂಪಥಿ ಗಿಟ್ಟಿಸಲು ಬಿಜೆಪಿ ಹವಣಿಸುತ್ತಿರುವುದು ನಿಜ. ಆದರೆ ಇದೇ ಬಿಜೆಪಿಯ ಬ್ರಾಹ್ಮಣ ಗರ್ಭಗುಡಿ ಸಂಸ್ಕೃತಿಯಿಂದ ಬೇಸತ್ತು ತಾನೆ ರಾಜಶೇಖರ ಮೂರ್ತಿ, ಬಿ.ಬಿ. ಶಿವಪ್ಪ, ಯತ್ನಾಳ್ ಥರದ ಲಿಂಗಾಯತ ಲೀಡರ್‌ಗಳು ಪಾರ್ಟಿಯಿಂದ ದೂರವಾದದ್ದು.

ಯಡ್ಡಿ ಈಗಲಾದರೂ ಎಚ್ಚೆತ್ತುಕೊಳ್ಳದೇ ಹೋದರೆ ಮುಂದಿನ ದಿನಗಳಲ್ಲಿ ಲಿಂಗಾಯತ ಕೋಮಿನ ಯಾವುದೋ ಒಂದು ಉಪಜಾತಿಯ ನಾಯಕ ಎನಿಸಿಕೊಂಡು ನಿವೃತ್ತ ಜೀವನ ನಡೆಸಬೇಕಾಗುತ್ತದಷ್ಟೇ.

ಮಾಸ್ ಲೀಡರ್ ಆದವನು ಎಲ್ಲಾ ಜನರ ಪ್ರತಿನಿಧಿಯಂತಿದ್ದರೆ ಮಾತ್ರ ಅವನಿಗೊಂದು ರಾಜಕೀಯ ಭವಿಷ್ಯ ಇರುತ್ತದೆ.

ಈಗ ಅನಂತಕುಮಾರ್‌ರನ್ನೇ ನೋಡಿ. ಅವರನ್ನು ಬಿಜೆಪಿಗಳು ಲೋಕನಾಯಕ ಎಂಬಂತೆ ಬಿಂಬಿಸುತ್ತಾರೆಯೇ ವಿನಃ ಬ್ರಾಹ್ಮಣ ನಾಯಕನೆಂದಲ್ಲ. ಹೀಗಿರುವಾಗ ಯಡ್ಡಿ ಯಾಕೆ ಲಿಂಗಾಯತರ ನಾಯಕನಾಗಷ್ಟೇ ಉಳಿಯಬೇಕು?

ಸ್ವಾಮಿಗ್ಯಾಕೆ ರಾಜಕೀಯ



ಕರ್ನಾಟಕ ರತ್ನ ಸಿದ್ಧಗಂಗಾ ಶ್ರೀಗಳನ್ನು ಬಿಜೆಪಿ ರತ್ನ ಮಾಡಲು ಚೆಡ್ಡಿಗಳು ಒಳ್ಳೇ ಸ್ಕೆಚ್ ಹಾಕಿಕೊಂಡಿದ್ದಾರೆ. ಯಡ್ಡಿಗೆ ಅಧಿಕಾರ ಸಿಗಬೇಕಿತ್ತು, ಸಿಗಲಿಲ್ಲ ಎಂಬುದು ಪೂರ್ತಿ ಅಧಿಕಾರ ರಾಜಕಾರಣಕ್ಕೆ ಸಂಬಂಧಿಸಿರುವ ವಿಚಾರ.

ಇದರಲ್ಲಿ ಸಿದ್ಧಗಂಗಾ ಸ್ವಾಮಿಗಳಿಗೇನು ಕೆಲಸ?

ಬಿಜೆಪಿಗಳ ಅನ್ನಾ ರಸಂ ತಲೆ ಇಲ್ಲೂ ಹೇಗೆ ಕೆಲಸ ಮಾಡಿದೆ ನೋಡಿ!

ಅವರು ಬ್ರಾಹ್ಮಣ ಪೇಜಾವರ ಸ್ವಾಮಿಯ ಆಶೀರ್ವಾದ ಕೇಳುವುದಿಲ್ಲ, ವೀರೇಂದ್ರ ಹೆಗಡೆ ಹೇಳಿಕೆ ಬಯಸುವುದಿಲ್ಲ. ಆದರೆ ಅವರ ಚಿಲ್ಲರೆ ಹೊಲಸು ರಾಜಕೀಯಕ್ಕೆ ಲಿಂಗಾಯತ ಮಠಾಧೀಶರನ್ನು ಸಿಕ್ಕಿಸುತ್ತಿದ್ದಾರೆ. ಹಾಗೆ ನೋಡಿದರೆ ಈ ವಿವಾದದಲ್ಲಿ ಸುತ್ತೂರು ಸ್ವಾಮಿಗಳಾಗಲೀ ಮುರ್ಗದ ಮುರುಘಾಮಠದ ಶರಣರಾಗಲಿ, ಸಿರಿಗೆರೆ, ಗದಗಿನ ತೋಂಟದಾರ್ಯರು [illegible] ಗುಲ್ಬರ್ಗಾದ ಶರಣಬಸಪ್ಪ ಅಪ್ಪಾ... ಹೀಗೆ ಯಾರೂ ತಲೆ ಹಾಕಿಲ್ಲ. ಹೀಗೆ ಯಾರಿಗೂ ಬೇಕಾಗದ ಉಸಾಬರಿ ಸಿದ್ಧಗಂಗಾ ಸ್ವಾಮಿಗಳಿಗೇಕೆ ಬೇಕಿತ್ತು ಎಂಬುದೇ ಮಿಲಿಯನ್ ಡಾಲರ್ ಪ್ರಶ್ನೆ?

ತಿರುಪತಿಯಲ್ಲಿ ಕ್ರೈಸ್ತರಿಂದ ಮತಾಂತರ ಆಗುತ್ತಿದೆ ಎಂದು ಗೋಳಾಡುತ್ತಾ ಅಲ್ಲಿಗೇ [illegible] ರಾಮಸೇತು ಉಳಿಸಲು ಊರೂರು ಸುತ್ತುವ ಪೇಜಾವರ ಸ್ವಾಮಿ ಯಡ್ಡಿ ಬದಲಾಗಿ ಬ್ರಾಹ್ಮಣ ನಾಯಕನೊಬ್ಬನಿಗೆ ಇದೇ ರೀತಿ ಅನ್ಯಾಯವಾಗಿದ್ದರೆ ಸುಮ್ಮನಿರುತ್ತಿದ್ದರಲ್ಲ [illegible] ಸಿದ್ಧಗಂಗಾ ಸ್ವಾಮಿಗಳಿಗೆ ಯಾರಾದರೂ ವಿವರಿಸಿದರೆ ಒಳಿತೇನೋ?

ಕಾಂಗ್ರೆಸ್ ಖಲ್ಲಾಸ್:
ಇದು ಪೋಸ್ಟ್‌ಮಾರ್ಟಂ ರಿಪೋರ್ಟ್

ಕೊಪ್ಪಳ ಜಿಲ್ಲೆಯಲ್ಲಿ ಕಾಂಗ್ರೆಸ್ ಗುಟ್ಟದ್ದು ಹೋಗಿದೆ. ಕೊಪ್ಪಳದ ಶಾಸಕ ಹಿಟ್ನಾಳನ ನಿಷ್ಕ್ರಿಯತೆಗೆ ಮತದಾರರು ಕಪಾಳಕ್ಕೆ ಬಗಿದು ವಿರೋಧ ಪಕ್ಷದ ಸೀಟಿನಲ್ಲಿ ಕೂಡಿಸಿದ್ದಾರೆ. ಗಂಗಾವತಿಯಲ್ಲಿ ಬಿಜೆಪಿಯವರೇ ತೌಡಾರುವಂತೆ ಕೋಮುವಾದಿಗಳಾಗಿರುವ ಕಾಂಗ್ರೆಸ್‌ಗೆ ಬರೀ 2 ಸೀಟು ಕೊಟ್ಟಿದ್ದಕ್ಕೆ ಕರೆಂಟ್ ಹೊಡೆಸಿಕೊಂಡ ಕಾಗೆಯಂತಾಗಿದೆ. ಯಲಬುರ್ಗಾದಲ್ಲೂ ರಾಯರೆಡ್ಡಿಯ ಅಹಂಕಾರಕ್ಕೆ ತಕ್ಕ ಶಾಸ್ತಿಯಾಗಿದ್ದರೂ ಕುಟುಕು ಜೀವವಿದೆ. ಕುಷ್ಟಗಿಯಲ್ಲಿ ಮಾತ್ರ ನೀವು ಮಲಗಿಕೊಳ್ಳಿ ಅಂತ ಕಾಂಗ್ರೆಸ್ಸನ್ನು ಮತ್ತೊಮ್ಮೆ ಮಲಗಿಸಲಾಗಿದೆ. ಇನ್ನು ಐದು ವರ್ಷ ಅವರಿಗೆ ನಿದ್ದೆಯೋ ನಿದ್ದೆ.


ಇಕ್ಬಾಲ್ ಅನ್ಸಾರಿ

ಒಂದಂತೂ ನಿಜ. ಕೊಪ್ಪಳ ಜಿಲ್ಲಾ ಕಾಂಗ್ರೆಸ್‌ನಲ್ಲಿರುವ ಈಗಿನ ಮೂಲೆಗಳನ್ನೇ ಮುಂದಿಟ್ಟುಕೊಂಡು ಮತ್ತೆ ಬಂದರೆ ಮೂರು ಮುಕ್ಕಾಲು ಓಟು ಗಿಟ್ಟುವುದಿಲ್ಲ ಹುಷಾರ್ ಅಂತ ಮತದಾರ ಎಚ್ಚರಿಕೆ ನೀಡಿದ್ದಾನೆ. ಇದನ್ನು ಕೆಪಿಸಿಸಿ ಗಮನಿಸಬೇಕು.


ಕೊಪ್ಪಳದಲ್ಲಿ ಶಾಸಕ ಹಿಟ್ನಾಳನ ಫೇಸ್‌ಕಟ್ ಬರ್ತಾಬರ್ತಾ ವ್ಯಾಲ್ಯೂ ಕಳಕೋತಿದೆ ಅನ್ನಲು ನಗರಸಭೆ ಚುನಾವಣೆ ಫಲಿತಾಂಶವೇ ಸಾಕ್ಷಿ. ಒಂದಿನವೂ ನೆಟ್ಟಗೆ ಕುಡಿಯುವ ನೀರು ಪೂರೈಸದ ನಗರಸಭೆಯಲ್ಲಿ ಕಾಂಗ್ರೆಸ್ಸಿನದೇ ದರ್ಬಾರಿತ್ತು. ಆದರೆ ಜನವಿರೋಧಿ ಹಿಟ್ನಾಳನ ವಿರುದ್ಧವಿದ್ದ ಅಲೆಯನ್ನು ಜೆಡಿಎಸ್‌ನ ಕರಡಿ ಸಂಗಣ್ಣ ಸರಿಯಾಗಿ ಕ್ಯಾಚ್ ಮಾಡಿದಿದ್ದರಿಂದಲೇ ಅದೀಗ ಅಧಿಕಾರದ ಹೊಸ್ತಿಲಲ್ಲಿ ನಿಂತಿದೆ. ಎಲೆಕ್ಷನ್ ಮುಂಚೆ ಚೀನಾಕ್ಕೆ ಹೋಗಿದ್ದ ಹಿಟ್ನಾಳ, ಅಲ್ಲಿ ಅದೇನು ಹಾವು ಚೇಳು ತಿಂದನೋ ಬಂದವನಿಗೆ ಪಕ್ಷದ ನಿಷ್ಠರು ಟಿಕೆಟ್ ಕೇಳಿದರೆ ಹಾವು ಚೇಳು ಕಡಿದಂತಾಡತೊಡಗಿದ. ಅದರ ಪರಿಣಾಮ? ಬರೀ 11 ಸ್ಥಾನ ಪಡೆದು ಮೂರೂ ಮುಚ್ಕೊಂಡು ಇರಬೇಕಾಗಿದೆ ಜೊತೆಗೆ ವಾರ್ಡ್ 4,7,16,18,20,30, ರಲ್ಲಿ ತನ್ನ ಅಹಂಕಾರದಿಂದಲೇ ಕಾಂಗ್ರೆಸ್ ಕೈತಪ್ಪುವಂತೆ ಮಾಡಿಕೊಂಡಿದ್ದಾನೆ. ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಮರ್ದಾನಲಿಯ ವಾರ್ಡಿನಲ್ಲಿ ಕಾಂಗ್ರೆಸ್ ಅರ್ಧದಷ್ಟು ಓಟು ಕಡಿಮೆ ಪಡೆದು ಸೋತುಬಿಟ್ಟದೆ. ಕಣ್ಣುಮುಚ್ಚಿ ಗೆಲ್ಲುತ್ತಿದ್ದ ಸಾವಿತ್ರಿ ಮುಜುಂದಾರ್‌ಗೆ ಟಿಕೆಟ್ ನಿರಾಕರಿಸಿ ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ಹೋಗಿದ್ದರೆ ಅದರ ಲಾಭ ಜೆಡಿಎಸ್ ಹೊಡಕೊಂಡಿದೆ. ವಾರ್ಡ್ ನಂ 23 ರಲ್ಲಂತೂ ಶಾಸಕನೇ ಟಿಕೆಟ್ ಕೊಟ್ಟ ಅಭ್ಯರ್ಥಿ ಪಡೆದ ಓಟುಗಳು ಬರೀ 33. ಹರ್ಷ ಹೊಟೇಲ್‌ನ ಮೂರನೇ ಅಂತಸ್ತಿನ ಎಸಿ ರೂಂನಲ್ಲಿ ಕುಳಿತು ಟಿಕೆಟ್ ಫೈನಲ್ ಮಾಡಿದರೆ ಇನ್ನೇನಾಗುತ್ತೆ? ಕಾಂಗ್ರೆಸ್‌ನ ಮರಿ ಲೀಡರ್‌ಗಳಿಗೆ ಕಾಡುತ್ತಿರುವ ಪ್ರಶ್ನೆ ಏನೆಂದರೆ ಈ ಶಾಸಕ ಹಿಟ್ನಾಳ ಪದೇಪದೇ 25ನೇ ವಾರ್ಡಿಗೆ ಪ್ರಚಾರಕ್ಕೆ ಯಾಕೆ ಹೋದ? ಉಳಿದ ವಾರ್ಡನಲ್ಲಿ ಯಾಕೆ ಬರಲಿಲ್ಲ ಅಂತ. ಶಾಸಕ–ಸಂಸದರು ಪ್ರಚಾರಕ್ಕೆ ಬಂದಿದ್ದ 30ನೇ ವಾರ್ಡಿನಲ್ಲಿ ಕಾಂಗ್ರೆಸ್ ಗೋತಾ.

[illegible]

ಇನ್ನು ಕಳೆದ 3 ವರ್ಷದಿಂದ ಚೆಡ್ಡಿತೊಟ್ಟಿರುವ ಕಾಂಗ್ರೆಸ್ಸಿಗರು ಗಂಗಾವತಿಗೆ ಎರಡು ಬಾರಿ ಬೆಂಕಿ ಇಟ್ಟಿದ್ದಾರೆ. ಒಮ್ಮೆ ಅಯ್ಯಪ್ಪ–ಇನ್ನೊಮ್ಮೆ ಗಣಪ. ಇವರ ಗುರಿ ಕೇವಲ ಅನ್ಸಾರಿ. ಮಂತ್ರಿ ಇಕ್ಬಾಲ್‌ನನ್ನು ಮಣಿಸುವುದಿದ್ದರೆ ರಾಜಕೀಯವಾಗಿ ಬಗ್ಗು ಬಡಿಯಲಿ. ಅದು ಬಿಟ್ಟು ಊರಿಗೆಲ್ಲ ಬೆಂಕಿ ಹಚ್ಚಿದರೆ? ಇದನ್ನು ಅರಿತುಕೊಂಡ ಗಂಗಾವತಿಯ ಪ್ರಜ್ಞಾವಂತ ಮತದಾರರು ಕಳೆದ ಬಾರಿ ನಗರಸಭೆಯಲ್ಲಿ 21 ಸ್ಥಾನ ಪಡೆದಿದ್ದ ಕಾಂಗ್ರೆಸ್‌ಗೆ ಈ ಬಾರಿ ಕೇವಲ 2 ಸ್ಥಾನ ನೀಡಿದ್ದಾರೆ. ಮಾಜಿ ಸಂಸದ, ಮಾಜಿ ಸಚಿವ, ಮಾಜಿಶಾಸಕ, ಎಂಎಲ್‌ಸಿ, ಡಿಸಿಸಿ ಅಧ್ಯಕ್ಷರು ಇರುವ ಗಂಗಾವತಿ ಕಾಂಗ್ರೆಸ್‌ಗೆ ಬರೀ 2 ಸ್ಥಾನ ಅಂದರೆ ಕಾಂಗ್ರೆಸ್‌ನ ಅಧೋಗತಿ ಎಂತ ಹದು ವಿಚಾರ ಮಾಡಿ. ಒಂದೊಂದು ವಾರ್ಡಿನಲ್ಲಂತೂ ಕಾಂಗ್ರೆಸ್ಸಿಗೆ ಬಂದಿರುವ ಮತಗಳು 72,28,43,19.....


ಬಸವರಾಜ್ ಹಿಟ್ನಾಳ್

ಸಚಿವ ಇಕ್ಬಾಲ್ ಅನ್ಸಾರಿ ಕೇವಲ ಗಂಗಾವತಿಗೇ 50 ಕೋಟಿಗೂ ಹೆಚ್ಚು ಹಣ ತಂದು ಮಾಡಿಸಿದ ಕೆಲಸಗಳು ಅನ್ಸಾರಿ ಕೈ ಹಿಡಿದಿದೆ. ಜೊತೆಗೆ ಕಾಂಗ್ರೆಸ್‌ನ ಡೊಂಗಿ ಜಾತ್ಯತೀತತೆಯನ್ನು ಬಯಲುಮಾಡುತ್ತ, ಅದನ್ನೇ ಬಂಡವಾಳ ಮಾಡಿಕೊಂಡು 31 ಸ್ಥಾನಗಳಲ್ಲಿ 22 ಸ್ಥಾನ ಪಡಕೊಂಡು ಬಿಟ್ಟಿದ್ದಾನೆ. ಅನ್ಸಾರಿಯ ಬುಡಕ್ಕೆ ನೀರು ತರಬೇಕೆಂದಿದ್ದ ಲಲಿತಾರಾಣಿಗೆ ಅದು ತಮ್ಮ ಬುಡಕ್ಕೆ ಬರುತ್ತಿದೆ ಎಂದರಿತು, ಕಾಂಗ್ರೆಸ್‌ಗೆ ಓಟು ಹಾಕದಿದ್ದರೂ ಪರವಾಗಿಲ್ಲ ಬಿಜೆಪಿಗೆ ಹಾಕಿ ಅಂತ ಸ್ವತಃ ಲಲಿತಾರಾಣಿ ಪ್ರಚಾರ ಮಾಡಿದ್ದಕ್ಕೆ 1 ಇದ್ದ ಬಿಜೆಪಿ ಈಗ 6 ಆಗಿದೆ. 2004 ರ ಚುನಾವಣೆಯಲ್ಲೂ ಲಲಿತಾ ರಾಣಿ ಹೀಗೆ ಪ್ರಚಾರ ಮಾಡಿ ತನ್ನ ಗಂಡನ ಸೋಲಿಗೆ ಕಾರಣವಾಗಿದ್ದಳು. ಇಷ್ಟರಲ್ಲಿಯೇ ಕೆಪಿಸಿಸಿಯಿಂದ ಲಲಿತಾರಾಣಿಗೆ ಕ್ಲಾಸ್ ತಗೊಳ್ಳುವ ಎಲ್ಲ ಲಕ್ಷಣಗಳು ಇವೆ. ಸದ್ಯಕ್ಕೆ ಗಂಗಾವತಿ ಕಾಂಗ್ರೆಸ್ ಕರೆಂಟ್ ಹೊಡೆಸಿಕೊಂಡು ಫುಟ್‌ಪಾತಲ್ಲಿ ಬಿದ್ದಿರುವ ಕಾಗೆಯಂತಾಗಿದೆ.


ರಾಯರೆಡ್ಡಿ

ಇನ್ನು ಯಲಬುರ್ಗಾದಲ್ಲಿ ನಾನು ರಾಯರೆಡ್ಡಿ ನನಗ್ಯಾರು ಅಡ್ಡಿ ಅಂತ ಅಹಂಕಾರದಿಂದ ಮೆರೆಯುತ್ತ ಇಲ್ಲಸಲ್ಲದ ರಗಳೆ ಮಾಡಿಕೊಂಡು, ಸಾರ್ವಜನಿಕ ಬದುಕಿನಲ್ಲಿ ಅಪಹಾಸ್ಯದ ವಸ್ತುವಾಗಿರುವ ರಾಯರೆಡ್ಡಿಯ ಕಾಂಗ್ರೆಸ್‌ಗೆ ಬಿಜೆಪಿ–ಜೆಡಿಎಸ್ ಜಂಟಿಯಾಗಿ ಮಣಿಸಿವೆ. ಬಿಜೆಪಿ–ಜೆಡಿಎಸ್ 6 ಸ್ಥಾನ, ಕಾಂಗ್ರೆಸ್ 5 ಸ್ಥಾನ, ಶಾಸಕ ರಾಯರೆಡ್ಡಿ ಸಂಸದ ವಿರುಪಾಕ್ಷಪ್ಪನ ಮತದಿಂದ ಅಧಿಕಾರಕ್ಕೇರುವ ಗುಟುಕ್ ಆಸೆ ಕಾಂಗ್ರೆಸ್‌ಗಿದೆ. ಒಂದಂತೂ ಸ್ಪಷ್ಟ; ಯಲಬುರ್ಗಾದಲ್ಲಿ ಬಂದಿರುವ ಫಲಿತಾಂಶಕ್ಕೆ ರಾಯರೆಡ್ಡಿಯೇ ನೇರ ಹೊಣೆ.

ಕುಷ್ಟಗಿ ಕಾಂಗ್ರೆಸ್ ಹಳೆ ರಗ್ಗು ಹೊದ್ದು ಮಲಗಿ ನಾಲ್ಕು ವರ್ಷವಾಯಿತು. ಮೊನ್ನೆ ಚುನಾವಣೆ ಸಂದರ್ಭದಲ್ಲಿ ಆಕಳಿಸುತ್ತ ಎದ್ದು ಅಡ್ಡಾಡಿದ ಕಾಂಗ್ರೆಸ್ಸಿಗರಿಗೆ ನೀವು ಮಲಗಲು ಲಾಯಕ್ಕು, ಮಲಗಿ ಮಲಗಿ ಅಂತ ಜೋಗುಳ ಹಾಡಿ ಮಲಗಿಸಿ ಬಿಟ್ಟಿದ್ದಾನೆ– ಪರಿಣಾಮ 23 ಸ್ಥಾನದಲ್ಲಿ ಬರೀ 3 ಸ್ಥಾನ ಕಾಂಗ್ರೆಸ್‌ಗೆ. ಶಾಸಕ ಮತ್ತು ಕುರಿ ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೊಡ್ಡನಗೌಡ ಪಾಟೀಲ್ ಏನೇ ಕಸರತ್ತು ಮಾಡಿದರೂ ಕುಷ್ಟಗಿ ಪುರಸಭೆ ಒಲಿಯಲಿಲ್ಲ, ಆದರೆ 2005 ರಲ್ಲಿ ಕುಷ್ಟಗಿಯಲ್ಲಿ ನಡೆದ ಗಲಭೆಯ ವಿಷಯವನ್ನೇ ಮುಂದು ಮಾಡಿ ಚುನಾವಣೆ ಎದುರಿಸಿದ ಜೆಡಿಎಸ್ 16 ಸ್ಥಾನ ಪಡೆದು ಬಹುಮತ ಹೊಂದಿದೆ. ಆದರೆ ಕುಷ್ಟಗಿ ಉದ್ಧಾರವಾಗುವ ಯಾವ ಲಕ್ಷಣಗಳೂ ಇಲ್ಲ. ಏಕೆಂದರೆ ಈ ಹಿಂದೆ ಆನ್‌ಲೈನ್ ಲಾಟರಿ ಆಡಿಸಿ, ಮಟಕಾ ಆಡಿಸಿ ಜನರನ್ನು ಹಾಳು ಮಾಡಿದವರನ್ನು, ಜನಹಿತ ಮರೆತವರನ್ನು ಚಾರ್‌ಸೌಬೀಸ್‌ಗಳಿಗೆ ಕೆ.ಶರಣಪ್ಪ ಟಿಕೆಟ್ ಕೊಟ್ಟು ಗೆಲ್ಲಿಸಿಕೊಂಡಿದ್ದಾನೆ. ಇದರರ್ಥ ಇಷ್ಟೇ ಸಣ್ಣ ಪ್ರಮಾಣದ ದಾದಾಗಿರಿ ಗೂಂಡಾಗಿರಿ ಇನ್ನು ಕುಷ್ಟಗಿಯಲ್ಲಿ ತಲೆ ಎತ್ತುವುದು ಮಾತ್ರ ನಿಜ. ಕೆ. ಶರಣಪ್ಪನಿಗೆ ಮಣೆಹಾಕಿದ ತಪ್ಪಿಗೆ ಅಷ್ಟಾದರೂ ಅನುಭವಿಸಲೇ ಬೇಕು ಕುಷ್ಟಗಿ.

ಜಿಲ್ಲೆಯಲ್ಲಿ ಬಹುತೇಕ ಹೊಸಬರೇ ಗೆದ್ದಿದ್ದಾರೆ. ಅವರಲ್ಲಿ ಲುಚ್ಚಾಗಳು– ಲಫಂಗರೂ ಇದ್ದಾರೆ. ಏನನ್ನಾದರೂ ಮಾಡಬೇಕೆನ್ನುವ ಜಾಕೀರ್ ಕಿಲ್ಲೆದಾರ್, ಅಮ್ಜದ್ ಪಟೇಲ್. ಪಾಪಾ ಮಾನವಿ ಸಿದ್ದು ಮ್ಯಾಗೇರಿಯಂತಹ ಯುವಕರು, ಮುಂಡರಗಿ ಗವಿಸಿದ್ದಪ್ಪ, ಈರಣ್ಣ ಹಂಚಿನಾಳನಂತಹ ಹಿರಿಯರೂ ಗೆದ್ದಿದ್ದಾರೆ. ವಿಷಾದವೆಂದರೆ ಗೆಲ್ಲಲೇಬೇಕಿದ್ದ ಸಾವಿತ್ರಿ ಮುಜುಂದಾರ್, ಸತೀಶ್, ಶೋಭಾಬಾಯಿ, ರಫೀಕ್ ಮನಿಯಾರ, ರಾಮಣ್ಣ ಹದ್ದಿನ್‌ನಂತಹವರು ಸೋತಿದ್ದಾರೆ. ಸೋಲಬೇಕಿದ್ದ ಬಜಾರಮಠ ಸೋತಿದ್ದಾನೆ. ಸುಮ್ಮನೆ ವಿರೋಧ ಪಕ್ಷದಲ್ಲಿ ಕುಳಿತುಕೊಳ್ಳಬೇಕಾಗಿರುವ ಕಾಂಗ್ರೆಸ್‌ಗೆ ರಾಜ್ಯದಲ್ಲಿ ಮತ್ತೆ ಜೆಡಿಎಸ್–ಕಾಂಗ್ರೆಸ್ ಕೂಡಿಕೆಯಾದರೆ ಅದೂ ನಮಗೂ ಲಾಭವಾಗಿ ಅಧಿಕಾರ ದಕ್ಕುತ್ತೆ ಅನ್ನೋ ಅನೈತಿಕ ಹಪಾಹಪಿ..


–ವರದಿಗಾರ


ಕೊಳ್ಳೇಗಾಲದ ಕೇಬಲ್ ಕಳ್ಳ ರೇಣುಕೇಶ್

ಲೈಸೆನ್ಸ್ ಇಲ್ಲದೆ ಕೇಬಲ್ ಟಿವಿ ನೆಟ್‌ವರ್ಕ್ ನಡೆಸಬಹುದಾ? ಗ್ರಾಹಕರಿಂದ ವಸೂಲಿ ಮಾಡಿದ ಶುಲ್ಕಕ್ಕೆ ಲೆಕ್ಕವಿಡದೆ, ತೆರಿಗೆಯನ್ನೂ ಕಟ್ಟದೆ ಸರ್ಕಾರಕ್ಕೇ ಉಂಡೆ ನಾಮ ತಿಕ್ಕುವ ಚೋರ ವಿದ್ಯಾ ಪಾರಂಗತ ರೇಣುಕೇಶನ ಪುರಾಣ ಇದು.

ಕೊಳ್ಳೇಗಾಲ ಟೌನಿನಲ್ಲಿ ಇವನದೊಂದು ಕೆಸಿಎನ್ ಕೇಬಲ್ ಸಂಸ್ಥೆ ಇದೆ. ಜೊತೆಗೆ ಯಾರೂ ಆಯ್ಕೆ ಮಾಡಿರದಿದ್ದರೂ ತನ್ನನ್ನು ತಾನೇ ಚಾಮರಾಜನಗರ ಜಿಲ್ಲಾ ಕೇಬಲ್ ಆಪರೇಟರ್ ಸಂಘದ ಅಧ್ಯಕ್ಷನೆಂದು ಹೇಳಿಕೊಂಡು ತಿರುಗುತ್ತಾನೆ.

ಕೊಳ್ಳೇಗಾಲದ ಡಾ. ರಾಜ್ ರಸ್ತೆಯಲ್ಲಿರುವ ಕೆಸಿಎನ್ ಕೇಬಲ್ ಎಂಬುದು ವಾಸ್ತವವಾಗಿ ಈ ರೇಣುಕೇಶನ ರಮ್ಯ ಕೇಬಲ್ ನೆಟ್‌ವರ್ಕ್ ಹಾಗೂ ಇನ್ನಿತರ ಕನ್ನಿಕಾ ಕೇಬಲ್, ನ್ಯೂ ಕಾವೇರಿ, ಚೌಡೇಶ್ವರಿ ಸೇರಿದಂತೆ ಹಲವೆಂಟು ಕೇಬಲ್ ಆಪರೇಟರುಗಳು ಸೇರಿ ಮಾಡಿಕೊಂಡಿರುವ ಒಂದು ಜಂಟಿ ಮಾಲೀಕತ್ವದ ಕೇಬಲ್ ನೆಟ್‌ವರ್ಕ್ ಆಗಿದೆ. ಇದರಲ್ಲಿ ರೇಣುಕೇಶನ ಜೊತೆಗೆ ಮೋಹನ್ ಬಾಬು, ಮೊಹಮದ್ ಆಜಾದ್, ವಿ. ಲೋಕೇಶ್ ಮುಂತಾದವರಿದ್ದಾರೆ. ಈ ಮೊದಲು ಪಾಲುದಾರಿಕೆಯಿದ್ದ ಮಂಜುನಾಥ ನಗರದ ಚೌಡೇಶ್ವರಿ ಕೇಬಲ್ ನೆಟ್‌ವರ್ಕ್‌ನ ಮಂಜುಳಾ ಪ್ರಕಾಶ್ ಈಗ ರೇಣುಕೇಶನ ಮೇಲೆ ಜಗಳ ಕಾದು ಪಾಲುದಾರಿಕೆ ಬಗ್ಗೆ ಕೋರ್ಟ್ ಕೇಸನ್ನು ನಡೆಸುತ್ತಿದ್ದಾರೆ. ಇವರ ಜಗಳದ ವಿಚಾರ ಏನೇ ಇರಲಿ, ಈ ಕೊಳ್ಳೇಗಾಲ ಕೇಬಲ್ ನೆಟ್‌ವರ್ಕ್ ಅರ್ಥಾತ್ ಕೆಸಿಎನ್ ಸಂಸ್ಥೆಗೆ ಅಸಲಿಗೆ ಪುರಸಭೆಯವರಾಗಲಿ ಅಥವಾ ಬೇರೆ ಇನ್ನಿತರ ಯಾವುದೇ ಸರ್ಕಾರಿ ಕಚೇರಿಯಿಂದ ಲೈಸೆನ್ಸೇ ಕೊಟ್ಟಿಲ್ಲ, ಆದರೂ ಈ ಭಂಡರು ಕೊಳ್ಳೇಗಾಲ ಟೌನ್ ಸೇರಿದಂತೆ ಧನಗೆರೆ; ಸರಗೂರು, ಬಾಪುನಗರ ಪಾಳ್ಯ ಮುಂತಾದೆಡೆಯೂ ಅಕ್ರಮ ಕೇಬಲ್ ಕನೆಕ್ಷನ್ ನೀಡಿ ಲಕ್ಷಾಂತರ ರೂಪಾಯಿ ಲೂಟಿ ಹೊಡೆಯುತ್ತಿದ್ದಾರೆ. ಇದರ ಲಾಭ ಹಂಚಿಕೊಳ್ಳುವಾಗ ಸರಿಯಾಗಿ ಲೆಕ್ಕ ಮಾಡಿಕೊಳ್ಳುತ್ತಾರೆ ಆದರೆ ಸರ್ಕಾರಕ್ಕೆ ಮಾತ್ರ ಬಿಡಿಕಾಸನ್ನೂ ತೆರಿಗೆಯಾಗಿ ಪಾವತಿಸುತ್ತಿಲ್ಲ ಯಾಕೆ?


ರುದ್ರಾರಾಧ್ಯ


ರೇಣುಕೇಶ್


ಈ ಪ್ರಶ್ನೆಯನ್ನು ಕೇಳಬೇಕಿರುವುದು ನಗರಸಭೆ ಕಮಿಷನರ್ ಶಿವಲಿಂಗೇಗೌಡರಿಗೆ. ಸರ್ಕಾರದ ಮನರಂಜನಾ ತೆರಿಗೆ ಕಾಯ್ದೆ ಪ್ರಕಾರ ಎಲ್ಲೇ ಆಗಲಿ ಕೇಬಲ್ ಟಿವಿ ನೆಟ್‌ವರ್ಕ್ ಸ್ಥಾಪಿಸಲು ಸರ್ಕಾರದ ಅನುಮತಿ ಬೇಕೇ ಬೇಕು. ಜೊತೆಗೆ ಪ್ರತಿ ಕೇಬಲ್ ಕನೆಕ್ಷನ್‌ಗೂ ಶುಲ್ಕ ಎಂದು ಸಂಗ್ರಹಿಸುವ ಹಣದಲ್ಲಿ ಇಂತಿಷ್ಟೆಂದು ತೆರಿಗೆಯೂ ಪಾವತಿಸಲೇಬೇಕು. ಆದರೆ ಈ ಕೆಸಿಎನ್‌ನ ರೇಣುಕೇಶನನ್ನು ಕೇಳುವವರೇ ಇಲ್ಲವಾಗಿದ್ದಾರೆ. ಹಾಲಿ ಕೊಳ್ಳೇಗಾಲ ಟೌನಿನಲ್ಲಿ 8 ಸಾವಿರಕ್ಕೂ ಹೆಚ್ಚು ಕೇಬಲ್ ಟಿವಿ ಗ್ರಾಹಕರಿದ್ದಾರೆ. ತಲಾ 100 ರಿಂದ 150 ರೂಪಾಯಿ ತನಕ ವಸೂಲಿ ಮಾಡಿದರೂ ತಿಂಗಳು ಕಮಾಯಿ ಒಂದು ಲಕ್ಷ ಮೀರುತ್ತದೆ. ಇದಕ್ಕೆ ಲೆಕ್ಕ ಕೊಡಬೇಡವೇ?


ಮಂಜುಳಾ

ಈ ರೇಣುಕೇಶ ಎಂಥ ಘಟಿಂಗನೆಂದರೆ ಕೆಸಿಎನ್‌ನ ಪಾಲುದಾರರಾಗಿದ್ದ ಮಂಜುಳಾಗೂ ಲಾಭಾಂಶ ನೀಡುವ ವಿಚಾರದಲ್ಲಿ ಚೀಟ್ ಮಾಡಲು ಯತ್ನಿಸಿ ಆಕೆ ಈಗ ಕೋರ್ಟ್ ಮೆಟ್ಟಲೇರಿದ್ದಾರೆ. ಆಕೆಯ ಪರ ರುದ್ರಾರಾಧ್ಯ ಎಂಬ ವಕೀಲರು ಕೇಸ್ ನಡೆಸುತ್ತಿದ್ದು ಅವರನ್ನು ಬೆದರಿಸಲು ರೇಣುಕೇಶ ಯತ್ನಿಸಿದ್ದ. ಇದರಿಂದ ಸಿಟ್ಟಾದ ಕೊಳ್ಳೇಗಾಲದ ವಕೀಲರೆಲ್ಲ ರೇಣುಕೇಶನ ವಿರುದ್ಧ ತಿರುಗಿ ಬಿದ್ದಿದ್ದರು. ಅದೇ ರೀತಿ ಸ್ಥಳೀಯ ರೇಷ್ಮೆ ನಗರಿ ದಿನಪತ್ರಿಕೆಯ ಡಿ. ವೆಂಕಟಾಚಲರ ವಿರುದ್ಧವೂ ಕ್ಯಾತೆ ತೆಗೆದು ಮೈಸೂರು ಲೋಕಾಯುಕ್ತರಿಗೂ ದೂರು ನೀಡಿದ್ದ. ಕೇಬಲ್ ದಂಧೆಗೆ ಕಾಲಿಡುವ ಮೊದಲು ಸಿಲ್ಕ್ ಮಾರ್ಕೆಟ್‌ನಲ್ಲಿ ಓಡಾಡಿಕೊಂಡಿದ್ದ ರೇಣುಕೇಶ ಅಲ್ಲಿನ ದಲಿತ ಕೂಲಿ ಕಾರ್ಮಿಕರಿಗೆ ಕಿರುಕುಳ ನೀಡುತ್ತಿದ್ದ. ಇವನ ಆಟಾಟೋಪ ನೋಡಿ ಅವರು ಲಾತ ಕೊಡಲು ಬಂದಾಗ ಅಲ್ಲಿಂದ ಪರಾರಿಯಾಗಿ ತನ್ನ ಸ್ವಂತ ತಮ್ಮನ ಬಾಲು ಕೇಬಲ್ ಖರೀದಿಸಿ ರಮ್ಯ ಕೇಬಲ್ ಎಂದು ಬೋರ್ಡ್ ಬದಲಾಯಿಸಿಕೊಂಡು ಸರ್ಕಾರಕ್ಕೆ ನಾಮ ಹಾಕುವ ಕೆಲಸ ಶುರು ಮಾಡಿದ. ಈ ಕೊಳ್ಳೇಗಾಲದ ಜನ ಎಂಥ ದಡ್ಡರೆಂದರೆ ಅವರ್‍ಯಾರಿಗೂ ಸ್ಟಾರ್‌ಪ್ಲಸ್‌ನ 15 ಚಾನಲ್ ಹಾಗೂ ಜೀ ಗ್ರೂಪ್‌ನ 9 ಚಾನಲ್‌ಗಳ ಕನೆಕ್ಷನ್ ಸಿಗದಿದ್ದರೂ ಅವುಗಳ ಶುಲ್ಕವನ್ನೂ ರೇಣುಕೇಶನಿಗೆ ಕೊಡುತ್ತಾ ಬಂದಿದ್ದಾರೆ.

ರೋಟರಿ ಕ್ಲಬ್, ಭಾರತ್ ವಿಕಾಸ್ ಸಂಸ್ಥೆಗಳಲ್ಲಿ ತೂರಿಕೊಂಡು ಅಲಾಲ್ ಟೋಪಿ ಕೆಲಸಗಳನ್ನು ಮಾಡಲು ಹೋಗಿ ಸಿಕ್ಕಿಬಿದ್ದು ಈಗ ಕೇಬಲ್ ದಂಧೆಗಿಳಿದಿರುವ ರೇಣುಕೇಶನಿಗೆ ಜೋಕರ್ ಶಾಸಕ ಬಾಲರಾಜ್ ಬೆಂಬಲವಿದೆ.

ಇಲ್ಲಿ ಕೇಳಬೇಕಾದ ಪ್ರಶ್ನೆ ಇಷ್ಟೆ. ಕೇಬಲ್ ಟಿವಿ ನಡೆಸಲು ಸರ್ಕಾರದ ಅನುಮತಿ ಬೇಕೇಬೇಕು. ಹಾಗಿರುವಾಗ ರೇಣುಕೇಶನ ರಮ್ಯ ಕೇಬಲ್‌ಗಾಗಲೀ ಅಥವಾ ಅವನ ನೇತೃತ್ವದ ಕೆಸಿಎನ್‌ಗಾಗಲೀ ಪುರಸಭೆ– ತಹಶೀಲ್ದಾರ್ ಆಗಲೀ ಯಾರೂ ಅನುಮತಿ ನೀಡಿಲ್ಲ.


ತಹಶೀಲ್ದಾರ್ ನಾಗರಾಜ್


ಇದು ಕಾನೂನುಬಾಹಿರ ಅಲ್ಲವೆ?

ನಗರಸಭೆ ಕಮಿಷನರ್ ಶಿವಲಿಂಗೇಗೌಡರು, ತಹಶೀಲ್ದಾರ್ ನಾಗರಾಜ್ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ನಾಗಪ್ಪನವರು ಈಗಲಾದರೂ ಸರ್ಕಾರಿ ನಿಯಮಾವಳಿಗಳ ಪ್ರಕಾರ ರೇಣುಕೇಶನ ವಂಚನೆಗಳನ್ನು ಪತ್ತೆಹಚ್ಚಿ ಕಾನೂನು ಕ್ರಮ ಜರುಗಿಸಲಿ.

–ಕೊಳ್ಳೇಗಾಲ ಚಕ್ರಮಾಳಿಗೆ

ಹಿಂದೂತ್ವದ 'ದನಪರ ರಾಜಕೀಯ'

ಉಡುಪಿ ಜಿಲ್ಲೆಯ ಬ್ರಹ್ಮಾವರ ಸಮೀಪದ ಹಲುವಳ್ಳಿ ಎಂಬ ಹಳ್ಳಿಗಾಗಲೀ, ಅಲ್ಲಿ ಬ್ರಹ್ಮಾವರ-ಹೆಬ್ರಿ ಹೆದ್ದಾರಿಯ ಪಕ್ಕದಲ್ಲಿ ಮನೆ ಮಾಡಿ, ಅದರಲ್ಲೇ ಹೋಟೆಲು ಕಂ ಅಂಗಡಿ ನಡೆಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿರುವ ಸಾಧು ಮರಕಾಲರಿಗಾಗಲೀ ಪತ್ರಿಕೆಗಳಲ್ಲಿ ಹೆಸರು ಮಾಡುವಂತಹ ಯಾವ ವಿಶೇಷ ಗುಣವೂ ಇಲ್ಲ. ಆದರೆ ಕಳೆದ ವಾರ ಸದ್ದಿ ಹಲುವಳ್ಳಿಯ ಸಾಧು ಮರಕಾಲರ ಬಗ್ಗೆ ಜಿಲ್ಲೆಯ ಪತ್ರಿಕೆಗಳಲ್ಲಿ ಹಲವು ಕಾಲಮ್ಮುಗಳ ವರದಿ ಪ್ರಕಟವಾಯಿತು. ತಾ. 30.9.07 ರ ವಿಜಯ ಕರ್ನಾಟಕ, ಸಾಧು ಮರಕಾಲರ ಫೋಟೋ ಹಾಕಿ, ಮೇಯಲು ಬಿಟ್ಟ ದನಕರುಗಳನ್ನು ಅವರು ಕಸಾಯಿಖಾನೆಗೆ ಸಾಗಿಸಲು ಅಕ್ರಮ ಸಾಗಾಟ ಮಾಡುತ್ತಿದ್ದರು ಎಂದು ವರದಿ ಮಾಡಿತು (ಪುಟ 2).



ಆರೋಪಿ ಸಾಧು ಮರಕಾಲ

ಅದೇ ದಿನದ ಉದಯವಾಣಿ ಸಾಧು ಮರಕಾಲರ ಮೇಲೆ ನೇರವಾಗಿ ದನಕರುಗಳ ಕಳ್ಳತನದ ಆರೋಪ ಹೊರಿಸಿ, ಅವರು ತನ್ನ ಮನೆಯ ಹತ್ತಿರವಿರುವ ಆನಂದ ಶೆಟ್ಟಿ ಎಂಬುವರಿಗೆ "ಸೇರಿದ ಹಾಡಿ (ಕಾಡು)ಯಲ್ಲಿ ದನಗಳನ್ನು ಕಡಿದು ಮಾಂಸ ಮಾಡಿ ಮಾರಾಟ ಮಾಡುತ್ತಿದ್ದರು" ಎಂದು ವರದಿ ಮಾಡಿತು (ಪುಟ. 10). ಸಾಧು ಮರಕಾಲ ಮತ್ತು ಗೋಮಾಂಸದ ದಂಧೆಯಲ್ಲಿ ಅವರ ಜೊತೆ ಪಾಲುದಾರ ರೆನ್ನಲಾದ ಬಾಬಣ್ಣ ಶೆಟ್ಟಿ ಎಂಬವರು ಹಾಗೂ ಹಾಡಿಯ ಮಾಲೀಕ ಆನಂದ ಶೆಟ್ಟಿ-ಮೂವರೂ ಹಿಂದೂಗಳು. ಸಾಧು ಮರಕಾಲ ನಮ್ಮೊಡನೆ ಮಾತಾಡುತ್ತ ಇದನ್ನು ಒತ್ತಿ ಹೇಳಿದರು. ಆದರೆ ಜಾತಿಯ ಶ್ರೇಣಿಯಲ್ಲಿ ಬಾಬಣ್ಣ ಮತ್ತು ಆನಂದ ಶೆಟ್ಟರದ್ದು ಮೇಲಿನ ಸ್ಥಾನವಾದರೆ ಮೊಗವೀರ (ಮೀನುಗಾರ) ಜಾತಿಗೆ ಸೇರಿದ ಸಾಧು ಮರಕಾಲ ತೀರ ಕೆಳಗಿನ ಸಾಲಿನಲ್ಲಿ ಇರುವವರು.

ಜಿಲ್ಲೆಯಲ್ಲಿ ಜಾನುವಾರು ಸಾಗಾಟದ ಸಂದರ್ಭಗಳಲ್ಲಿ "ಮಾಲು ಸಮೇತ" ಸಿಕ್ಕಿ ಬೀಳುವುದು ಸಾಮಾನ್ಯವಾಗಿ ಮುಸ್ಲಿಮರು. ಆದರೆ ಈ ಪ್ರಕರಣದಲ್ಲಿ ಹೆಸರಿಸಲಾಗಿರುವ ಮೂವರೂ ಹಿಂದೂಗಳು ಎಂಬುದು ಗಮನಾರ್ಹ. ಈ ಬಗ್ಗೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿ, ಠಾಣೆಯ ಎದುರು ಜನರನ್ನು ಸೇರಿಸಿ, ಪೊಲೀಸು ಅಧಿಕಾರಿಗಳ ಜೊತೆ ವಾಗ್ವಾದಕ್ಕೆ ಇಳಿದ ಸ್ಥಳೀಯ ಮುಖಂಡರಲ್ಲಿ ಬಿಜೆಪಿ ಮತ್ತು ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರ ಜೊತೆಗೆ, ಬ್ರಹ್ಮಾವರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮತ್ತು ಓರ್ವ ಗ್ರಾಮ ಪಂಚಾಯತ್ ಅಧ್ಯಕ್ಷರೂ ಇದ್ದರು ಎಂಬುದು ಕೂಡಾ ಗಮನಿಸಬೇಕಾದ ಸಂಗತಿ.

ಬ್ರಹ್ಮಾವರ ಪೊಲೀಸರು ಆರೋಪಿ ಸಾಧು ಮರಕಾಲರನ್ನು ತಾ. 28.9.07 ರಂದು ಬಂಧಿಸಿದ್ದರೂ ಮರುದಿನ ಈ ಮುಖಂಡರು ಆರೋಪಿಯನ್ನು ಹಲುವಳ್ಳಿಗೆ ಒಯ್ದು ಅಲ್ಲಿ ಜನರ ಮುಂದೆ ಆತ ಕ್ಷಮೆ ಯಾಚಿಸಬೇಕು ಎಂದು ಠಾಣಾಧಿಕಾರಿಯ ಎದುರು ಹಠ ಹಿಡಿದರು. ಬ್ರಹ್ಮಾವರದ ಎಸ್.ಐ. ಸುನೀಲ್‌ಕುಮಾರ್ ಕಾನೂನಿನಲ್ಲಿ ಅಂತಹ ಕ್ರಮಕ್ಕೆ ಅವಕಾಶವಿಲ್ಲ ಎಂದು ಈ ಬೇಡಿಕೆಯನ್ನು ನಿರಾಕರಿಸಿದರು. ಪೊಲೀಸು ಠಾಣೆಯಲ್ಲಿ ಹಲುವಳ್ಳಿ ಮತ್ತು ಆಸುಪಾಸಿನ ಯಾರೊಬ್ಬನೂ ಮೇಯಲು ಬಿಟ್ಟ ತನ್ನ ದನಕರುಗಳು ಕಳುವಾಗಿರುವುದರ ಬಗ್ಗೆ ದೂರು ಸಲ್ಲಿಸಿಲ್ಲ; ಮತ್ತು ಠಾಣೆಯ ಎದುರು ನೆರೆದ ಜನರಲ್ಲಿ ಯಾರೂ ಕೂಡ ಹಲುವಳ್ಳಿಯ ಆನಂದ ಶೆಟ್ಟಿಯವರ ಹಾಡಿಯಲ್ಲಿ ಸಿಕ್ಕಿದ, ಕಾಲು ಮತ್ತು ಬಾಯಿ ಕಟ್ಟಿದ 12 ದನಕರುಗಳು ತಮಗೆ ಸೇರಿದವು ಎಂದು ಸಾಬೀತುಪಡಿಸಲು ಮುಂದೆ ಬರುತ್ತಿಲ್ಲವಾದ್ದರಿಂದ, ಸಾಧು ಮರಕಾಲರ ಮೇಲೆ ಕಳ್ಳತನದ ಕೇಸು ಹಾಕಲು ಕೂಡ ಅವಕಾಶವಿಲ್ಲ ಎಂದು ಬ್ರಹ್ಮಾವರ ಎಸ್‌ಐ, ಠಾಣೆಯ ಎದುರು ಸೇರಿದವರಿಗೆ ಹೇಳಿದರು. ಪ್ರಸ್ತುತ, ಬ್ರಹ್ಮಾವರ ಪೊಲೀಸು ಠಾಣೆಯಲ್ಲಿ ಸಾಧು ಮರಕಾಲರ ಮೇಲೆ ಗೋಹತ್ಯೆಗೆ ಸಂಬಂಧಿಸಿದ ಮುನ್ಸಿಪಲ್ ಕಾಯ್ದೆಯ ಸೆಕ್ಷನ್ 8/11 ರ ಅನ್ವಯ ದೂರು ದಾಖಲಾಗಿದ್ದು, ಅದು ಇತ್ಯರ್ಥವಾಗುವ ವೇಳೆಗೆ ಸಾಧು ಮರಕಾಲರು ಹಲವು ಸಾವಿರ ರೂಪಾಯಿಗಳನ್ನು ಕಳೆದುಕೊಳ್ಳುವುದು ನಿಶ್ಚಯ.

ಸುಮಾರು 50 ರ ಹರೆಯದ ಸಾಧು ಮರಕಾಲ ಹಲುವಳ್ಳಿಯಲ್ಲೇ ಹುಟ್ಟಿ ಬೆಳೆದವರು. ಅವರ ಹೆಂಡತಿ ಸಮೀಪದ ಇನ್ನೊಂದು ಹಳ್ಳಿಯವರು. ಸಾಧು ಅವರಿಗೆ, ಮನೆ ಕಂ ಹೋಟೆಲು ಬಿಟ್ಟರೆ ಬೇರೆ ಯಾವ [illegible] ಮಕ್ಕಳು; ಹಿರಿಯವಳು ಮಗಳು; ಅವಳಿಗೆ [illegible]ಯಾಗಿದ್ದು ಅವರ ಗಂಡ [illegible] ಬಸ್ ಡ್ರೈವರ್. ಮಗಳು, ಅಳಿಯ ಹಲುವಳ್ಳಿಯ ಸಮೀಪವೇ ವಾಸವಾಗಿದ್ದಾರೆ. ಸಾಧು ಅವರ ಮಗ ಬೆಂಗಳೂರಿನಲ್ಲಿ ಒಂದು ಕ್ಯಾಂಟೀನ್‌ನಲ್ಲಿ ಕೆಲಸಕ್ಕಿದ್ದಾರಂತೆ. ಇಂತಹ ಹಿನ್ನೆಲೆಯಿರುವ ನಡುವಯಸ್ಸಿನ ಸಂಸಾರ ವಂದಿಗನೊಬ್ಬ ತನ್ನ ಹಳ್ಳಿ ಮತ್ತು ಆಸುಪಾಸಿನಲ್ಲೇ ದನಕರುಗಳನ್ನು ಕದಿಯುತ್ತಾರೆ ಮತ್ತು ಅದನ್ನು ಉದ್ಯೋಗ ಮಾಡಿಕೊಂಡಿದ್ದಾರೆ ಎಂದರೆ ಹೊಟ್ಟೆಗೆ ಅನ್ನ ತಿನ್ನುವ ಯಾರೂ ಆ ಮಾತನ್ನು ಹಿಂದೆಮುಂದೆ ವಿಚಾರಿಸದೆ ನಂಬಲಿಕ್ಕಿಲ್ಲ.

ಆದರೆ ಜಿಲ್ಲೆಯ ಪತ್ರಿಕೆಗಳು ಈ ಬಗ್ಗೆ ಆರೋಪಿಯನ್ನು ಒಂದು ಮಾತೂ ಕೇಳದೆ (ಅದನ್ನು ಸಾಧು ಅವರೇ ನಮಗೆ ದೃಢಪಡಿಸಿದ್ದಾರೆ) ಬ್ರಹ್ಮಾವರ ಪೊಲೀಸು ಠಾಣೆಯಲ್ಲೂ ಈ ಬಗ್ಗೆ ವಿಚಾರಿಸದೆ ವರದಿ ಮಾಡುತ್ತವೆ ಎಂದರೆ ಅವುಗಳ ಸುದ್ದಿಯ ಮೂಲ ಯಾವುದು ಎಂಬುದನ್ನು ಬಿಡಿಸಿ ಹೇಳಬೇಕೆ? ಸ್ವತಃ ಸಾಧು ನಮಗೆ ಹೇಳಿದ ಪ್ರಕಾರ, ಕಳೆದ ಹಲವು ವರ್ಷಗಳಿಂದ ಅವರು ತನ್ನ ಹೋಟಲು ಕಂ ಅಂಗಡಿ ಜೊತೆ ದನಕರುಗಳ ದಲ್ಲಾಲಿ ವೃತ್ತಿಯನ್ನೂ ಮೇಲು ಸಂಪಾದನೆಗಾಗಿ ನಡೆಸುತ್ತಿದ್ದಾರೆ. ಇದರಲ್ಲಿ ಅಂತಹ ವಿಶೇಷವೇನೂ ಇಲ್ಲ. ಕರಾವಳಿಯ ಪ್ರತಿ ಹಳ್ಳಿಯಲ್ಲೂ ಕನಿಷ್ಠ ಇಂತಹ ನಾಲ್ಕು-ಐದು ಹಿಂದೂ ಗೃಹಸ್ಥರಾದರೂ ಸಿಕ್ಕೇ ಸಿಗುತ್ತಾರೆ (ಇಲ್ಲಿ ಇವರನ್ನು 'ಪೈರಿನವರು' ಎಂದು ಕರೆಯುತ್ತಾರೆ). ಇವರಿಲ್ಲದೆ ಗ್ರಾಮೀಣ ಹೈನ ಉದ್ಯಮವಾಗಲೀ ಕೃಷಿಯಾಗಲೀ ನಡೆಯಲಿಕ್ಕೇ ಇಲ್ಲ. ಆದರೆ ಜಾನುವಾರು ದಲ್ಲಾಲಿಯಲ್ಲಿ ಲಾಭ ಇರುವ ಹಾಗೆ ನಷ್ಟವೂ ಇದೆ; ಕಷ್ಟನಿಷ್ಠುರಗಳಂತೂ ಇದ್ದದ್ದೇ.

ಕಳೆದ ತಿಂಗಳಷ್ಟೇ ಹಲುವಳ್ಳಿಗೆ ಸಮೀಪದ ರೈತರೊಬ್ಬರು ಸಾಧು ಮರಕಾಲರಿಗೆ "ಎಂಟು ಲೀಟರ್ ಹಾಲು ಕೊಡುತ್ತದೆ" ಎಂದು ಮಾತುಕೊಟ್ಟು 8000 ರೂಪಾಯಿಗೆ ಒಂದು ಜೆರ್ಸಿ ದನವನ್ನು ಮಾರಿದ್ದರಂತೆ. ಆದರೆ ಕರೆಯಲು ಕೂತರೆ ಆ ದನ ಸರಿಯಾಗಿ ಎರಡು ಲೀಟರ್ ಹಾಲು ಕೂಡ ಇಳಿಸಲಿಲ್ಲ. ಸಾಧು ಮರಕಾಲರು ದನವನ್ನೇನೋ ಮಾಲೀಕರಿಗೆ ವಾಪಸು ಮಾಡಿದರು; ಆದರೆ ದನ ಮಾಲೀಕರಿಗೆ ಕೊಟ್ಟ ಹಣ ವಾಪಸು ಪಡೆಯಲು ಅವರು ಬ್ರಹ್ಮಾವರ ಪೊಲೀಸು ಠಾಣೆಯ ಮೆಟ್ಟಲು ಹತ್ತಬೇಕಾಯಿತಂತೆ. ಆ ವ್ಯವಹಾರದಲ್ಲಿ ತನಗೆ ತುಂಬ ನಷ್ಟವಾಯಿತು ಎಂದು ಅವರು ನಮಗೆ ಹೇಳಿದರು. "ನಾನು ಇದೇ ಊರಿನಂವ; ಈಗ ಇಲ್ಲೇ ಹೋಟೆಲ್, ಅಂಗಡಿ ನಡೆಸಿಕೊಂಡಿರುವಂವ. ನಾನು ಊರಿನಲ್ಲಿ ದನಕರು ಕದಿಯುತ್ತೇನಾ? ಹಾಗೆ ಕದ್ದರೆ ಊರಿನವರು ಯಾರಿಗೂ ಅದು ಗೊತ್ತಾಗುವುದಿಲ್ಲವಾ? ಅವರು ನಮ್ಮನ್ನು ಸುಮ್ಮನೆ ಬಿಡುತ್ತಾರಾ?" ಎಂದು ಸಾಧು ಕೇಳಿದರು. ಅವರ ಹೆಂಡತಿ "ನಾವು ಇಷ್ಟು [illegible] ತೋರಿಸುವುದು? ಪೇಪರಿನವರು ಫೋಟೋ ಹಾಕಿ ನಮ್ಮನ್ನು ದನದ ಮಾಂಸ ಮಾರಾಟ ಮಾಡುವವರು, [illegible] ಗೋಳಾಡಿದರು. ಸಾಧು ಮರಕಾಲರ ಮಗಳಂತೂ "ನಮ್ಮವರ ಎದುರೇ ನಮಗೆ ಎಷ್ಟು ಶೇಮ್ ಆಯಿತು!" ಎಂದು ಕಣ್ಣೀರು ಹಾಕಿದರು.

ಆ ಪ್ರಕರಣಕ್ಕೆ ಸಂಬಂಧಿಸಿದ ಹಾಗೆ ಹಲುವಳ್ಳಿಯ ಹಾಡಿಯಲ್ಲಿ ಆವತ್ತು ಕಟ್ಟಿ ಹಾಕಲಾಗಿದ್ದ 14 ದನಕರುಗಳು ಎಲ್ಲಿಂದ ಬಂದವು? ಅವು ಯಾರಿಗೆ ಸೇರಿದ್ದು? ಎಂದು ನಾವು ಸಾಧುಮರಕಾಲರನ್ನು ಕೇಳಿದವು. "ನನಗೆ ಆ ವಿಷಯವೇ ಗೊತ್ತಿಲ್ಲ. ರಾತ್ರಿ ಯಾರೋ ವ್ಯಾನಿನಲ್ಲಿ ಅವನ್ನು ಸಾಗಿಸುತ್ತಿದ್ದರು. ವ್ಯಾನ್ ಕೆಟ್ಟು ಹೋಯಿತು ಎಂದು ಹೇಳಿ ಹಾಡಿಯಲ್ಲಿ ಕಟ್ಟಿದರು; ನಂತರ ವ್ಯಾನ್ ರಿಪೇರಿ ಮಾಡಿ ಪರಾರಿಯಾದರು" ಎನ್ನುವುದು ಸಾಧು ಅವರ ಹೇಳಿಕೆ. ಆ ದನಗಳನ್ನು ಅವರೇ ಕಟ್ಟಿ ಹಾಕಿರಲಿ ಅಥವಾ ಅವರು ಹೇಳಿದಂತೆ ಮೂರನೆಯವರು ಯಾರೋ ತಂದು ಕಟ್ಟಿರಲಿ, ಅವು ಕದ್ದ ಮಾಲಂತೂ ಖಂಡಿತ ಅಲ್ಲ; ಬ್ರಹ್ಮಾವರ ಪೊಲೀಸು ಠಾಣೆಯವರೂ ಅದನ್ನು ಖಾತ್ರಿ ಪಡಿಸುತ್ತಾರೆ.

ಉಡುಪಿ



ಅಕ್ರಮವಾಗಿ ಸಾಗಿಸಲಾಗುತ್ತಿದ್ದರು ಎನ್ನಲಾದ ದನಗಳು

ಸಾಧು ಮರಕಾಲ ಹೇಳುವ ಪ್ರಕಾರ, ಸ್ಥಳೀಯ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರು ತನಗೆ ತಿರುಗಿ ಬೀಳುವುದಕ್ಕೆ 'ಅಲ್ಲಿನ ಕಳೆದ ಪಂಚಾಯತ್ ಚುನಾವಣೆಯ ರಾಜಕೀಯವೇ ಕಾರಣ'. ಅದು ಕೂಡ ನಿಜವಿರಬಹುದು. ಆದರೆ ಈ ಪ್ರಕರಣದಲ್ಲಿ ಸ್ಥಳೀಯ ಮತ್ತು ತಾತ್ಕಾಲೀನ ರಾಜಕೀಯಕ್ಕಿಂತ ಹೆಚ್ಚು ವ್ಯಾಪಕವಾದ ಹಿಂದೂತ್ವದ ಸಾಂಸ್ಕೃತಿಕ ರಾಜಕೀಯ ಕೆಲಸ ಮಾಡಿರುವುದು ಸ್ಪಷ್ಟವಾಗಿದೆ. ಕಳೆದ ವರ್ಷ ಮೇ ತಿಂಗಳಲ್ಲಿ ಬ್ರಹ್ಮಾವರಕ್ಕೆ ಸಮೀಪದ ಕಾವಡಿ ಎಂಬ ಹಳ್ಳಿಯಲ್ಲಿ ಭಜರಂಗಿಗಳ ಹಲ್ಲೆಯಿಂದಾಗಿ ಬೇಸಾಯದ ಜೊತೆಗೆ ಜಾನುವಾರು ದಲ್ಲಾಳಿಯನ್ನೂ ಮಾಡುತ್ತಿದ್ದ ಪಾಟಾಳಿ ಕೃಷ್ಣಯ್ಯ ತೀರಿಕೊಂಡಿದ್ದರು. ಕೃಷ್ಣಯ್ಯ ಹಿಂದೂ; ಮೇಲಾಗಿ ಬ್ರಾಹ್ಮಣ. ಅದೂ ಸಾಲದ್ದಕ್ಕೆ ಅವರ ಹಳ್ಳಿಯ ದೇವಸ್ಥಾನದ ಪರಿಚಾರಕ. ಆದರೂ ಉಪವೃತ್ತಿಯ ಕಾರಣದಿಂದಾಗಿ ಅವರು ಪ್ರಾಣ ಕಳೆದುಕೊಂಡರು.

ಕರಾವಳಿ ಮತ್ತು ಮಲೆನಾಡಿನ ಗ್ರಾಮಗಳಲ್ಲಿ ಹಾಲು ಮತ್ತು ಕೃಷಿ ಕೆಲಸಗಳಿಗಾಗಿ ಜಾನುವಾರು ಸಾಕುವವರು, ತಮ್ಮ ಗೊಡ್ಡು ಹಾಗೂ ಮುದಿ ದನ, ಎತ್ತು, ಎಮ್ಮೆ ಹೋರಿಗಳನ್ನೂ, ನಿರುಪಯುಕ್ತ ಗಂಡು ಕರುಗಳನ್ನೂ ಅವು ಸಾಯುವವರೆಗೂ ತಮ್ಮ ಹಟ್ಟಿಯಲ್ಲೇ ಸಾಕಿಕೊಂಡಿರಬೇಕು; ಅಂತಹ ಜಾನುವಾರುಗಳನ್ನು ಕೊಳ್ಳುವವರು- ಮಾಂಸಕ್ಕಲ್ಲದೆ ಅವನ್ನು ಕೊಳ್ಳುವುದಕ್ಕೆ ಬೇರೆ ಕಾರಣವೇ ಇಲ್ಲವಾದ್ದರಿಂದ- ಯಾರೂ ತಮ್ಮ ಜಾನುವಾರುಗಳನ್ನು ಮಾರತಕ್ಕದ್ದಲ್ಲ ಎಂಬ ತಮ್ಮ ಬಲಾತ್ಕಾರದ ಒತ್ತಾಯವನ್ನು ಹಿಂದೂತ್ವವಾದಿಗಳು ಗ್ರಾಮೀಣ ರೈತಾಪಿಯ ಮೇಲೆ ಈಗ ಹೇರುತ್ತಿದ್ದಾರೆ. ಅದಕ್ಕೆ ಸರಿಯಾಗಿ ಹಿಂದೂಗಳು ತಮ್ಮ ದನಕರುಗಳನ್ನು ಮಾರುವುದಿಲ್ಲ; ಹಾಗಾಗಿ ಮಾಂಸಕ್ಕೆಂದು ಸಾಗಾಟವಾಗುವ ಜಾನುವಾರುಗಳೆಲ್ಲ ಕಳವು ಮಾಡಲ್ಪಟ್ಟವು ಎಂಬ ಮಿಥ್ಯೆಯನ್ನೂ ಈಗ ಸೃಷ್ಟಿಸಲಾಗಿದೆ.


ಕರಾವಳಿಯ ಎಲ್ಲ ದಿನಪತ್ರಿಕೆಗಳೂ ಕಳೆದ ಹಲವು ವರ್ಷಗಳಿಂದ ಹಳ್ಳಿಗಳಲ್ಲಿ ವರದಿ ಮಾಡಲು ಬೇರೆ ಏನೂ ಇಲ್ಲ ಎಂಬಂತೆ ಜಾನುವಾರು ಕಳ್ಳತನದ ವರದಿಗಳನ್ನು ತಪ್ಪದೆ ಪ್ರಕಟಿಸುತ್ತಿವೆ. "ತಿಳಿದುಬಂದಿದೆ", "ಎಂದು ಹೇಳಲಾಗಿದೆ," "ಎಂದು ಜನರು ಆಡಿಕೊಳ್ಳುತ್ತಿದ್ದಾರೆ" ಎಂಬಿತ್ಯಾದಿ ಊಹಾಪೋಹಗಳನ್ನು ಬಿಟ್ಟರೆ ಇಂತಹ ವರದಿಗಳಿಗೆ ಯಾವ ಖಚಿತ ಆಧಾರವೂ ಇರುವುದಿಲ್ಲ. ಸಂಬಂಧಿಸಿದ ಪೊಲೀಸು ಠಾಣೆಗಳು ಈ ವರದಿಗಳನ್ನು ದೃಢೀಕರಿಸುವುದೂ ಇಲ್ಲ. ಗೋ ಸಾಗಾಣಿಕೆಯ ಎಲ್ಲ ಪ್ರಕರಣಗಳೂ-ಕಾನೂನು ಆ ಕುರಿತು ಏನೇ ಹೇಳಲಿ-ಕ್ರಿಮಿನಲ್ ಅಪರಾಧ ಮಾತ್ರವಲ್ಲ ಅವು ಹಿಂದೂ ಧರ್ಮದ ಮೇಲೆ ಉದ್ದೇಶಪೂರ್ವಕವಾಗಿ ನಡೆಸಿದ ಆಕ್ರಮಣ ಎಂಬ ಹಿಂದೂತ್ವದ ನಿಲುವನ್ನೇ ಈ ವರದಿಗಳು ಗೃಹೀತವಾಗಿ ಇಟ್ಟುಕೊಂಡಿವೆ.

ನಿರುಪಯುಕ್ತ ಜಾನುವಾರುಗಳನ್ನು ಮಾರುವ ರೈತ, ತನಗೆ ಅತಿ ಅವಶ್ಯವಾದ ದುಡ್ಡಿಗಾಗಿ ಮಾರುತ್ತಾನೆ; ಅವನ್ನು ಕೊಳ್ಳುವವ, ಮಾಂಸಕ್ಕಾಗಿ ಕೊಳ್ಳುತ್ತಾನೆ; ಹಿಂದೂ ಧರ್ಮದ ಅಸ್ಮಿತೆಗೆ ಧಕ್ಕೆ ಮಾಡುವ ಉದ್ದೇಶ ರೈತನಿಗೂ ಇಲ್ಲ; ದಲ್ಲಾಳಿಗೂ ಇಲ್ಲ; ಜಾನುವಾರು ಸಾಗಿಸುವವನಿಗೂ ಇಲ್ಲ. ಕರಾವಳಿ ಮತ್ತು ಮಲೆನಾಡಿನ ಗ್ರಾಮೀಣ ಬದುಕಿನ ಅತ್ಯಂತ ಸರಳವೂ, ಪ್ರಾಥಮಿಕವೂ ಆದ ಈ ಸತ್ಯವನ್ನು ಈಗ ಹಿಂದೂತ್ವವಾದಿಗಳ ಮತ್ತು ಮಠಾಧಿಪತಿಗಳ ಜೊತೆ ಸೇರಿ ಪತ್ರಿಕೆಗಳೂ ನಿರಾಕರಿಸುತ್ತಿವೆ. ಇದು ಎಷ್ಟು ಹಾಸ್ಯಾಸ್ಪದವೋ ಅಷ್ಟೇ ಅಮಾನುಷ ಎನ್ನುವುದಕ್ಕೆ ಹಲುವಳ್ಳಿಯ ಈ ಪ್ರಕರಣ ಕೇವಲ ಇತ್ತೀಚೆಗಿನ ಉದಾಹರಣೆ. ಹಾಗೆಯೇ ಹಿಂದೂತ್ವ ತನ್ನ ಸಿದ್ಧಾಂತವನ್ನು ಹಳ್ಳಿಗಳಿಗೆ ಒಯ್ಯುತ್ತಿರುವುದಕ್ಕೂ ಇದೊಂದು ಉದಾಹರಣೆ.

-ಜಿ. ರಾಜಶೇಖರ,
ಕೆ. ಫಣಿರಾಜ್

ಕಾಯುವ, ಕುದಿಯುವ ಶಬರಿ!

'ಶಬರಿ' ಕಾದಂಬರಿ ಬರಗೂರು ರಾಮಚಂದ್ರಪ್ಪನವರ ಒಂದು ಸೃಜನಶೀಲ ಪ್ರಯತ್ನ. ಬಂಡಾಯ ಸಾಹಿತ್ಯ ಸಂಘಟನೆಯ ಸಂಸ್ಥಾಪಕರಾದ ಮತ್ತು ಅದರ ಪ್ರಮುಖ ಸಿದ್ಧಾಂತಿಯೂ ಆಗಿದ್ದ ಬರಗೂರರು ಸಾಹಿತ್ಯ ಮತ್ತಿತರ ಸೃಜನಶೀಲ ಪ್ರಕಾರಗಳಲ್ಲಿ ದುಡಿಯುವ ಜನತೆಯ ಮತ್ತು ಅಲಕ್ಷಿತ ಸಂವೇದನೆಗಳ ಪ್ರಾತಿನಿಧ್ಯವನ್ನೂ ಆಗ್ರಹಿಸುತ್ತಾ ಬಂದವರು. ಹಾಗೆಯೇ ಆ ರೀತಿಯ ಸಂವೇದನೆಗಳ ಸೃಜನಶೀಲ ಅಭಿವ್ಯಕ್ತಿಯನ್ನು ಮೌಲ್ಯಮಾಪನ ಮಾಡಲು ಶಿಷ್ಟ ಜಗತ್ತು ಸೃಷ್ಟಿಸಿರುವ ಮಾನದಂಡಗಳು ಅಸಮರ್ಥವೆಂದು ಪ್ರತಿಪಾದಿಸುತ್ತಾ ಬಂದವರು. ಬಂಡಾಯ ಸಾಹಿತ್ಯದಲ್ಲಿ ಸಾಹಿತ್ಯಿಕ ಗುಣಗಳಿರುವುದಿಲ್ಲ ಎಂಬ ಶ್ರೇಷ್ಠತೆಯ ವ್ಯಸನಿಗಳ ವಾದವನ್ನು ಬರಗೂರರಷ್ಟು ತಾತ್ವಿಕವಾಗಿ ಪ್ರತಿಭಟಿಸಿದವರೂ ಕಡಿಮೆ. ತಮ್ಮ ಈ ತಾತ್ವಿಕ ಪ್ರತಿಭಟನೆಗೆ ಗಟ್ಟಿಯಾದ ಸೃಜನಶಿಲ ಕೃತಿಗಳ ರಚನೆಯನ್ನೂ ಮಾಡುವುದರ ಮೂಲಕವೂ ಉತ್ತರಕೊಡುವ ಪ್ರಯತ್ನವನ್ನು ಬರಗೂರರು ಈ ಮಧ್ಯೆ ಮಾಡುತ್ತಿದ್ದಾರೆ. 'ಶಾಂತಿ', 'ತಾಯಿ'ಯಂತ ಬಂಡಾಯದ ತಾತ್ವಿಕ ಭಿತ್ತಿಯನ್ನುಳ್ಳ ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಆದರೆ ಅವರು ಬಂಡಾಯ ಸಾಹಿತ್ಯ ಸಂಘಟನೆಗೆ ತಾತ್ವಿಕ ನೆಲೆಗಟ್ಟನ್ನು




ಕಟ್ಟಿಕೊಡುವಲ್ಲಿ ಯಶಸ್ವಿಯಾದಷ್ಟು ಸೃಜನಶೀಲ ಪ್ರಯತ್ನಗಳಲ್ಲಿ ಯಶಸ್ವಿಯಾಗಿಲ್ಲ ಎಂಬುದು ನಿಜವೇ ಆದರೂ ಅವರ ಮತ್ತೊಂದು ಸೃಜನಶೀಲ ಪ್ರಯತ್ನವಾದ 'ಶಬರಿ' ಕಾದಂಬರಿ ಕನ್ನಡ ಸಾಹಿತ್ಯಲೋಕಕ್ಕೆ ಸ್ವಾಗತಾರ್ಹ ಸೇರ್ಪಡೆಯೆಂದೇ ಹೇಳಬೇಕು.

ಈ ಕಾದಂಬರಿ ಪ್ರಕಟಣೆಯಾಗಿ ಎರಡು ವರ್ಷಗಳೇ ಕಳೆದರೂ ಇದರ ಬಗ್ಗೆ ಗಂಭೀರ ಚರ್ಚೆಯೇ ಆಗದಿರುವುದರ ಹಿಂದೆ ಕನ್ನಡದ ಸಾಂಸ್ಕೃತಿಕ ಸಂದರ್ಭದ ವಿಕೃತಿಯೂ ಇದೆ. ಇಲ್ಲಿ 'ಆವರಣ'ದಂಥ ಸಂಘಪರಿವಾರದ ಪಾಂಪ್ಲೆಟ್ಟಿನಂತ ಮೂರನೇ ದರ್ಜೆ ಕೃತಿಯನ್ನು ಕನ್ನಡದ ಅತ್ಯುತ್ತಮ ಕೃತಿಯೆಂದು ಅಟ್ಟಕ್ಕೇರಿಸುವ ಬಲಪಂಥೀಯ ಸಾಹಿತ್ಯಿಕ ಮಾಫಿಯಾವೇ ಸೃಷ್ಟಿಯಾಗಿದೆ. ಈ ದುರದೃಷ್ಟಕರ ಸನ್ನಿವೇಶವೇ 'ಶಬರಿ' ಯಂತಹ ಕಾದಂಬರಿಗೆ ಸಲ್ಲಬೇಕಾದ ಮೆಚ್ಚುಗೆಯನ್ನಾಗಲೀ ಅಥವಾ ಸಕಾರಣ ವಿಮರ್ಶೆಯನ್ನಾಗಲೀ ಸಲ್ಲದಂತೆ ಮಾಡಿದೆ.

ಆದರರ್ಥ ಬರಗೂರರ 'ಶಬರಿ' ಅದ್ಭುತವಾದ ಸೃಜನಶೀಲ ಸಾಹಿತ್ಯಿಕ ಕೃತಿಯೆಂದೇನೂ ಅಲ್ಲ. ಈ ಕಾದಂಬರಿಯ ವೈಶಿಷ್ಟ್ಯ ಮತ್ತು ಹಿರಿಮೆ ಇರುವುದು ಅದು ಎತ್ತಿಕೊಂಡಿರುವ ವಸ್ತುವಿನಲ್ಲಿ ಮತ್ತು ಅದನ್ನು ಈಗ ಕನ್ನಡ ಸಮುದಾಯ ಎದುರಿಸುತ್ತಿರುವ ಬಿಕ್ಕಟ್ಟಿನಲ್ಲಿಟ್ಟು ವಿಶ್ಲೇಷಿಸಲು ಮಾಡಿರುವ ಪ್ರಯತ್ನದಲ್ಲಿ. 'ಶಬರಿ' ಕಾದಂಬರಿಯ ಕಥಾವಸ್ತು ಊಳಿಗಮಾನ್ಯ ಪ್ರಭುಗಳ ಪಾರಂಪರಿಕ ಶೋಷಣೆಗೆ ತುತ್ತಾಗುತ್ತಲೇ ಜಾಗತೀಕರಣದ ದಾಳಿಯನ್ನು ಎದುರಿಸಬೇಕಾಗಿ ಬಂದಿರುವ ಆದಿವಾಸಿ ಸಮುದಾಯದ ಬದುಕನ್ನು ಕುರಿತಾದದ್ದು. ಈ ವಸ್ತುವೇ ಈ ಕಾದಂಬರಿಯನ್ನು ಓದಲೇಬೇಕಾದ ಕಾದಂಬರಿಯನ್ನಾಗಿ ಮಾಡುತ್ತದೆ. ಏಕೆಂದರೆ ಸಮಕಾಲೀನ ಕಾದಂಬರಿ ಪ್ರಪಂಚದಲ್ಲಿ ತುಳಿತಕ್ಕೊಳಗಾದ ಮತ್ತು ಅಲಕ್ಷಿತ ಸಮುದಾಯಗಳ ಬದುಕು ಮತ್ತು ಆತಂಕಗಳು ಸೃಜನಶೀಲ ಅಭಿವ್ಯಕ್ತಿಯ ವಸ್ತುವಾಗುತ್ತಲೇ ಇಲ್ಲ.

ಇದಕ್ಕೆ ಈ ಅಭಿವ್ಯಕ್ತಿ ಮಾಧ್ಯಮದ ಬಳಕೆ ಮಾಡುತ್ತಿರುವವರು ಮಧ್ಯಮವರ್ಗದವರು ಅಥವಾ ಅಲಕ್ಷಿತ ಸಮುದಾಯದ ಹಿನ್ನೆಲೆ ಉಳ್ಳ ನವ ಮಧ್ಯಮವರ್ಗದವರು ಎಂಬುದು ಒಂದು ಕಾರಣ. ಅಷ್ಟು ಮಾತ್ರವಲ್ಲ, ಆದರೆ ಸಾಹಿತ್ಯ ಕ್ಷೇತ್ರದಲ್ಲಿ ನವ್ಯ ಪ್ರಕಾರ ಪ್ರಾರಂಭವಾದ ನಂತರ ವಸ್ತು, ಧೋರಣೆ ಮತ್ತು ತಂತ್ರ ಎಲ್ಲದರಲ್ಲೂ ವ್ಯಕ್ತಿನಿಷ್ಟ ಮತ್ತು ಸ್ವಕೇಂದ್ರಿತ ಧೋರಣೆಗಳು ಮಾತ್ರ ಪ್ರಕಟವಾಗಲಾರಂಭಿಸಿದವು. ಸಮುದಾಯ ಅಥವಾ ವ್ಯಕ್ತಿಯ ಲೋಕದೊಳಗಿನ ಸಮಾಜ ಮತ್ತು ಸಾರ್ವಜನಿಕ ಆವರಣಗಳು ಸಂಪೂರ್ಣವಾಗಿ ಮರೆಯಾಗಲಾರಂಭಿಸಿದವು. ಉದಾಹರಣೆಗೆ ತುಳಿತಕ್ಕೊಳಗಾದ ಸಮುದಾಯದ ಜೀವನವು ಎಷ್ಟರಮಟ್ಟಿಗೆ ವ್ಯಕ್ತಿಗತವಾದದ್ದೋ ಅಷ್ಟೇ ಮಟ್ಟಿಗೆ ಸಾಮುದಾಯಿಕವೂ ಹೌದು. ಅವರ ಖಾಸಗೀ ಲೋಕವನ್ನು ಸಮುದಾಯದಿಂದ ಅಥವಾ ಸಾರ್ವಜನಿಕ ಆಯಾಮದಿಂದ ಬೇರ್ಪಡಿಸಿ ನೋಡಲು ಬರುವುದೇ ಇಲ್ಲ.

ಆದರೆ ನವ್ಯ ಪ್ರಕಾರ ಈ ಸಾಮುದಾಯಿಕತೆಯನ್ನು ಅಥವಾ ಸಾರ್ವಜನಿಕತೆಯನ್ನು ದುಡಿಸಿಕೊಳ್ಳುವುದೇ ಇಲ್ಲ. ಅಥವಾ ಹಿನ್ನೆಲೆಗೆ ಸರಿಸಿಬಿಡುತ್ತದೆ. ಒಂದು ಸ್ಥಳ ಜನರ ಬದುಕಿನ ಬಗೆಗೆ ಅಥವಾ ಎತ್ತಂಗಡಿಗೆ ಗುರಿಯಾಗುವ ಆದಿವಾಸಿಗಳ ಬದುಕಿನ ಬಗೆಗೆ ಬರೆಯುವಾಗ ಅವರ ಆತಂಕಗಳನ್ನು ಕೇವಲ ವ್ಯಕ್ತಿ ನೆಲೆಗಟ್ಟಿನಲ್ಲಿ ಮಾತ್ರವೇ ಗ್ರಹಿಸಲೂ ಆಗುವುದಿಲ್ಲ, ಹಾಗೆಯೇ ಅದಕ್ಕೆ ವ್ಯಕ್ತಿ ನೀಡುವ ಪ್ರತಿರೋಧಾತ್ಮಕ ಪ್ರತಿಕ್ರಿಯೆಯನ್ನು ಕೇವಲ ವ್ಯಕ್ತಿನೆಲೆಯಲ್ಲಿ ಹಿಡಿದಿಡಲೂ ಸಾಧ್ಯವಿಲ್ಲ. ಒಂದು ಬಹಿರಂಗ ಪ್ರತಿಭಟನೆ, ಡಿಸಿ ಆಫೀಸ್ ಮುತ್ತಿಗೆ, ಘೇರಾವ್ ಈ ಎಲ್ಲವೂ ತುಳಿತಕ್ಕೊಳಗಾದ ಜನರ ಬದುಕಿನ, ಸಂವೇದನೆಗಳ, ಆತಂಕಗಳ ಭಾಗವೇ ಆಗಿರುತ್ತವೆ. ಆದರೆ ಸಮಕಾಲೀನ ಕನ್ನಡದ ಸಾಹಿತ್ಯಿಕ ಲೋಕದಲ್ಲಿ ಈ ಬಗೆಯ ಜನಪ್ರತಿರೋಧಗಳು ಸೃಜನಶೀಲ ಅಭಿವ್ಯಕ್ತಿಗೆ ವಸ್ತುವಾಗಿರುವುದು ಬಹಳ ಅಪರೂಪ.



ಅಪರೂಪಕ್ಕೊಮ್ಮೆ ನವ್ಯ ಮಾದರಿಯ ಪ್ರತಿಭಾವಂತರು ಅದರ ಅಭಿವ್ಯಕ್ತಿಗೆ ಪ್ರಯತ್ನಿಸಿದ್ದಿದೆ. ಉದಾಹರಣೆಗೆ ಆದಿವಾಸಿಗಳ ಎತ್ತಂಗಡಿ ಸಮಸ್ಯೆಯನ್ನು ಇಟ್ಟುಕೊಂಡು ಗಿರೀಶ್ ಕಾಸರವಳ್ಳಿಯವರು 'ದ್ವೀಪ'ವನ್ನು ಮತ್ತು ಕೇಸರಿ ಹರವೂ ಅವರು 'ಭೂಮಿಗೀತ' ಚಲನಚಿತ್ರವನ್ನು ಮಾಡಿದರು. ಆದರೆ ಕಾಸರವಳ್ಳಿಯವರ 'ದ್ವೀಪ' ಎತ್ತಂಗಡಿಯ ಹಿನ್ನೆಲೆಯಲ್ಲಿ ಸೃಷ್ಟಿಯಾದರೂ ಅಲ್ಲಿ ಕಥಾನಾಯಕಿಯ ಆತಂಕ ಮತ್ತು ಬದುಕು ಮಾತ್ರ ವ್ಯಕ್ತಿನೆಲೆಯಲ್ಲಿ ಚಿತ್ರಣಗೊಳ್ಳುತ್ತದೆ. ಆದರೆ 'ಭೂಮಿಗೀತ'ದ ಆವರಣದಲ್ಲೇ ಆದಿವಾಸಿಗಳ ಬದುಕಿನ ಸಾಮುದಾಯಿಕತೆಯನ್ನು ಹಿಡಿದಿಡುವ ಪ್ರಯತ್ನವಿರುವುದರಿಂದ ಅಲ್ಲಿ ಎತ್ತಂಗಡಿ ಸಮಸ್ಯೆ ಅದರ ಎಲ್ಲಾ ಖಾಸಗಿ ಮತ್ತು ಸಾರ್ವಜನಿಕ ಆಯಾಮದಲ್ಲಿ ಚಿತ್ರಣಗೊಂಡು ಗಮನಸೆಳೆಯುತ್ತದೆ. ಆದರೆ 'ದ್ವೀಪ'ಕ್ಕೆ ಸಿಕ್ಕಷ್ಟು ಪ್ರಚಾರ ಕನ್ನಡ ಲೋಕದಲ್ಲಿ 'ಭೂಮಿಗೀತ'ಕ್ಕೆ ಸಿಗಲೇ ಇಲ್ಲ.

ಹೀಗಾಗಿ ಬರಗೂರರ 'ಶಬರಿ' ಅದು ನಿರ್ವಹಿಸುವ ವಸ್ತುವಿನ ಕಾರಣಕ್ಕಾಗಿಯೇ ಮಹತ್ವದ್ದಾಗಿದೆ. ಸೃಜನಶೀಲ ಕೃತಿಗಳ ಶ್ರೇಷ್ಠತೆಯನ್ನು ಕೇವಲ ಅದರ ಸಾಹಿತ್ಯಕತೆ: ತಂತ್ರ ಇತ್ಯಾದಿ ಮಾನದಂಡಗಳಿಂದ ಮಾತ್ರ ಅಳೆಯುತ್ತಾ ವಸ್ತುವಿನ ಪ್ರಶ್ನೆಯನ್ನು ಗೌಣವಾಗಿಸು... ಇಂದಿನ ಸಂದರ್ಭದಲ್ಲಿ ವಸ್ತುವಿನ ಪ್ರಶ್ನೆಯನ್ನು ಪ್ರಮುಖವಾಗಿ ಚರ್ಚಿಸುವ ಅಗತ್ಯ ಹಿಂದೆಂದಿಗಿಂತಲೂ ಹೆಚ್ಚಾಗಿರುವ ಕಾರಣಕ್ಕಾಗಿಯೂ ಬರಗೂರರ 'ಶಬರಿ' ಮುಖ್ಯವಾಗುತ್ತಾಳೆ.

ಶಬರಿ ಕಾದಂಬರಿಯ ನಾಯಕಿ. ಆದಿವಾಸಿ ಯುವತಿ. ಇಲ್ಲಿ ಶಬರಿ ರಾಮಾಯಣದ ಶಬರಿಯ ಹೆಸರನ್ನು ಪಡೆದಿದ್ದರೂ ಕೇವಲ ದೇವರಿಗಾಗಿ ಕಾಯುವ ಶಬರಿಯಲ್ಲ. ಬದಲಿಗೆ ಕಾಯುತ್ತಲೇ ತಮ್ಮ ಬದುಕಿನ ದುಸ್ಥಿತಿಗೆ ಕಾರಣವಾದ ಸಂದರ್ಭ ಮತ್ತು ಶಕ್ತಿಗಳ ವಿರುದ್ಧ ಕುದಿಯುವ ಶಬರಿಯೂ ಆಗಿರುತ್ತಾಳೆ. ಅಷ್ಟು ಮಾತ್ರವಲ್ಲ, ಕುದಿಯುತ್ತಲೇ ತಮ್ಮ ಬದುಕಿನ ವಿಮೋಚನೆಗೆ ನಡೆಸಬೇಕಾದ ಧರ್ಮ ಸಂಗ್ರಾಮಕ್ಕೆ ಸಿದ್ಧಗೊಳ್ಳುವ ಹಾಗೂ ತನ್ನ ಸಮುದಾಯವನ್ನು ಸಿದ್ಧಗೊಳಿಸುವ ಶಬರಿಯೂ ಆಗುತ್ತಾಳೆ. ಹೀಗೆ ಶಬರಿಯನ್ನು ಕೇವಲ ಒಂದು ಪಾತ್ರವನ್ನಾಗಿ ಮಾತ್ರವಲ್ಲದೇ ಒಂದು ರೂಪಕವನ್ನಾಗಿ ಬಳಸಿಕೊಳ್ಳಲಾಗಿದೆ.

ಕಾದಂಬರಿಯಲ್ಲಿ ಬರುವ ಇತರ ಎರಡು ಪ್ರಮುಖ... ಪಾತ್ರಗಳಾದ ಸೂರ್ಯ ಮತ್ತು ಚಂದ್ರರೂ ಸಹ... ಪಾತ್ರಗಳಾಗಿರದೆ ಬರಗೂರರ ಕಥಾನಕಕ್ಕೆ ರೂಪಕಗಳೇ... ಆಗುತ್ತವೆ. ಚಂದ್ರ ಒಬ್ಬ ಆದಿವಾಸಿ ಯುವಕ. ಆತನಿಗೂ... ಶಬರಿಗೂ ಮದುವೆ ಗೊತ್ತಾಗಿರುತ್ತದೆ. ಸೂರ್ಯ ಒಬ್ಬ... ಎಡಪಂಥೀಯ ಹೋರಾಟಗಾರ. ಚಂದ್ರನಿಗೆ ಸೂರ್ಯನ...


ಮನುಸಂತಾನಿ ಮುತಾಲಿಕ್ ಎಂಬ ಕಿಡಿಗೇಡಿಯೊಂದಿಗೆ ಮಾತುಕತೆ

ತಾನು ಸಂಚಾರ ಮಾಡಿದ ಕಡೆಗಳಲೆಲ್ಲ ಹಿಂದೂ-ಮುಸ್ಲಿಂ ಸೌಹಾರ್ದಕ್ಕೆ ಬೆಂಕಿ ಹಚ್ಚುತ್ತ ನಡೆದಿರುವ, ಹಿಂದೂ ಧರ್ಮದ ಗುತ್ತಿಗೆ ಹಿಡಿದವನಂತೆ ವರ್ತಿಸುವ, ತನ್ನ ಬಾಯಿಗೆ ಏನು ಬರುತ್ತದೋ ಅದೇ ವೇದವಾಕ್ಯ ಎಂದು ತಿಳಿದುಕೊಂಡಿರುವ ಪ್ರಮೋದ ಮುತಾಲಿಕ್ ಎಂಬ ಕಿಡಿಗೇಡಿಯ ಅವಾಂತರಕಾರಿ ತಿಳಿವಳಿಕೆಗಳು ಯಾವ ಮಟ್ಟದ್ದು ಎಂದು ತಿಳಿಸಲು ಎಂಬ ಉದ್ದೇಶದಿಂದ ಆತನ ಸಂದರ್ಶನವನ್ನು ಇಲ್ಲಿ ನೀಡಿದ್ದೇವೆ. ನೀವೇ ಓದಿ ತಿಳಿಯಿರಿ.

ಹಿಂದೂ ಧರ್ಮದ ಗುತ್ತಿಗೆ ಹಿಡಿದವನಂತೆ ವರ್ತಿಸುವ, ತನ್ನ ಬಾಯಿಗೆ ಏನು ಬರುತ್ತದೋ ಅದೇ ವೇದವಾಕ್ಯ ಎಂದು ತಿಳಿದುಕೊಂಡಿರುವ ಪ್ರಮೋದ ಮುತಾಲಿಕ್ ಎಂಬ ಕಿಡಿಗೇಡಿ ಟಿವಿ ಚಾನೆಲ್ ಒಂದರ ಸಂದರ್ಶನದಲ್ಲಿ ಯಾವ ಎಗ್ಗಿಲ್ಲದೆ "ಹಿಂದೂ ಹೆಣ್ಣುಗಳ್ಯಾರು ಆಪರೇಷನ್ ಮಾಡಿಸಿಕೊಳ್ಳಬಾರದು. ಎಲ್ಲರೂ ಹನ್ನೆರಡು, ಹನ್ನೆರಡು ಮಕ್ಕಳನ್ನು ಹಡೆಯಬೇಕು" ಎಂದು ಉದುರಿಸಿದ ಅಣಿಮುತ್ತುಗಳು 'ಲಾಡೆನ್'ನನ್ನೇ ಮೀರಿಸುವಂತಿದ್ದವು. ತಾನು ಸಂಚಾರ ಮಾಡಿದ ಕಡೆಗಳಲೆಲ್ಲ ಹಿಂದೂ-ಮುಸ್ಲಿಂ ಸೌಹಾರ್ದಕ್ಕೆ ಬೆಂಕಿ ಹಚ್ಚುತ್ತ ನಡೆದಿರುವ ಈತ ಮೊನ್ನೆ 'ಸೇತು ಸಮುದ್ರಂ' ವಿಚಾರದಲ್ಲಿ ಇಬ್ಬರು ಅಮಾಯಕ ತಮಿಳರನ್ನು ಸುಟ್ಟ ಚೆಡ್ಡಿ ಚತುರರನ್ನು ಅಭಿನಂದಿಸುವ ಮಟ್ಟಕ್ಕೂ ಮುಂದುವರೆದ.

ಹಿಂದೊಮ್ಮೆ ಬೀದರ್‌ನ ಸಭೆಯೊಂದರಲ್ಲಿ ಈತ "ನಾನು ಗಾಂಧಿವಾದಿಯಲ್ಲ, ಗೋಡ್ಸೆವಾದಿ" ಎಂದೆಲ್ಲ ಅರಚಿದ್ದ ಸಂಗತಿ ಪತ್ರಿಕೆಗಳಲ್ಲಿ ಓದಿ ವ್ಯಥೆಪಟ್ಟಿದ್ದೆ. ಮಹಾತ್ಮನ ವಿಚಾರಗಳನ್ನು ಓದಿ, ಅವರ ಸರಳ ಜೀವನವನ್ನು ಕಂಡು ಕೌತುಕಗೊಂಡಿದ್ದ ನನಗೆ ಮುತಾಲಿಕ್‌ನ ಮಾತು ವೇದನೆಯನ್ನುಂಟುಮಾಡಿತ್ತು. ಇದೇ ವೇಳೆಗೆ ನಾನು ವಾಸಿಸುವ ಶಹಾಪುರದ ಕಾರ್ಯಕ್ರಮಕ್ಕೆ ಮುತಾಲಿಕ್ ಬರುವವನಿದ್ದ. ಶಹಾಪುರದ ಅಮಾಯಕ ಹುಡುಗರನ್ನು ತನ್ನ ಹಿಂದೂತ್ವವೆಂಬ ಮನುವಾದಿ ತತ್ವಗಳಿಗೆ ಬಳಸಿಕೊಳ್ಳುವ ಆತನ ತಂತ್ರಗಾರಿಕೆ ಬಗ್ಗೆ ಆತಂಕವುಂಟಾಯಿತು.

ಇತಿಹಾಸವನ್ನು ಸರಿಯಾಗಿ ಓದಿರದ ಅಥವಾ ಗ್ರಹಿಸಿರದ, ಮನುವಾದಿಗಳ ತಂತ್ರಗಾರಿಕೆ ಎಂತಹದ್ದು ಎಂಬುದೇ ಗೊತ್ತಿರದ ಅಮಾಯಕ ಹುಡುಗರ ಟೋಳಿಯೊಂದು ಅಂದು ಆತನ ಸುತ್ತಲೂ ನೆರೆದಿತ್ತು. ಅವರೊಂದಿಗೆ ಜೇವರ್ಗಿಯ ಆಂದೋಲಾ ಮಠದ ಸಿದ್ಧಲಿಂಗಸ್ವಾಮಿ ತನ್ನ ಮೂಲ ಬಸವಾದಿ ಪ್ರಮಥರ ತತ್ವಗಳಿಗೆ ತಿಲಾಂಜಲಿ ಇಟ್ಟು ಮುತಾಲಿಕ್‌ನ ಬೆಂಬಲಕ್ಕೆ



ನಿಂತದ್ದನ್ನು ಕಂಡು ನನ್ನಲ್ಲಿ ಮತ್ತಷ್ಟು ಸೋಜಿಗವನ್ನುಂಟು ಮಾಡಿತ್ತು.

ಮುತಾಲಿಕನ ಹಿಂದೂ ಸೇನಾ ಎಂಬ ಮಂಗಗಳ ಸಂಘಟನೆ ನಾನಾ ಪದಾಧಿಕಾರಿಗಳ ದಂಡೂ ಅಲ್ಲಿ ನೆರೆದಿತ್ತು. ಅವರೆಲ್ಲರ ಮುಂದೆ ಮುತಾಲಿಕ್ ತನ್ನ... ಬಡಾಯಿ ಕೊಚ್ಚಿಕೊಳ್ಳುತ್ತಿದ್ದ. ಮುಸ್ಲಿಂ ವಿರೋಧಿನೀತಿ... ಕರ್ಮಠ ಆಚರಣೆಗಳೇ ಭಾರತೀಯತೆ ಎನ್ನುವಂತೆ... ಬಿಂಬಿಸುವ ಆತನ ಮೋಸಗಾರಿಕೆಯ ಮಾತು ನನ್ನ... ಹೇಸಿಗೆ ಹುಟ್ಟಿಸುತ್ತಿದ್ದವು. ಆದರೂ ಅಂದು ಅವನನ್ನು... ಸಂದರ್ಶಿಸಿದ್ದೆ. ಈತನ ಪೆದ್ದುತನ, ಅವಾಂತಕಾರಿ ತಿಳಿವಳಿಕೆಗಳು ಯಾವ ಮಟ್ಟದ್ದು ಎಂದು ಅರಿತುಕೊಳ್ಳಲು... ಅಂದು ಆತ ನೀಡಿದ ಉತ್ತರಗಳೇ ಸಾಕ್ಷಿ. ಅವು ಎಲ್ಲರ... ಗಮನಕ್ಕೆ ಬರಲಿ ಎಂಬ ಉದ್ದೇಶದಿಂದ ಅದನ್ನಿಲ್ಲಿ... ಕೊಡಮಾಡಲಾಗಿದೆ.

ಪ್ರಶ್ನೆ: ಮಹಾತ್ಮ ಗಾಂಧಿಯವರನ್ನು ಯಾವ ಕಾರಣಕ್ಕೆ... ನೀವು ವಿರೋಧಿಸುತ್ತೀರಿ?

ಮುತಾಲಿಕ್: ಆತನೊಬ್ಬ ಮುಸ್ಲಿಂವಾದಿ. ಅವರ... ಪರವಾಗಿಯೇ ಯಾವತ್ತೂ ಇರುತ್ತಿದ್ದವನು. ಆ ಕಾರಣಕ್ಕೆ... ನಾನು ವಿರೋಧಿಸುತ್ತೇನೆ.

ಪ್ರಶ್ನೆ: ನನಗೆ ಗೊತ್ತಿರುವಂತೆ ಮಹಾತ್ಮ ಗಾಂಧೀಜಿ... ಯಾವತ್ತೂ ಒಂದು ಜನಾಂಗದ ಪರ ಇದ್ದವರಲ್ಲವಲ್ಲ?!!

ಮುತಾಲಿಕ್: ಹೇಗೆ ಹೇಳ್ತೀರಿ? ಆತ ಇದ್ದದ್ದೇ... ಮುಸ್ಲಿಂ ಪರ ವಕಾಲತ್ತು ವಹಿಸಲು. ಆ ಪುಣ್ಯಾತ್ಮ... ಇದ್ದುದರಿಂದಲೇ ದೇಶ ಇಬ್ಭಾಗವಾಯಿತು. ಇಲ್ಲದೆ... ಇದ್ದರೆ ದೇಶ ಇಬ್ಭಾಗವಾಗುವ ಪ್ರಸಂಗವೇ ಬರುತ್ತಿರಲಿಲ್ಲ...

ಪ್ರಶ್ನೆ: ಗಾಂಧೀಜಿಯವರೇ ದೇಶ ಇಬ್ಭಾಗವಾಗಲು... ಮೂಲ ಕಾರಣರೆ.... !?

ಮುತಾಲಿಕ್: ಹೌದು! ನೆಹರೂ ಅವರನ್ನು... ಪ್ರಧಾನಿಯನ್ನಾಗಿ ಮಾಡುವುದಕ್ಕಾಗಿ ಹಠ ಮಾಡಿ... ಮಾಡಿ ದೇಶವನ್ನು ಇಬ್ಭಾಗ ಮಾಡಿದರು.

ಪ್ರಶ್ನೆ: ಹೇಗೂ ನೀವು ವಿರೋಧಿಸುವ ಮುಸ್ಲಿಂ... ಜನಾಂಗದ ಅರ್ಧಕ್ಕಿಂತ ಹೆಚ್ಚು ಜನ ಈ ದೇಶದಿಂದ... ಪಾಕಿಸ್ತಾನಕ್ಕೆ ವಲಸೆ ಹೋದರಲ್ಲ?


ಮುತಾಲಿಕ್: ಭಾರತದಲ್ಲಿನ ಎಲ್ಲಾ ಮುಸ್ಲಿಂರೂ... ಪಾಕಿಸ್ತಾನಕ್ಕೆ ಹೋಗಬೇಕಿತ್ತು. ಆದರೆ ಗಾಂಧೀಜಿ...

[illegible] ಆತನೂ ಸೂರ್ಯನಂತ ಪ್ರಭಾವಿತನಾಗುತ್ತಾನೆ. ಈ ಆದಿವಾಸಿಗಳ ಬದುಕನ್ನು ಸಂಪೂರ್ಣವಾಗಿ ಪಕ್ಕದ ಹಳ್ಳಿಯ ಭೂಮಾಲೀಕ ನರಸಿಂಹಯ್ಯ ಮತ್ತು ಅವನಿಗೆ ಎಲ್ಲಾ ಕುತಂತ್ರ ಉಪಾಯಗಳನ್ನು ಕೊಡುವ ಬ್ರಾಹ್ಮಣ ಪೂಜಾರಿ ರಾಮಾಜೋಯಿಸ್ ನಿಯಂತ್ರಿಸುತ್ತಿರುತ್ತಾರೆ. ಭೂಹೀನರಾದ ಆದಿವಾಸಿಗಳಿಗೆ ನರಸಿಂಹಯ್ಯನ ಹೊಲದಲ್ಲಿ ಕೂಲಿ ಕೆಲಸ ಮಾಡುವುದೊಂದೇ ಏಕೈಕ ಜೀವನೋಪಾಯ. ಭೂಹೀನರ ಪರವಾದ ಹಲವಾರು ಶಾಸನಗಳು ಬಂದಿದ್ದರೂ ಅದರ ಅರಿವು ಆದಿವಾಸಿಗಳಿಗೆ ಬರದಂತೆ ಅವರನ್ನು ಮೌಢ್ಯದಲ್ಲೇ ಭೂಮಾಲಿಕ ಮತ್ತು ಪೂಜಾರಿ ಇಟ್ಟುಕೊಂಡಿರುತ್ತಾರೆ.

ಆದರೆ ಆದಿವಾಸಿ ಯುವಕ ಚಂದ್ರನಿಗೆ ಸೂರ್ಯನ ಸಂಪರ್ಕ ಬರುತ್ತಿದ್ದಂತೆ ಆತನ ಯೋಚನೆಗಳು ಬದಲಾಗುತ್ತಾ ಶೋಷಣೆಯ ಅರಿವು ಬೆಳೆದು ಪ್ರತಿಭಟಿಸಲು ಪ್ರಾರಂಭಿಸುತ್ತಾನೆ. ಅದರ ಭಾಗವಾಗಿಯೇ ಯಾವುದೇ ಆದಿವಾಸಿಗಳು ಮದುವೆಯಾದರೂ ಮದುವೆ ಹೆಣ್ಣು ಮೊದಲ ರಾತ್ರಿ ಊರ ಹೊರಗಿನ ದೇವಸ್ಥಾನದಲ್ಲಿ ದೇವರ ಜೊತೆ ಮಲಗಬೇಕೆಂಬ ರಿವಾಜಿನ ವಿರುದ್ಧ ತಿರುಗಿ ಬೀಳುತ್ತಾನೆ. ಕೊನೆಗೆ ಆದಿವಾಸಿಗಳ ಆತಂಕದ ಒತ್ತಾಯಕ್ಕೆ ಮಣಿದು ಶಬರಿಯನ್ನು ದೇವಸ್ಥಾನಕ್ಕೆ ಕಳಿಸಿದರೂ, ರಾತ್ರಿ ಹೊತ್ತು ಅಲ್ಲಿ ಯಾರಾದರೂ ಸುಳಿದಾಡಿದರೆ ರಕ್ತಕಾರಿ ಸಾಯುತ್ತಾರೆಂಬ ರಾಮಾಜೋಯಿಸ ಹರಡಿದ ಮೂಢನಂಬಕೆಯನ್ನು ಕಡೆಗಣಿಸಿ ತನ್ನ ಮೂಕ, ಕಿವುಡ ಸ್ನೇಹಿತ ಹುಚ್ಚೀರನೊಂದಿಗೆ ರಾತ್ರಿ ದೇವಸ್ಥಾನದೊಳಕ್ಕೆ ಹೋಗುತ್ತಾನೆ. ಅರ್ಧರಾತ್ರಿಯಲ್ಲಿ ದೇವರ ಪೋಷಾಕಿನಲ್ಲಿ ಭೂಮಾಲಿಕ ನರಸಿಂಹಯ್ಯ ಬರುವುದನ್ನು ನೋಡಿ ಅವನ ಮೇಲೆ ಮುಗಿಬೀಳುತ್ತಾನೆ. ಕತ್ತಲಲ್ಲಿ ಏನು ನಡೆಯುತ್ತಿರುವುದೆಂದು ಅರ್ಥವಾಗದೆ ಶಬರಿ ಊರಿನ ಕಡೆ ಓಡಿಹೋಗುತ್ತಾಳೆ. ಬೆಳಗಾಗೆದ್ದರೆ ಚಂದ್ರ ದೇವಸ್ಥಾನದ ಮೆಟ್ಟಿಲ ಬಳಿ ರಕ್ತಕಾರಿ ಸತ್ತು ಬಿದ್ದಿರುತ್ತಾನೆ. ಮೂಕ ಹುಚ್ಚೀರ ಮೈಯೆಲ್ಲಾ ಪೆಟ್ಟಾಗಿ ಅಳುತ್ತಾ ಕೂತಿರುತ್ತಾನೆ. ನಂಬಿಕೆಯನ್ನು ಮುರಿದು ದೇವಸ್ಥಾನಕ್ಕೆ ಹೋಗಿದ್ದರಿಂದಲೇ ಹೀಗಾಯಿತೆಂದು ಮುಗ್ಧ ಜನ ನಂಬುತ್ತಾರೆ.

ಈ ಸಂದರ್ಭದಲ್ಲೇ ಆ ಆದಿವಾಸಿಗಳ ಹಾದಿಗೆ ಎಡಪಂಥೀಯ ಹೋರಾಟಗಾರ ಚಂದ್ರನ ಗುರು ಸೂರ್ಯನ ಪ್ರವೇಶವಾಗುತ್ತದೆ. ಪ್ರಾರಂಭದಲ್ಲಿ ಅವನನ್ನು ಜನ ಅನುಮಾನಿಸಿದರೂ ಸೂರ್ಯ ಮೊದಲು ಶಬರಿಯ ನಂತರ ಇಡೀ ಆದಿವಾಸಿ ಸಮುದಾಯದ ವಿಶ್ವಾಸ ಗಳಿಸುತ್ತಾನೆ. ಅವರ ಕೆಲಸ, ಕಷ್ಟಸುಖಗಳಲ್ಲಿ ತಾನೂ ಸೇರಿಯುತ್ತಾನೆ. ಕ್ರಮೇಣ ಅವರಿಗೆ ಅಕ್ಷರವನ್ನು ಮತ್ತು ಅವರ ಶೋಷಣೆಗೆ ಹೇಗೆ ಭೂಮಾಲಿಕ ಕಾರಣವೆಂಬ ಅರಿವನ್ನು ಮಾಡಿಸುತ್ತಾನೆ. ಅವನ ಈ ಸಂಯಮಶೀಲ ಪ್ರಯತ್ನದಿಂದ ಆದಿವಾಸಿಗಳು ಭೂಮಾಲಿಕನ ಎದುರು ಗಟ್ಟಿಯಾಗಿ ನಿಂತು ತಮ್ಮ ಹಕ್ಕನ್ನು ಕೇಳಲು ಪ್ರಾರಂಭಿಸುತ್ತಾರೆ. ಸೂರ್ಯನ ಈ ಹೋರಾಟದಲ್ಲಿ ಅವನ ಮತ್ತೊಬ್ಬ ಸಂಗಾತಿ ನವಾಬನೂ ಸೇರಿಕೊಳ್ಳುತ್ತಾನೆ. ಭೂಮಾಲೀಕನ ಬಲಗೈ ಭಂಟನಾಗಿದ್ದ ಆದಿವಾಸಿ ಪೂಜಾರಿಯ ಮಗಳಾದ ಗೌರಿಯನ್ನು ನವಾಬ ಪ್ರೀತಿಸಿ ಸಮುದಾಯದ ಸಮ್ಮತಿ ಮತ್ತು ಭೂಮಾಲಿಕನ ಅಸಮ್ಮತಿಯೊಂದಿಗೆ ಮದುವೆಯಾಗುತ್ತಾನೆ. ಈ ಬಾರಿ ಆದಿವಾಸಿಗಳೂ ಸಹ ಭೂಮಾಲಿಕನ ಎದುರಿಗೇ ಹಳೆಯ ರಿವಾಜನ್ನು ಮುರಿದು ನವಾಬನ ಹೆಂಡತಿ ಗೌರಿಯನ್ನು ದೇವಸ್ಥಾನಕ್ಕೆ ಕಳಿಸಿಕೊಡುವುದಿಲ್ಲವೆಂದು ನಿರ್ಧರಿಸುತ್ತಾರೆ. ಆ ಮೂಲಕ ಭೂಮಾಲಿಕ ಸೃಷ್ಟಿಸಿದ್ದ ಜಾಲದ ವಿರುದ್ಧದ ಆತ್ಮಾಭಿಮಾನದ ಯುದ್ಧದಲ್ಲಿ ಮೊದಲ ಜಯ ಪಡೆಯುತ್ತಾರೆ.

ಅಷ್ಟರಲ್ಲಿ ಆ ಊರಿಗೆ ಬಹುರಾಷ್ಟ್ರೀಯ ಕಂಪನಿಯೊಂದು ಪ್ರವೇಶಿಸಿ ಆದಿವಾಸಿಗಳು ಸರ್ಕಾರದಿಂದ ಪಡೆಯಬೇಕೆಂದುಕೊಂಡಿದ್ದ ಭೂಮಿಯಲ್ಲಿ ಗಣಿಗಾರಿಕೆ ಮಾಡುವ ಯೋಜನೆ ಮಾಡುತ್ತದೆ. ಆ ಭೂಮಿಯೊಂದಿಗೆ ಆದಿವಾಸಿಗಳ ಭವಿಷ್ಯದ ಕನಸೂ ಸೇರಿಕೊಂಡಿದ್ದರಿಂದ ಆದಿವಾಸಿಗಳು ಅದರ ವಿರುದ್ಧ ಸೂರ್ಯನ ನೇತೃತ್ವದಲ್ಲಿ ಪ್ರತಿಭಟಿಸುತ್ತಾರೆ. ಆದರೆ ಆ ಪ್ರಕ್ರಿಯೆಯಲ್ಲಿ ಹಳೆಯ ಸುಳ್ಳು ಕೊಲೆ ಕೇಸೊಂದರ ನೆಪದಲ್ಲಿ ತಲೆಮರೆಸಿಕೊಂಡಿದ್ದ ಸೂರ್ಯನನ್ನು ಪೊಲೀಸರು ಬಂಧಿಸುತ್ತಾರೆ ಮತ್ತು ಜೈಲಿನಲ್ಲಿ ಹೊಡೆದು ಸಾಯಿಸುತ್ತಾರೆ. ಸೂರ್ಯನ ಮೃತದೇಹದ ಜೊತೆಗೆ ಆತನಿಗೆ ಪರಮಾಪ್ತವಾಗಿದ್ದ ಹೆಗಲು ಚೀಲವನ್ನು ಮಣ್ಣುಮಾಡುತ್ತಿರುವಾಗ ಶಬರಿ ಆ ಚೀಲವನ್ನು ತನ್ನ ಹೆಗಲಿಗೇರಿಸಿಕೊಂಡು ಹೋರಾಟ ಮುಂದುವರೆಯುವುದಕ್ಕೆ ರೂಪಕವಾಗುತ್ತಾಳೆ. ಅವಳ ಹೊಟ್ಟೆಯಲ್ಲಿ ಸೂರ್ಯನ ಪ್ರೀತಿ ಭ್ರೂಣವಾಗಿ ಚಿಗುರುತ್ತಿರುತ್ತದೆ ಮತ್ತು ಹೆಗಲು ಚೀಲದಲ್ಲಿ ಒಂದು ಪಿಸ್ತೂಲು ತಣ್ಣಗೆ ಮಲಗಿರುತ್ತದೆ.



ಬರಗೂರರ 'ಶಬರಿ' ಅದ್ಭುತವಾದ ಸೃಜನಶೀಲ ಸಾಹಿತ್ಯಿಕ ಕೃತಿಯೇನೂ ಅಲ್ಲ. ಈ ಕಾದಂಬರಿಯ ವೈಶಿಷ್ಟ್ಯ ಮತ್ತು ಹಿರಿಮೆ ಇರುವುದು ಅದು ಎತ್ತಿಕೊಂಡಿರುವ ವಸ್ತುವಿನಲ್ಲಿ ಮತ್ತು ಅದನ್ನು ಈಗ ಕನ್ನಡ ಸಮುದಾಯ ಎದುರಿಸುತ್ತಿರುವ ಬಿಕ್ಕಟ್ಟಿನಲ್ಲಿಟ್ಟು ವಿಶ್ಲೇಷಿಸಲು ಮಾಡಿರುವ ಪ್ರಯತ್ನದಲ್ಲಿ. 'ಶಬರಿ' ಕಾದಂಬರಿಯ ಕಥಾವಸ್ತು ಊಳಿಗಮಾನ್ಯ ಪ್ರಭುಗಳ ಪಾರಂಪರಿಕ ಶೋಷಣೆಗೆ ತುತ್ತಾಗುತ್ತಲೇ ಜಾಗತೀಕರಣದ ದಾಳಿಯನ್ನು ಎದುರಿಸಬೇಕಾಗಿ ಬಂದಿರುವ ಆದಿವಾಸಿ ಸಮುದಾಯದ ಬದುಕನ್ನು ಕುರಿತಾದದ್ದು. ಈ ವಸ್ತುವೇ ಈ ಕಾದಂಬರಿಯನ್ನು ಓದಲೇಬೇಕಾದ ಕಾದಂಬರಿಯನ್ನಾಗಿ ಮಾಡುತ್ತದೆ.

ಇದಿಷ್ಟು ಕಥೆಯ ಹಂದರ. ಹೊಸ ತಿಳಿವಳಿಕೆಗೆ ಮತ್ತು ವಿಮೋಚನೆಯ ಬೆಳಕಿಗೆ ಸೂರ್ಯ ರೂಪಕವಾಗುವಂತೆ ಅವನಿಂದ ಪಡೆದ ತಿಳಿವಳಿಕೆಯ ಪ್ರತಿಫಲನವಾಗಿ ಚಂದ್ರ ಇದ್ದಾನೆ. ಶಬರಿ ಸೂರ್ಯನಿಂದ ಗರ್ಭವತಿಯಾಗುವುದೂ ಸಹ ಹೊಸ ತಿಳಿವಳಿಕೆ ಆದಿವಾಸಿಗಳಲ್ಲಿ ಕುಡಿಯೊಡೆಯುವುದರ ಸಂಕೇತವಾಗುತ್ತದೆ. ಆದಿವಾಸಿಗಳ ಅನ್ಯಾಯಕ್ಕೆ ಮೂಕಪ್ರೇಕ್ಷಕನಾಗಿದ್ದ ಹುಚ್ಚೀರ ಬರಹ ಕಲಿತು ಆದ ಅನ್ಯಾಯವನ್ನು ಬಹಿರಂಗಪಡಿಸುವುದೂ ಸಹ ಒಂದು [illegible] ರೂಪಕವಾಗಿ ಬಳಕೆಯಾಗುತ್ತದೆ. ಕೊನೆಗೆ [illegible] ಚೀಲವನ್ನು ಹೆಗಲಿಗೇರಿಸಿಕೊಳ್ಳುವುದೂ [illegible] ಒಂದು ಪಿಸ್ತೂಲು [illegible] ಅರ್ಥಪೂರ್ಣ ರೂಪಕ.

ಆದರೆ ಕಾದಂಬರಿಯಲ್ಲಿ ಬರಗೂರರ ರೂಪಕದ ಬಗೆಗಿನ ಅತಿ ವ್ಯಾಮೋಹವೇ ಒಂದು ಮಿತಿಯಾಗಿಯೂ ಪರಿಣಮಿಸಿಬಿಡುತ್ತದೆ. ಇಂಥ ಹಲವಾರು ರೂಪಕಗಳು ಈಗಾಗಲೇ ಕ್ಲೀಷೆ ಎನಿಸುವಷ್ಟರಮಟ್ಟಿಗೆ ಬಳಕೆಯಾಗಿದ್ದೂ ಬರಗೂರರು ಇದೇ ಸುಲಭ ಮಾದರಿಗೆ ಬಲಿಯಾಗಿದ್ದಾರೆ. ರೂಪಕಗಳ ಬಳಕೆಯಿಂದಲೇ ಒಂದು ಕೃತಿ ಸೃಜನಶೀಲವಾಗಿ ಬಿಡಬಹುದೆಂಬ ಭ್ರಾಂತಿಯೂ ಇರುವಂತಿದೆ. ಏಕೆಂದರೆ ಈ ರೂಪಕಗಳನ್ನು ಎರಕ ಹೊಯ್ಯುವುದರಲ್ಲಿ ಅವರು ತೋರುವಷ್ಟು ಉತ್ಸಾಹ ಮತ್ತು ಪರಿಶ್ರಮವನ್ನು ಪಾತ್ರಗಳನ್ನು ಮತ್ತಷ್ಟು ಸಜೀವಗೊಳಿಸಲಾಗಲೀ ಅಥವಾ ಒಟ್ಟಾರೆ ಕಥಾನಕದ ಪ್ಲಾಟ್ ಅನ್ನು ಅಥೆಂಟಿಕ್‌ಗೊಳಿಸಲಾಗಲೀ ಬಳಸಿದ್ದರೆ ಕಾದಂಬರಿ ಇನ್ನಷ್ಟು ಪರಿಣಾಮಕಾರಿಯಾಗಿರುತ್ತಿತ್ತು, ಅಷ್ಟು ಮಾತ್ರವಲ್ಲ, ಸನ್ನಿವೇಶದ ಮತ್ತು ಜೀವನ ನಾಟಕದ ಚಿತ್ರಣದಲ್ಲೂ ಬರಗೂರರ ಬರಡುತನ ಎದ್ದುಕಾಣುತ್ತದೆ. ಪರಿಣಾಮವಾಗಿ ಕಾಂಟೆಸ್ಟಿನಲ್ಲಿ ಬರೆಯುವ ಕಾವ್ಯದಷ್ಟೆ 'ಶಬರಿ' ಒಣ ಎನಿಸುತ್ತದೆ. ಕಾದಂಬರಿಯಲ್ಲಿ ಆದಿವಾಸಿಗಳ ಬದುಕಿನ ಚಿತ್ರಣವನ್ನು ಓದುತ್ತಿರುವಾಗಲೂ ಕಥೆಗಾರ ಅವರ ಬದುಕಿನ ಬಗ್ಗೆ ಸಹಾನುಭೂತಿ ಇರುವ ಹೊರಗಿನವನೇ ವಿನಃ ಒಳಗಿನವನಲ್ಲ ಎಂಬುದು ರಾಚುತ್ತದೆ. ಹೀಗೇಕೆ? ಕಥೆಗಾರನಿಗೂ ಮತ್ತು ಅವನು ಸೃಷ್ಟಿಸಿರುವ ಪಾತ್ರಗಳಿಗೂ ನಿಜಜೀವನದಲ್ಲಿ ಸಾವಯವ ಸಂಬಂಧವಿಲ್ಲದಿರುವುದೇ ಕಾರಣವಿರಬಹುದೇ ಎನಿಸುತ್ತದೆ. ಆದ್ದರಿಂದಲೇ ಈ ಕಾದಂಬರಿಯನ್ನು ಓದುತ್ತಿರುವಾಗ ಬೇಡವೆಂದರೂ ನಿರಂಜನರ 'ಚಿರಸ್ಮರಣೆ' ಮತ್ತು ಕಟ್ಟಿಮನಿಯವರ 'ಮಾಡಿ ಮಡಿದವರು' ಇತ್ಯಾದಿ ಕಾದಂಬರಿಗಳ ನಡುವಿನ ಹೋಲಿಕೆ ಕಣ್ಮುಂದೆ ಬರುತ್ತದೆ. ಕಥೆಗಾರನ ಜೀವನ ದ್ರವ್ಯ, ಅನುಭೂತಿ, ಅನುಭವ ಮತ್ತು ತೊಡಗುವಿಕೆ ಇವೆಲ್ಲವೂ ಹದಪ್ರಮಾಣದಲ್ಲಿದ್ದರೆ ಈ ಕೊರತೆ ಉಂಟಾಗುತ್ತಿರಲಿಲ್ಲವೇನೋ?

ಆದರೆ ಅದೆಷ್ಟೇ ಮಿತಿಗಳಿದ್ದರೂ ಕನ್ನಡ ಸಾರಸ್ವತ ಲೋಕಕ್ಕೆ 'ಶಬರಿ' ಒಂದು ಸ್ವಾಗತಾರ್ಹ ಸೇರ್ಪಡೆ ಎಂಬುದರಲ್ಲಿ ಮತ್ತು ಈ ಕಾದಂಬರಿ ಒಂದು ಸೃಜನಶೀಲ ಪ್ರಯತ್ನ ಎಂಬುದರಲ್ಲಿ ಸಂದೇಹವಿಲ್ಲ. 'ಆವರಣ', 'ಸಾರ್ಥ' ಇತ್ಯಾದಿ ಮೂರನೇ ದರ್ಜೆ ಮತ್ತು ಅಪಾಯಕಾರಿ ಕಾದಂಬರಿಗಳ ಹಾವಳಿಯಿಂದ ಕಂಗೆಟ್ಟಿರುವ ಕನ್ನಡಕ್ಕೆ 'ಶಬರಿ' ಆರೋಗ್ಯಕರ ಓದೊಂದನ್ನು ನೀಡುತ್ತಾಳೆ.

■ ಶಿವಸುಂದರ್

ಸಂದರ್ಶನ

■ ವಿಶ್ವಾರಾಧ್ಯ ಸತ್ಯಂಪೇಟೆ

ಪ್ರಶ್ನೆ: ಭಾರತೀಯರೇ ಆಗಿರುವ, ನಮ್ಮವರೇ ಎನ್ನಿಸಿಕೊಂಡಿರುವ ಖಾನ್ ಅಬ್ದುಲ್ ಗಫಾರ ಖಾನ್, ಸುಪ್ರಸಿದ್ಧ ಶಹನಾಯ್ ವಾದಕರಾಗಿದ್ದ ಬಿಸ್ಮಿಲ್ಲಾಖಾನ್, [illegible] ಸಿನಿಮಾಗಳಿಗೆ ಹಾಡುಗಳನ್ನು ಬರೆದ ಕರೀಂಖಾನ್ [illegible]ಂತಾದವರು......?

ಮುತಾಲಿಕ್ : ಎಲ್ಲರೂ ಹಿಂದೂ ದ್ವೇಷಿಗಳು. ಮುಸ್ಲಿಂ ರಾಷ್ಟ್ರಗಳ ಪರವಾಗಿ ಇರುವವರು.

ಪ್ರಶ್ನೆ: ಅದು ಹೇಗೆ?

ಮುತಾಲಿಕ್: ದೇಶದ ಪ್ರಶ್ನೆ ಬಂದಾಗ ಅವರು ಯಾವುದೇ ಬಾರ್ಡರಿಗೆ ಅಂಟಿಕೊಂಡು ನಿಲ್ಲುವವರಲ್ಲ, [illegible] ಮುಸ್ಲಿಂ ವಾದದಲ್ಲಿ ನಂಬಿಕೆ ಇಟ್ಟವರು.

[illegible] ಉಪವಾಸ ಸತ್ಯಾಗ್ರಹದಂತಹ ನಾಟಕವಾಡುವ ಮೂಲಕ ಅವರನ್ನು ತಡೆದು ನಿಲ್ಲಿಸಿದರು. ಹಾಗಾಗಿ ದೇಶದ್ರೋಹಿಗಳೆಲ್ಲ ಇಲ್ಲೇ ಉಳಿದರು.

ಪ್ರಶ್ನೆ: ಹಾಗಾದರೆ ಈ ದೇಶದಲ್ಲಿ ವಾಸಿಸುವ ಮುಸ್ಲಿಂ ಜನಾಂಗದವರೆಲ್ಲ ದೇಶದ್ರೋಹಿಗಳೆ?

ಮುತಾಲಿಕ್: ಹೌದು! ಈ ದೇಶದಲ್ಲಿರುವ ಪ್ರತಿಯೊಬ್ಬ ಮುಸಲ್ಮಾನನೂ ಪಾಕಿಸ್ತಾನವಾದಿ...... ನಮ್ಮ ದೇಶದಲ್ಲಿದ್ದುಕೊಂಡು ಸದ್ದಾಂ ಜಿಂದಾಬಾದ್ ಅಂತಾರೆ, ಪಾಕಿಸ್ತಾನ ಜಿಂದಾಬಾದ್ ಅಂತಾರೆ. ಇರಾನ್-ಇರಾಕ್ ಯಾವುದಾದರೂ ಸೈ, ಅವರೆಲ್ಲ ಮುಸ್ಲಿಂ ಮೂಲಭೂತವಾದಿಗಳು.

ಪ್ರಶ್ನೆ : ಗಾಂಧೀಜಿಯವರ ಸರಳತೆ, ವ್ಯಕ್ತಿತ್ವ ಕುರಿತು ಇಡೀ ವಿಶ್ವವೇ ಹಾಡಿ ಹೊಗಳುತ್ತದೆಯಲ್ಲಾ ....

ಮುತಾಲಿಕ್: ಬಹಳಷ್ಟು ಜನ ಅವರ ಖೋಟಾ ಜೀವನ ಚರಿತ್ರೆ ಓದಿದವರಾಗಿದ್ದಾರೆ. ಅದೆಲ್ಲ ಸುಳ್ಳಿನ ಸರಮಾಲೆ. ನೀವು ಅವನ ಚಿತ್ರಗಳನ್ನು ಗಮನಿಸಿದ್ದೀರಲ್ಲವೆ? ಇಬ್ಬರು ಯುವತಿಯರ ಹೆಗಲ ಮೇಲೆ ಕೈಹಾಕಿ ತಿರುಗುತ್ತಿದ್ದ........

ಪ್ರಶ್ನೆ: ಹಾಗಾದರೆ ಗಾಂಧೀಜಿಯವರನ್ನು ಮಹಾತ್ಮ ಎಂದು ಕರೆಯುವುದು? ಸ್ವಾತಂತ್ರ್ಯ ಸೇನಾನಿ ಎಂದು ಬಣ್ಣಿಸುವುದು.....?

ಮುತಾಲಿಕ್: ಅದೆಲ್ಲವೂ ಸುಳ್ಳು. ಗಾಂಧೀಜಿಯೊಬ್ಬರೇ ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲಿಲ್ಲ, ಸುಳ್ಳು ಸತ್ಯಾಗ್ರಹದ ಮೂಲಕ ಈ ದೇಶದಲ್ಲಿ ಇರುವ, ಯಾವತ್ತೂ ಇರುವ ಕರುಣೆಯ, ಅನುಕಂಪವನ್ನು ಉಪಯೋಗಿಸಿಕೊಂಡು ಬೆಳೆದ ಮನುಷ್ಯ......

(ಇಂತಹ ಉತ್ತರಗಳಿಂದ ಮುತಾಲಿಕನ ಅಜ್ಞಾನ ಮತ್ತು ಓದಿನ ಮಟ್ಟ ಎಷ್ಟು ಎಂದು ಗೊತ್ತಾಯಿತು. ಆದ್ದರಿಂದ ಗಾಂಧೀಜಿಯವರ ಕುರಿತು ಇನ್ನಷ್ಟು ಕೇಳುವುದು ಸರಿ ಅಲ್ಲ, ಅನ್ನಿಸಿ ಬೇರೆ ಪ್ರಶ್ನೆಗಳತ್ತ ಹೊರಳಿದೆ)

ಪ್ರಶ್ನೆ: ಗೋಹತ್ಯೆಯನ್ನು ನಿಮ್ಮ ಹಿಂದೂ ಸೇನಾ ವಿರೋಧಿಸುತ್ತದೆ ಏಕೆ?

ಮುತಾಲಿಕ್: ಗೋವುಗಳು ಈ ರಾಷ್ಟ್ರದ ಸಂಪತ್ತು; ನಮ್ಮದು ಕೃಷಿ ಪ್ರಧಾನವಾದ ದೇಶ. ಹಾಗಾಗಿ ಗೋವುಗಳ ಹತ್ಯೆಯನ್ನು ನಾವು ನಖಶಿಖಾಂತವಾಗಿ ವಿರೋಧಿಸುತ್ತೇವೆ.

ಪ್ರಶ್ನೆ: ಒಂದೆಡೆ ಗೋಹತ್ಯೆಯನ್ನು ವಿರೋಧಿಸುವ ನೀವು ಇನ್ನೊಂದೆಡೆ ಕುರಿ-ಕೋಣ-ಕೋಳಿಗಳ ಬಲಿಯನ್ನು ವಿರೋಧಿಸುವುದಿಲ್ಲವೇಕೆ?

ಮುತಾಲಿಕ್: ಅವು ತಿನ್ನಲಿಕ್ಕೆಂದೇ ಇರುವಂಥವುಗಳು. ಅವನ್ನು ಮಾಂಸ ತಿನ್ನುವವರೆಲ್ಲರೂ ತಿನ್ನಬೇಕು.

ಪ್ರಶ್ನೆ: ಆದರೆ ಮುಸ್ಲಿಂರು ಗೋವನ್ನು ತಿನ್ನುತ್ತಾರೆ ಎನ್ನುವ ಕಾರಣಕ್ಕಾಗಿಯೇ ನೀವು ಗೋಹತ್ಯೆಯನ್ನು ನಿಷೇಧಿಸಬೇಕೆಂದು ಹೇಳುವುದು ಎಷ್ಟು ಸರಿ?

ಮುತಾಲಿಕ್ :

....

ಪ್ರಶ್ನೆ: ನೀವು ತಿರುಗಿದ ಕಡೆಗಳಲ್ಲೆಲ್ಲ ಹಿಂದೂ-ಮುಸ್ಲಿಂ ಮನಸ್ಸುಗಳ ನಡುವೆ ಬೆಂಕಿ ಹಚ್ಚುವ ಕೆಲಸ ಮಾಡುತ್ತೀರಲ್ಲ?!

(ಈ ಪ್ರಶ್ನೆಯಿಂದ ಕೊಂಚ ವಿಚಲಿತನಾದಂತೆ ಮುತಾಲಿಕ್ ಕಂಡುಬಂದರೂ ಸಾವರಿಸಿಕೊಂಡು ತನ್ನ ಎಂದಿನ ಉದ್ವೇಗದಲ್ಲಿ ರೀತಿಯಲ್ಲಿ ಮಾತಾಡತೊಡಗಿದ)

ಮುತಾಲಿಕ್: ಹೌದು! ನಾನು ಬೆಂಕಿಹಚ್ಚುತ್ತೇನೆ. ಮುಸ್ಲಿಂ ಧರ್ಮಾಂಧತೆಯ ವಿರುದ್ಧ ನನ್ನ ಜನರನ್ನು ಸಂಘಟಿಸಿ ಅವರನ್ನು ಎತ್ತಿಕಟ್ಟುತ್ತೇನೆ. ಅವರೆಲ್ಲ ಬಹುತೇಕರು ಕೂಲಿಗಳು....

ಪ್ರಶ್ನೆ: ಹಿಂದೂಗಳನ್ನು ಸಂಘಟಿಸುವ ನೀವು, ಹಿಂದೂಗಳೆಂದರೆ ಎಲ್ಲರೂ ಒಂದೇ ಎನ್ನುವ ಬದಲು ಅದರಲ್ಲೂ ನೀವು ತಾರತಮ್ಯ ನೀತಿ ಅನುಸರಿಸುತ್ತೀರಿ, ಇದು ಎಷ್ಟು ಸರಿ?

ಮುತಾಲಿಕ್: ಇದನ್ನೂ ನಾನೂ ವಿರೋಧಿಸುತ್ತೇನೆ....... ಒಬ್ಬ ದಲಿತ ಬಾಗಿಲ ಹೊರಗೆ ನಿಂತು ಕೂಗುವುದನ್ನು, ಅದೇ ವೇಳೆಗೆ ನಾಯಿ, ಕೋಳಿ ಮುಂತಾದವು ನಮ್ಮ ಮನೆಯ ತುಂಬ ತಿರುಗುವ ದೃಶ್ಯವಿದೆಯಲ್ಲ.... ಅದು ಸರಿಯಲ್ಲ (ಎಂಬಂತಹ ತಲೆ ನೇವರಿಸುವ ಬ್ರಾಹ್ಮಣಿಕೆಯ ಉತ್ತರ ನೀಡಿದನೆ ಹೊರತು ಅವರುಗಳಿಗೆ ಯಾವ ರೀತಿಯಲ್ಲಿ ಸಮಾನತೆ ನೀಡಲಾಗುವುದು ಎಂಬುದರ ಬಗ್ಗೆ ಮಾತ್ರ ಎಂದಿನಂತೆ ಚಕಾರವೆತ್ತಲಿಲ್ಲ).

ಪ್ರಶ್ನೆ: ಹಿಂದೂಗಳ ಸಂಘಟನೆಯ ಮೂಲಕ ನೀವು ಮತ್ತದೇ ಪುರೋಹಿತಶಾಹಿ ವ್ಯವಸ್ಥೆಯನ್ನು ಪುನರಪಿ ತರಲು ಬಯಸುತ್ತೀರಲ್ಲವೇ?

ಮುತಾಲಿಕ್ : ಅದೆಲ್ಲ ಸುಳ್ಳು. ಕೆಲವು ಮೌಲ್ಯಗಳು ಮೊದಲಿನಿಂದಲೂ ಇವೆ. ಅವನ್ನು ಕಾಪಾಡಿಕೊಂಡು ಬರಬೇಕೆಂದು ಹೇಳುತ್ತೇನಷ್ಟೆ. ಅಗ್ನಿಹೋತ್ರಿ ಎಂಬ ನಿಯಮ ಅನುಸರಿಸಿದರೆ ಹೊಲದಲ್ಲಿಯ ಬೆಳೆಗಳೆಲ್ಲ ಚೆನ್ನಾಗಿ ಬರುತ್ತವೆ. ಮನೆಯ ಮುಂದೆ ಬೃಂದಾವನದಲ್ಲಿ ತುಳಸಿ ಗಿಡ ನೆಡುವುದರಿಂದಲೂ ಪರಿಸರಕ್ಕೆ ಲಾಭ ಇದೆ.

ಪ್ರಶ್ನೆ: ಹಾಗೇ ಮುಂದುವರೆದು ಯಜ್ಞಯಾಗಗಳಿಂದಲೂ ಪರಿಸರಕ್ಕೆ ಒಳ್ಳೆಯದಾಗುತ್ತದೆಯೇ?

ಮುತಾಲಿಕ್: ಹೌದು...... !

ಮುತಾಲಿಕ್‌ನ ಮೇಲಿನ ಉತ್ತರಗಳಿಂದ ನನಗೇನು ಆಶ್ಚರ್ಯವಾಗಲಿಲ್ಲ, ಬದಲಾಗಿ ಹಿಂದೂ ಸಂಘಟನೆಯ ನೆಪದಲ್ಲಿ ಮತ್ತದೆ ಮನುವಿನ ತಂತ್ರಗಳನ್ನು ನಮ್ಮೆಲ್ಲರ ತಲೆಯ ಮೇಲೆ ಸಾವಕಾಶವಾಗಿ ಹೇರುವ ತಂತ್ರಗಳು ನೆನಪಾದವು. ಈ 'ಮನುವಿನ ಮೊಮ್ಮಗನೊಂದಿಗೆ ಎಷ್ಟು ಮಾತಾಡಿದರೂ ಪ್ರಯೋಜನವಿಲ್ಲ ಎಂದು ಭಾವಿಸಿ ಆತನೊಂದಿಗಿನ ಮಾತನ್ನು ಅರ್ಧಕ್ಕೆ ತುಂಡರಿಸಿ ಎದ್ದು ಬಂದೆ.

■

ಇನ್ ದಿಸ್ ಟೈಂ ಐ ಲೈಕ್ ದ್ಯಾವೇಗೌಡ

ಅಷ್ಟೆಲ್ಲರೂ ಕುಮಾರಣ್ಣನಿಂದ ಎಡೂರಪ್ಪನಿಗೆ ಅಧಿಕಾರ ಹಸ್ತಾಂತರವಾಗುವ ಸುದ್ದಿಗಳನ್ನು ಮಾತಾಡಿ ಮಾತಾಡಿ ಸಾಕಾಗಿಹೋಗಿದ್ದರು. ತುಸು ಮೌನದ ನಂತರ ಶೀರ.

"ಪಾಪ ಎಡೂರಪ್ಪನ ಮುಖ ನೋಡಕ್ಕಾಗದಿಲ್ಲ ಕನೊ" ಎಂದ.

"ಗಂಡ ಸತ್ತ ಮುಂಡೆ ಮುಖಾಗ್ಯದೆ" ಎಂದಳು ಜುಮ್ಮಿ.

"ಹೆಡತಿ ಸತ್ತಾಗ್ಲು ಅವುನ ಮುಖ ಹಿಂಗಾಗಿರಲಿಲ್ಲ ಕನೆ" ಎಂದ ಉಗ್ರಿ.

ಬಯಲುಸೀಮೆಯ ಕಟ್ಟೆ ಪುರಾಣ

ಬಿ. ಚಂದ್ರೇಗೌಡ

"ಅವುನು ನನಗಿಂಗೆ ಮಾಡ್ತರೆ ಅಂತ ಅನ್ನಕಂಡಿರಲಿಲ್ಲ."

"ಆ ಗೋಣಿಕೊಪ್ಪಲ ರಾಮೇಗೌಡ ತಮ್ಮನಿಗೆ ಪಾಲು ಕೊಡ್ತಿನಿ ಅಂತ ಕಡಿಗೂ ಕೊಡಲಿಲ್ಲವಲ್ಲ ಅಂಗಾಯ್ತದು" ಎಂದ ಉಗ್ರಿ.

"ಅಂಗರೆ ಪಾಲು ಕೊಡ್ಳಿಲವೆ ಅವುನು?"

"ಇಲ್ಲ ಕನೊ ಶೀರ ಮಾವ, ಅಜ್ಜಪಾಲಿನ ಆಸ್ತಿಯು ಇದು, ನನ್ನ ಸ್ವಯಾರ್ಜಿತ ಅಂತ ಜಗಳ ತಕ್ಕಂಡು ಕುಂತ. ಯಾರೇಳಿದ್ರು ಕೇಳಿಲ್ಲ, ಕಡಿಗೆ ಊರ್ನಲ್ಲ ನ್ಯಾಯಕ್ಕೆ ಸೇರಿದಾಗ, ತಮ್ಮ ಮಾಡಬಾರದ್ದ ಮಾಡ್ತನೆ, ಅವುನಿಗೆ ಪಾಲು ಕೊಟ್ರೆ ಯಲ್ಲಾನು ಹಾಳು ಮಾಡ್ತನೆ, ಕೊಡಕ್ಕಾಗದಿಲ್ಲ ಅಂದ."

"ಅವುನ ಮಾತಿಗೆ ಊರಜನ ಸುಮ್ಮ ನಿದ್ದುದ್ವೇಳೂ."

"ಊರ ಜನಕೆ ಕುಡಿಸಿ ತಿನ್ನಿಸಿ, ಮದ್ದೆ ವಳಿಕಾಯ್ಕಂಡಿದ್ದ. ಆ ಬಡ್ಡೆತ್ತವು ಅಣ್ಣೇಳಿ ದಂಗೆ ಕೇಳಿಕಂಡು ಇರಕ್ಕೇನಾಗ್ಯದೆ ತಮ್ಮನಿಗೆ ಅಂತ ಬುದ್ಧಿ ಹೇಳಿದ್ರು. ಅವುನು ಅತ್ತಗಂಡು ಕರಕಂಡು ಸುಮ್ಮನಾದ" ಎಂದ ಉಗ್ರಿ.

"ಈಗೇಡೂರಪ್ಪುಂದು ಅಲ್ಲಿಗೆ ಬತ್ತಾ ಅದಲ್ಲ ಹೇಳು" ಎಂದ ಕಾಳಮಾವ.

"ಸುಳಿಗೆ ದೋಣಿ ಸಿಲುಕಿದಾಗ ಬದುಕಿ ಬರಲು ಸಾಧ್ಯವೇ. ಸುಳಿಗೆ ದೊ....."


"ನೋಡು, ಇವುನು ಸುಮಾನವ. ಪದ ಹೇಳಿಕಂಡು ಬತ್ತನೆ ಅಂಗೆಯ" ಎಂದು ಜುಮ್ಮಿ ವಾಟಿಸ್ಸೆಯನ್ನು ಮೂದಲಿಸಿದಳು.

"ಎಡೂರಪ್ಪನ್ನ ನ್ಯನಿಸಿಗಂಡು ಪದ ಹೇಳಿದೆ ಕಣಕ್ಕ."

"ಅಂಗರವುನ ಕತೆ ಮುಗದಂಗೆ ಅನ್ನು?"

"ಶೀರ ಏನೂ ಇಲ್ದಂಗೆ ಮುಗಿತಾಯಿತ್ತು. ದ್ಯಾವೇಗೌಡ್ರು ಮನಸು ಮಾಡ್ಯಾಗಿ ಉಪಮುಖ್ಯಮಂತ್ರಿಯಾಗಿ ಫೈನಾನ್ಸ್ ಮಿನಿಸ್ಟ್ರಾಗಿ, ಫೈನಾನ್ಸ್ ಮಾಡಿಕಂಡು ಮನಿಗೊಯ್ತಾ ಅವುನೆ ಕಣಕ್ಕ. ಇನ್ ದಿಸ್ ಟೈಂ ಐ ಲೈಕ್ ದ್ಯಾವೇಗೌಡ."

"ತಗಳಪ್ಪ, ದ್ಯಾವೇಗೌಡ ಅಂದ್ರೆ ಬೈತಿದ್ಯೋನು



ಈಗವುನ್ನೆ ಮೆಚ್ಚಗತ್ತಾ ಅವುನೆ" ಎಂದ ಉಗ್ರಿ.

"ನಾನು ಮೆಚ್ಚೊ ಕಾರಣಗಳೆ ಬ್ಯಾರೆ ಕಣೊ ಉಗ್ರೀ."

"ಯಾವ ಕಾರಣನಪ್ಪ?"

"ಲಿಂಗಾಯಿತರಂತ ಬಿಗ್ ಸಮಾಜದ ಜನಗಳು, ಜಗದ್ಗುರುಗಳು, ಜಂಗಮಯ್ಯಗಳು, ಸುಡುಗಾ... ಸಿದ್ವರ್ನಲ್ಲ ಎಡೂರಪ್ಪನಿಗೆ ಅಧಿಕಾರ ಕೊಡ್ಲಿಲ್ಲ ಅಂ... ನಾವು ಸುಮ್ಮನಿರದಿಲ್ಲ ಬೀದಿಗಿಳೀತಿವಿ ಅಂತ ಗುಟು... ಕಿದ್ರು. ಅದುಕೂ ಕೇರ್ ಮಾಡದೆ ಎಡೂರಪ್ಪನ್ನ ... ಎಡೂರತ್ತಕೆ ಯಸ್ಸನಲ್ಲ ಅದ್ನೆ."

"ಎಡೂರಪ್ಪೇನೊ ಎಡೂ... ಬಂದಿದ್ನಂತೆ" ಎಂದಳು ಜಮ್ಮಿ.

"ಊ ಎಡೂರಿಗೆ ಬಂದು ... ಕೈಲಿ ಹೂವಿನಾರ ಹಾಕಿಸಿಗಂ... ಏನೂ ಪ್ರಯೋಜನಾಗಲಿಲ್ಲ... ಹೇಳು" ಎಂದ ಉಗ್ರಿ. ಆಗ ವಾಟ...

"ಆಮ್ಯಾಲೆ ಇನ್ನೆಂದೇನಪ್ಪ ಅಂ... ಈ ಬಿಜೆಪಿ ಬಡ್ಡೆತ್ತವು ಅಲ್ಪ... ಐಶ್ವರ್ಯ ಬಂದ್ರ ಅರ್ಧ ರಾತಿ... ಕ್ವಡೆ ಹಿಡಿದ ಅನ್ನಂಗೆ ಮಾಡಿದ... ಇನ್ನೇನಾರ ಎಡೂರಪ್ಪ ಮು... ಮಂತ್ರಿಯಾದ್ರೆ ಕತಿಯೇನೂ ಅನ್ನ... ಆಡತಿದ್ರು. ಇವುರಿಗ್ಯಲ್ಲ ದೇವೇಗೌ... ಸರಿಯಾಗಿ ಮಾಡಿದ."

"ಮುಂದೇನೂ?"

"ಯಲಕ್ಸನ್ನು."

"ಯಲಕ್ಸನ್ನಿಗೆ ಅಂತ ದ್ಯಾವೇಗೌಡ ಬಾಸ... ಮಾಡಕ್ಕೋದ್ರೆ ಅವುರು ಗಲಾಟ ಮಾಡದಿಲವೆ?"

"ದ್ಯಾವೇಗೌಡ್ರು ಸಬೆಲಿ ಗಲಾಟ ಮಾಡೋ ಬಿ... ಯಾರಿಗಿದ್ದವಕ್ಕ? ಅಂಗೇನಾರ ಮಾಡಿದ್ರು ಅ... ಬಿಜೆಪಿಗಳ ಸಭೆ ಎಲ್ಲೂ ನ್ಯಡಿದಂಗೆ ಮಾಡ್ತನೆ ಗೊತ್ತಾ...

ಅರ್ಧ ಅಧಿಕಾರಕ್ಕೇ ಅರ್ಧ ಚಂದ್ರ ಆದರೆ...

ಈ ಹಾಳಾದ ಗಾಂಧಿ ಅನ್ನುವ ಮನುಷ್ಯ ಅಕ್ಟೋಬರ್ ಎರಡನೇ ತಾರೀಖು ಹುಟ್ಟಿ ಜನರಿಗೆ ಕೊಡಬಾರದ ಕಿರುಕುಳ ನೀಡುತ್ತಾ ಇದ್ದಾನೆ. ಬದುಕಿದ್ದಾಗ ಐದು ಬಾರಿ ಆತನ ಹೆಸರು ನೊಬೆಲ್ ಶಾಂತಿ ಬಹುಮಾನಕ್ಕೆ ಪ್ರಸ್ತಾಪಿಸಲಾಯಿತಂತೆ. ಆದರೆ 'ಆತ ಪೂರ್ಣ ಪ್ರಮಾಣದ ರಾಜಕಾರಣಿಯೂ ಅಲ್ಲ, ಮಾನವೀಯ ಮೌಲ್ಯಗಳಿಗಾಗಿ ಹೋರಾಡಿದವನೂ ಅಲ್ಲ' ಎಂದು ಪ್ರಶಸ್ತಿ ನಿರಾಕರಿಸಲಾಯಿತಂತೆ. 1948 ರಲ್ಲಿ ಕೊನೆಯ ಸಲ ಮತ್ತೆ ಪ್ರಸ್ತಾಪಕ್ಕೆ ಬಂತಂತೆ. ಆದರೆ ಆಪಾಯಿ ಆ ವರ್ಷದ ಜನವರಿ ಮುವತ್ತರಂದೇ ಗುಂಡಿಗೆ ಬಲಿಯಾಗಿದ್ದ. ನೊಬೆಲ್ ಪ್ರಶಸ್ತಿ ದಕ್ಕಿಸಿ ಕೊಳ್ಳಬೇಕು ಅಂತ ಇದ್ದರೆ ಒಂದೆರಡು ದಿನ ತಡವಾಗಿ ಹೇರಾಮ್ ಅನ್ನಬೇಕಿತ್ತು! ಯಾಕೆ ಅಂದರೆ ಅಂದಿನ ನೊಬೆಲ್ ಪ್ರಶಸ್ತಿ ನಿಯಮದಂತೆ ಫೆಬ್ರವರಿ ಒಂದರಂದು ಜೀವಂತವಿದ್ದವರಿಗೆ ಮಾತ್ರ ಆ ವರ್ಷದ ಪ್ರಶಸ್ತಿ ನೀಡಬಹುದಾಗಿತ್ತು! ಹೀಗಾಗಿ ವಿಶ್ವಶಾಂತಿ ಪ್ರಶಸ್ತಿ ಪಡೆದವರ ಪ್ರತಿಮೆಗಳ ಸಾಲಿನಲ್ಲಿ ಗಾಂಧೀಜಿ ಜೀವನದಿಂದ ಪ್ರಭಾವಿತರಾದ ಹಲವು ಖ್ಯಾತರ ಪ್ರತಿಮೆಗಳಿದ್ದರೂ ಅವರ ಪ್ರತಿಮೆಗೆ ಮಾತ್ರ ನೊಬೆಲ್ ಮ್ಯೂಸಿಯಂನಲ್ಲಿ ಸ್ಥಾನವಿಲ್ಲವಾಗಿದೆಯಂತೆ! ಈ ಅಪಚಾರದಿಂದ ನೊಂದಿರುವ ನೊಬೆಲ್ ಪ್ರತಿಷ್ಠಾನ ಇದನ್ನು ಸರಿತೂಗಿಸಲು ಅವರ ಜನ್ಮದಿನವನ್ನು 'ವಿಶ್ವ ಅಹಿಂಸಾ ದಿನ'ವನ್ನಾಗಿ ಆಚರಿಸಲು ತೀರ್ಮಾನಿಸಿತು.



ಇಲ್ಲಿಯವರೆಗೆ ಎಲ್ಲವೂ ಸರಿಯಾಗಿತ್ತು. ಈ ವರ್ಷದಿಂದ 'ವಿಶ್ವ ಅಹಿಂಸಾ ದಿನ' ಆಗಬೇಕಿತ್ತು. ಗಾಂಧೀಜಿ ಹುಟ್ಟಿದ ನಾಡಿನಿಂದ ಯಾರಾದರೂ ಪ್ರತಿನಿಧಿಸಬೇಕಲ್ಲ, ಸೋನಿಯಾ ಗಾಂಧಿ ಭಾರತವನ್ನು ಪ್ರತಿನಿಧಿಸಿದರು. ಅಮೆರಿಕದ ಕೆಲವು ಸ್ವಯಂ ಘೋಷಿತ ಬು(ಲ)ದ್ಧಿ ಜೀವಿಗಳಿಗೆ ಇಟಲಿ ಭೂತ ಕಾಡಿರಬೇಕು. ವಿಶ್ವಸಂಸ್ಥೆ ಎದುರು ಪ್ರತಿಭಟಿಸಿದರು. ಭಾರತದ ಸಾಸವನ್ನು ಅಲ್ಲಿ ಹರಾಜು ಹಾಕುವುದೇ ಅವರ ...ಬಿಜೆಪಿ ಕೆಲಸ ಇರಬೇಕು! ... ಇಂತಹ ಪ್ರತಿಭಟನೆ ನಡೆದರೆ ಭಾರತದಲ್ಲಿ ಸೋನಿಯಾ ಗಾಂಧಿ ತನ್ನ ಹೆಸರಿನಿಂದ ಗಾಂಧಿಗೆ ತಿಲಾಂಜಲಿ ನೀಡಲಿ ಎಂದು ಭಾರತೀಯ ಜನತಾ ಪಕ್ಷದ ರಾಷ್ಟ್ರಾಧ್ಯಕ್ಷ ರಾಜನಾಥ ಸಿಂಗ್‌ಜೀ ಮಹಾತ್ಮರು ಫರ್ಮಾನು ಹೊರಡಿಸಿದರು!

ಇಂತಹ ಫರ್ಮಾನಿಗೆ ಯಾವುದಾದರೂ ಬಲವತ್ತರವಾದ ಕಾರಣ ಇರಬೇಕಲ್ಲ? ಇದೆ! ವಿಶ್ವ ಸಂಸ್ಥೆಯಲ್ಲಿ ಸೋನಿಯಾ ಗಾಂಧಿ ಹೇಳಿದ್ದೇನು? ಗಾಂಧೀಜಿಯವರ ಚಿಂತನೆಗಳು ಇಂದಿಗೂ ಪ್ರಸ್ತುತ.

ಅಂದರೆ ಗಾಂಧೀಜಿಯನ್ನು ಆಕೆ ಒಪ್ಪಿಕೊಂಡ ಹಾಗೆ ಆಯಿತು. ಅಂದಮೇಲೆ ಇದು ಹೊಡೆದು ಹಾಕಿರುವುದರ ಬದಲು ಮರ್ಯಾದಾ ಪುರುಷೋತ್ತಮ ಶ್ರೀರಾಮನನ್ನೂ ಒಪ್ಪಿಕೊಂಡ ಹಾಗಾಯಿತು!

ಏನಿದು ವಿತರ್ಕ?

ವಿತರ್ಕ ಅಲ್ಲ, ಗಾಂಧೀಜಿ ಬಯಸಿದ್ದು 'ರಾಮರಾಜ್ಯ'. ಶ್ರೀರಾಮನೇ ಇಲ್ಲವೆಂದ ಮೇಲೆ ಗಾಂಧೀಜಿಯ ಕಲ್ಪನೆಯ 'ರಾಮರಾಜ್ಯ' ಸುಳ್ಳು ಅಂದರೆ ರಾಮ ಐತಿಹಾಸಿಕ ವ್ಯಕ್ತಿ ಎಂದಾಯಿತು!

ಹಾಗಾದರೆ ಸುಳ್ಳು ಹೇಳುತ್ತಿರುವವರು ಯಾರು?

ಸೋನಿಯಾ ಗಾಂಧಿ!

ಗಾಂಧೀಜಿಯ ಹೆಸರನ್ನು ಇಟ್ಟುಕೊಳ್ಳಲು ಆಕೆಗೆ ಅರ್ಹತೆ ಇಲ್ಲ, ಆಕೆ ಮಾತ್ರ ಅಲ್ಲ, ಆಕೆಯ ಮಕ್ಕಳೂ ಗಾಂಧಿ ಹೆಸರನ್ನು ಕಿತ್ತು ಬಿಸಾಕಬೇಕು!

ಉತ್ತರದಿಂದ ದಕ್ಷಿಣಕ್ಕೆ ಬರೋಣವಂತೆ.

'ತಮಿಳುನಾಡು ಬಂದ್' ಘೋಷಿಸಿತು ಸರ್ಕಾರ.

ಸೇತು ಸಮುದ್ರಂ ಯೋಜನೆ ಶೀಘ್ರ ಜಾರಿಗೆ ಒತ್ತಾಯಿಸಿಯಂತೆ ಈ ಬಂದ್.

ಬಂದ್ ಎಂದರೆ ಜನಜೀವನ ಅಸ್ತವ್ಯಸ್ತ; ನಷ್ಟ, ಸಾವು, ನೋವು ಎಲ್ಲ ಕಾಣಿಸಿತು ಜಯಲಲಿತಾಗೆ! ಬಂದ್ ವಿರುದ್ಧ ಸುಪ್ರೀಂಕೋರ್ಟಿಗೆ ಮೊರೆ ಹೋದರು. ಸುಮ್ಮನೆ ಹೇಳಬಾರದು. ಸುಪ್ರೀಂಕೋರ್ಟ್ ನ್ಯಾಯಾಧೀಶರುಗಳಿಗೆ ಜನರ ಕುರಿತು ಏನು ಕಾಳಜಿ ಅಂತೀರಿ. ಜಯಲಲಿತಾರ ಭಾವನೆ ಅರ್ಥ ಮಾಡಿಕೊಂಡರು. ಭಾನುವಾರ ರಜಾ ದಿನ ಅಲ್ಲವಾ. ಆದರೂ ಕೋರ್ಟಿಗೆ ಬಂದರು. ಬಂದ್ ನಿಲ್ಲಿಸುವಂತೆ ಆಜ್ಞೆ ಹೊರಡಿಸಿದರು! ಹೀಗೆ ಸಾಮೂಹಿಕವಾಗಿ ಜನರಿಗೆ ತೊಂದರೆ ಯಾದಾಗಲೆಲ್ಲ ಸುಪ್ರೀಂಕೋರ್ಟ್ ಇದೇರೀತಿ ಮಾಡದಿರಬಹುದು. ಅವರೂ ಸಮಯ ಸಂದರ್ಭ ನೋಡುತ್ತಾರೆ!

ಏನು ಮಾಡಬೇಕು ಕರುಣಾನಿಧಿ?

ಗಾಂಧಿ ಹಿಡಿದುಕೊಂಡರು! ಬಂದ್ ಕರೆ ಇದ್ದದ್ದೂ ಅಕ್ಟೋಬರ್ ಎರಡಕ್ಕೆ ಅಲ್ವಾ ಅದಕ್ಕೆ! 'ನಾವು ಬಂದ್ ಮಾಡಲ್ಲ, ಉಪವಾಸ ಕುಂತ್ಕಳ್ತೀವಿ' ಅಂದ್ರು. ಸುಪ್ರೀಂಕೋರ್ಟು ಅದಕ್ಕೂ ಅಡ್ಡ ಬಂತು. ನಮ್ಮ ಆದೇಶ ಮೀರಿ ನಡೆದರೆ ಸರ್ಕಾರ ವಜ ಮಾಡಲು ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕಾಗುತ್ತದೆ ಎಂದು ಧಮಕಿ ಹಾಕಿತು. ಪಾಪ ಕರುಣಾನಿಧಿ ಸಾಹೇಬರು ಬೆಳಗಿನ ತಿಂಡಿ ವೇಳೆಗೆ ಉಪವಾಸ ಕುಂತವರು, ಕಾಫಿ ವೇಳೆಗೆ ಅಂದರೆ ಬೆಳಗಿನ 11.30 ಕ್ಕೆಲ್ಲ ಗಂಟುಮೂಟೆ ಕಟ್ಟಬೇಕಾಯಿತು! ಅಲ್ಲ, ಸುಪ್ರೀಂಕೋರ್ಟು ಪ್ರತಿಯೊಂದಕ್ಕೂ ಹೀಗೆ ತಲೆ ಹಾಕುತ್ತಾ ಹೋದರೆ ದೇಶದ ಆಡಳಿತಾನೆ ಅವರು ಕೈಗೆ ತೆಗೆದುಕೊಳ್ಳಬಹುದಾ ಅಂತ!

ಇರಲಿ. ಇನ್ನು ಮಹಿಷೂರ ನಾಡಿಗೆ ಬರೋ... ವಂತೆ. ಇಲ್ಲಿನ ಶಿವಮೊಗ್ಗ ಹಿಂದೆ ಸಾಂಸ್ಕೃತಿಕ ಕೇಂ... ಆಗಿತ್ತು. ಈಗ ಭಜರಂಗಿಗಳ ಕೇಂದ್ರ ಆಗಿದೆ. ಇತ್ತೀಚೆ... ನಡೆದ ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯ... ಇಲ್ಲಿ ಭಾಜಪದ ಕೇಸರಿ ಬಾವುಟವೇ ಎಲ್ಲೆಲ... ಮೆರೆಯುವಂತಾಯಿತಲ್ಲ. ಈಗ ನಗರಸಭೆ ಅಧ್ಯ... ಸ್ಥಾನಕ್ಕೆ ಕೇಸರಿಗಳ ಕಚ್ಚಾಟ ಪ್ರಾರಂಭ ಆಗಿದೆಯಂ... ಕೇವಲ ರಾಜ್ಯಮಟ್ಟದ ನಾಯಕರನ್ನೇ ನಂಬಿಕೊಂಡ... ಮಣ್ಣು ಮುಕ್ಕೋದು ಖಾತರಿ ಅಂದುಕೊಂಡೋ... ಏನೋ ಹಣ, ಹೆಂಡ, ಬಾಡುಗಳ ಜೊತೆ...

ಅಣಕ

ಎಚ್.ಎಲ್. ಕೇಶವಮೂರ್ತಿ

ಬಾಹುಶಕ್ತಿಯನ್ನೂ ಪ್ರದರ್ಶಿಸಲು ಮುಂದಾಗಿದ್ದಾರಂತೆ... ಆದಷ್ಟು ಬೇಗ ಸದಸ್ಯರನ್ನು ಕೌಚಾಕ ಬೇಕು ಅಂ... ಹಾತೊರೆಯುತ್ತಿರುವ ಧುರೀಣರಿಗೆ ಆ ದಿವಸ ... ದಿವಸ ಅಂತ ದಿನಾ ಮುಂದೂಡಿದರೆ ಅಪಾಯ... ಕಟ್ಟಿಟ್ಟ ಬುತ್ತಿ. ಅದಕ್ಕೇ ಏನೋ ತನ್ನ ಅಣ್ಣನನ್ನು... ನಂಬಿ ಕುಳಿತರೆ ಗಂಗಮ್ಮನ ಪಾಲೇ ಗತಿ ಎಂದು... ಕೆ.ಎಸ್. ವಿಶ್ವರಪ್ಪನವರ ತಮ್ಮ ಕೆ.ಎಸ್. ಗಂಗಾಧರ್... ದೇವರ ಪೂಜೆ ನೆಪದಲ್ಲಿ ಹೆಂಡ ಹರಿಸಿದರಂತೆ; ಬಾಡ... ಚೆಲ್ಲಾಡಿದರಂತೆ. ಅವತ್ತೇ ಗಾಂಧಿ ಜಯಂತಿ ಆಗ್ಬೇಕಾ... ಇದನ್ನೇ ದೊಡ್ಡ ಅಪರಾಧ ಅನ್ನೋ ಹಾಗೆ ಯಾವುದೋ... ಟಿವಿ ಚಾನೆಲ್‌ನವರು ತೋರಿಸಿ ಅವಮಾನ ಮಾಡಬೇಕ... 'ಅವತ್ತು ಈ ರೀತಿ ಹೆಂಡ, ಖಂಡ ಹಂಚೋದು... ತರವೇನ್ರಿ' ಅಂತ ಕೇಳಿದರೆ ಗಂಗಾಧರ್ 'ಯಾವೋ... ಗಾಂಧಿ, ನಾವೇ ಅಲ್ಲವೇನ್ರಿ ಅವನ್ನ ಕೊಲೆ ಮಾಡಿದ್ದು... ಅಂತಾರೋ ಅಥವಾ 'ಅಧಿಕಾರಕ್ಕೆ ಬರೋ ಕಷ್ಟ ... ನನ್ ಮಕ್ಳಿಗೆ ಹೇಗ್ರಿ ತಿಳಿಯುತ್ತೆ' ಅಂತ ರೇಗ್ತಾರೋ... ಗೊತ್ತಿಲ್ಲ.

ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆ ಅಂದಾ... ಒಂದು ಮಾತು.

ಕಾಂಗ್ರೆಸ್‌ನವರು ಬಿದ್ದರೂ ಮೀಸೆ ಮಣ್ಣೇ ಆಗಿಲ್ಲ... ಅಂತಾರೆ.

"ಅದು ನಿಜ ಕಣೋ. ಅವುರದೊಂದೇಟು ಅಂದ್ರೆ ಇವುರವು ಯರಡೇಟು ಬೀಳ್ತವೆ" ಎಂದ ಉಗ್ರಿ.

"ಯರಡೇಟ್ಯಾವುಲ್ಲ?"

"ಕಾಂಗ್ರೆಸ್‌ನೋರ ಕೈಯಿಂದ್ಲೂ ಮಡುಸ್ತನೆ. ನೋಡಾಗ್ಲೆ ಬಂಗಾರಪ್ಪನ್ನ ನೀನು ಕಾಂಗ್ರೆಸ್ಸಿಗೋಗು ಅಂದವುನೆ ದ್ಯಾವೇಗೌಡ. ಆ ಬಂಗಾರಪ್ಪ ಕುಮಾರಣ್ಣನಿಗೆ ಭಾವಿದ್ದಂಗೆ. ಅವುನು ಬಿಜೆಪಿಗಳಿಗೆ ಮುಟ್ನ ನೋಡಿ ಕಳಂಗೆ ಕೊಡ್ತನೆ ಗೊತ್ತೆ?" ಎಂದ ವಾಟಿಸ್ನೆ.

"ನಿಜ ಕಣೊ ವಾಟಿಸ್ನೆ. ಆಗೊಂದಸತಿ ಬಂಗಾರಿ, ಈ ಎಡೂರ, ಈಶ್ವರ ಇಬ್ರೂ ವಿಧಾನಸಭೆವಳಿಕೆ ಬರದಂಗೆ ಮಾಡಿ ಎಸ್ಸೆಂ ಕಿಸ್ನನಿಗೆ ವಿರೋಧ ಪಕ್ಷದ ತೊಂದ್ರೆನೆ ಇಲ್ದಂಗೆ ಮಾಡಿದ್ದ" ಎಂದ ಉಗ್ರಿ.

"ಅಂಗರೀಗ ದ್ಯಾವೇಗೌಡ್ನು ಬಂಗಾರಪ್ಪನೂ ಒಂದಾದರೇ?" ಎಂದ ಸೀರ.

"ಒಂದಾಗಕ್ಕೆ ಅವುರ್‍ಯಾವತ್ತು ಬ್ಯಾರೆ ಇದ್ರು, ಚಗಪ್ಪ, ವಳಗ್ವಳಗೆ ಚನ್ನಾಗೆ ಅವುರೆ."

"ಅಂಗರೆ ಮುಂದ್ಲು ರಾಜಕಾರಣ ಬಾರಿ ಮಜವಾಗಿರತದೆ ಅಲವೆ?"

"ಮಜ ಅಂತ ಕೇಳ್ತಿಯಾ, ಇಡೀ ಕರ್ನಾಟಕದ ದೆವ್ವದಾನ್ನಿ ನೋಡಿದಂಗಾಯ್ತದೆ."

"ಈ ಕಾಂಗ್ರೆಸ್ಸಿನವು ಸುಮ್ಮನವಲ್ಲಾ ಯಾಕೆ?" ಎಂದ ಕಾಳಮಾವ.

"ಅವು ಸುಮ್ಮನಿಲ್ಲ ದ್ವಡಪ್ಪ. ಆ ಧರಮಸಿಂಗ ಅನ್ನೊನಾಗ್ಲೆ ದ್ಯಾವೇಗೌಡ್ರು ಕಂಡ್ರೆ ನನಿಗೆ ತುಂಬಾ ಇಷ್ಟ ಅನ್ನಂಗೆ ಮಾತಾಡ್ತ ಅವುನೆ. ಇದಕೇನೇಳ್ತೀ?"

"ಅವುನಿಗಿನ್ನೂ ಬುದ್ಧಿ ಬಂದಿಲವೆ?"

"ಇವುರಿಗ್ಯಲ್ಲ ಬುದ್ಧಿ ಬರದು ಮಣ್ಣಿಗೋದಾಗ್ಲೆ ಕಂಡ್ಯ."

ಜೆಡಿಎಸ್‌ನವರು ಅದ್ಭುತ ಸಾಧನೆ ನಮ್ಮದು ಅಂತಾರೆ.

ಬಿಜೆಪಿ ಭಯಂಕರ ಗೆಲುವು ಗಳಿಸಿದ್ದೀವಿ ಅಂತಾರೆ.

ಹಾಗಾದರೆ ಸೋತವರು ಯಾರು?

ಮಹಾ ಜನತೆ! ಯಾಕೆ ಅಂದರೆ ಕೋಮುವಾದಿ ಪಕ್ಷ ಬೇಡವೇ ಬೇಡ ಅಂತ ಮತ ಚಲಾಯಿಸಿದರೆ ಜಾತ್ಯತೀತ ಪಕ್ಷ ಅನ್ನಿಸಿಕೊಂಡದ್ದು ಅವರ ಜೊತೆ ಸೇರಿ ಅಧಿಕಾರ ಹಿಡಿಯುತ್ತೆ! ಗುಲಾಮಗಿರಿ ಹೇರುವ ಕಾಂಗ್ರೆಸ್ ಪಕ್ಷ ತೊಲಗಲಿ ಅಂತ ಮತ ನೀಡಿದರೆ ಅದು ಇನ್ಯಾವುದೋ ಪಕ್ಷದ ಜೊತೆ ಸೇರಿ ಗೆಲುವಿನ ನಗು ಬೀರುತ್ತೆ! ಮತದಾರನ ಆಶಯಕ್ಕೆ ಕವಡೆಯ ಕಿಮ್ಮತ್ತು ಇಲ್ಲ!

ಯಾವುದೋ ಟಿವಿ ಚಾನೆಲ್ಲು ಅದ್ಯಾವುದೋ ಊರಿನ ನಗರಸಭೆಗೆ ಪಾತಕಿಯೊಬ್ಬ ಆಯ್ಕೆ ಆಗಿದ್ದಾನೆ ಅಂತ ಅದೇನೋ ಹೊಸ ಸುದ್ದಿ ಅನ್ನುವ ಹಾಗೆ ಪ್ರಸಾರ ಮಾಡಿತು. ಬುದ್ಧಿ ಇದೆಯೇನ್ರಿ ಅವರಿಗೆ. ಯಾವುದೇ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿ ಮಾಹಿತಿ ಸಂಗ್ರಹಿಸಿ. ಬಾಹುಬಲಿಗಳು ಇದ್ದೇ ಇರ್ತಾರೆ. ಪಾತಕಿಗಳಿಗೆ ಮತದಾರ ಮಹಾಪ್ರಭು 'ಸಜ್ಜನ' ಮುದ್ರೆ ಒತ್ತಿರುತ್ತಾನೆ! ಆ ಸಂಸ್ಥೆ ಅವರ ಕಪಿಮುಷ್ಟಿಯಲ್ಲಿರುತ್ತೆ! ಯಾರೇ ಅಧ್ಯಕ್ಷರಾಗಲಿ ಅಲ್ಲಿ ನಡೆಯುವುದು ಮಾತ್ರ ಇಂತಹವರ ಮಾತೆ! ಪಾಪ ಅಧ್ಯಕ್ಷರೂ ಬದುಕುಳಿಯ ಬೇಕು ನೋಡಿ! ಇಷ್ಟೇ ಏನು, ಇನ್ನೂ ನೋಡುತ್ತಿರಿ. ಕ್ಷೇತ್ರ ಪುನರ್ವಿಂಗಡಣೆ ಆಗಿದೆ. ಅದರಲ್ಲಿ ಸಿಂಹಪಾಲು ಬಾಹುಬಲಿಗಳಿಗೆ. ಕುಲದೀಪ ಸಿಂಗ್ ನೀಡಿರುವ ವರ ಇದು! ನಮ್ಮ ಭಾವಿ ಶಾಸಕರುಗಳಲ್ಲಿ ಬಹುಪಾಲು ಗೌರವಾನ್ವಿತ ಬಾಹುಬಲಿಗಳೇ! ಇಂತಹವರ ಬೆಂಬಲಕ್ಕೆ ನಾಯಕರೂ ಇರುತ್ತಾರೆ. ಬಳ್ಳಾರಿಯಲ್ಲಿನ ಕೊಲೆ ಆರೋಪ, ಪ್ರತ್ಯಾರೋಪಕ್ಕೆ ಭಾಜಪ ರಾಜ್ಯ ಅಧ್ಯಕ್ಷ ಡಿ.ವಿ. ಸದಾನಂದಗೌಡ 'ಚುನಾವಣೆಗಳಲ್ಲಿ ಕೊಲೆ, ಗಲಾಟೆ ಇಂತಹವೆಲ್ಲ ಸಾಮಾನ್ಯ' ಎಂದು ಸಾರಿದ್ದಾರಲ್ಲ!

ಕೊಲೆ, ಗಲಾಟೇನೆ ಸಾಮಾನ್ಯ ಅನ್ನೋ ಅಧ್ಯಕ್ಷರಿರುವ ಪಕ್ಷ ಒಂದು ವೇಳೆ ಅಧಿಕಾರಕ್ಕೆ ಬಂದರೆ ಏನಾಗಬಹುದು?

ಗಾಂಧಿ ಜಯಂತಿ ಇರಲ್ಲ!

ಏನು ಇದಕ್ಕೆ ನಿದರ್ಶನ?

ಈ ವರ್ಷ ಗಾಂಧಿ ಅರ್ಥಶಾಸ್ತ್ರ ಅನುಸರಿಸುತ್ತೀವಿ ಎಂದು ಹೇಳಿಕೊಂಡು ತಿರುಗುತ್ತಿರುವ ಭಾರತೀಯ ಜನತಾ ಪಕ್ಷ ಗಾಂಧಿ ಜಯಂತಿ ಆಚರಿಸಿದ್ದು ಎಲ್ಲೂ ಕಾಣಲಿಲ್ಲ!

ಅರ್ಧ ಅಧಿಕಾರಕ್ಕೇ ಗಾಂಧೀಜಿಗೆ ಅರ್ಧಚಂದ್ರ ಪ್ರಯೋಗ ಮಾಡಿದವರು ಪೂರ್ಣ ಅಧಿಕಾರ ಸಿಕ್ಕಿದರೆ ಏನು ಮಾಡಬಹುದು....!

ಕಾಂಗ್ರೆಸ್ ವಿಷಬೀಜಗಳು

ಮರೆಯುವ ಮುನ್ನ



■ ಪಿ. ಲಂಕೇಶ್ -ಏಪ್ರಿಲ್ 9, 1989

"ಕಾಂಗ್ರೆಸ್ ಪಕ್ಷ ಶ್ರೀಮಂತ ವರ್ತಕರ ಕೈಯಲ್ಲಿರುವುದಾಗಿ ನಿಮ್ಮ ಆಶ್ರಮವನ್ನು ಕೂಡ ಅವರ ಹಣವೇ ನಡೆಸುತ್ತಿರುವುದಾಗಿ ಆಪಾದಿಸುವವರಿದ್ದಾರೆ. ಇದರಲ್ಲೇನಾದರೂ ಸತ್ಯಾಂಶವಿದೆಯೇ?" ಎಂದು ಲೂಯಿ ಫಿಶರ್ ಗಾಂಧೀಜಿಯನ್ನು ಕೇಳಿದರು.


"ದುರದೃಷ್ಟವಶಾತ್ ಅದು ಪೂರ್ತಿ ಸತ್ಯ. ಕಾಂಗ್ರೆಸ್‌ನಲ್ಲಿ ಆ ಥರ ಚಟುವಟಿಕೆಗಳಿಗೆ ದುಡ್ಡಿಲ್ಲ. ಮೊದಮೊದಲು ನಾವು ಪ್ರತಿಯೊಬ್ಬ ಸದಸ್ಯನಿಂದ ವರ್ಷಕ್ಕೆ ನಾಲ್ಕಾಣೆಯಂತೆ (25 ಪೈಸೆ) ಸಂಗ್ರಹಿಸಲು ಯತ್ನಿಸಿದೆವು. ಅದರಿಂದ ಹಣ ಬರಲೇ ಇಲ್ಲ."

"ಕಾಂಗ್ರೆಸ್ ಆಯವ್ಯಯದ ಎಷ್ಟು ಭಾಗ ಶ್ರೀಮಂತರಿಂದ ಭರಿಸಲಾಗುತ್ತಿದೆ?"

"ಪೂರ್ತಿ" ಅಂದರು ಗಾಂಧಿ.

ಅಷ್ಟೇ ಅಲ್ಲ, ಸಾಬರ್‌ಮತಿ ಆಶ್ರಮದ ನೂರಾರು ಜನ, ಅಲ್ಲಿಯ ಗಾಂಧೀಜಿಯ ಪ್ರಯೋಗವನ್ನು ಜೆ.ಡಿ. ಬಿರ್ಲಾ ತಮ್ಮ ಹಣದಲ್ಲಿ ನೋಡಿಕೊಳ್ಳುತ್ತಿದ್ದರು. ಗಾಂಧೀಜಿಯೇ ಹೇಳುವಂತೆ, ಆಶ್ರಮ ವಾಸಿಗಳು ಇನ್ನೂ ಸರಳವಾಗಿ ವಾಸಿಸಬಹುದಿತ್ತು, ಅದು ಆಗುತ್ತಿರಲಿಲ್ಲ.

ಏನಾಯಿತೆಂದರೆ, 1920 ರಲ್ಲಿ ಗಾಂಧಿ ರೈಲ್ವೆ ಸ್ಟೇಷನ್‌ನಲ್ಲಿ ಬಂದಿಳಿದಾಗ ಕುದುರೆಗಳನ್ನು ಹೂಡಿದ ಗಾಡಿಯಲ್ಲಿ ಮೆರವಣಿಗೆ ಹೊರಟರು. ಜೆ.ಡಿ. ಬಿರ್ಲಾ ಕುದುರೆಗಳನ್ನು ಉಗುಚಿ ತಾವೇ ತಮ್ಮ ಗೆಳೆಯರೊಂದಿಗೆ ಗಾಂಧೀಜಿಯ ಗಾಡಿ ಎಳೆದರು. ಗಾಂಧೀಜಿಯ ಅಗತ್ಯಗಳನ್ನೆಲ್ಲ ಪೂರೈಸತೊಡಗಿದರು. ದಿಲ್ಲಿಯ ಬಿರ್ಲಾ ಮಂದಿರವನ್ನು ಗಾಂಧೀಜಿಗೆ ನೀಡಿದರು. ಆಶ್ರಮ ಮತ್ತು ಗಾಂಧೀಜಿಗೆ ವರ್ಷಕ್ಕೆ ಐವತ್ತು ಸಾವಿರ ಖರ್ಚಾಗುತ್ತಿತ್ತು; ಅಷ್ಟೇ ಅಲ್ಲದೆ ಗಾಂಧೀಜಿಯ ಎಲ್ಲ ರಚನಾತ್ಮಕ ಕಾರ್ಯಗಳನ್ನು ಸೇರಿಸಿದರೆ ಕೋಟ್ಯಂತರ ರೂಪಾಯಿಯನ್ನು ಬಿರ್ಲಾ ಖರ್ಚು ಮಾಡಿದರು.



ಬಿರ್ಲಾ ವಿರುದ್ಧ ಕೂಡ ಸಮಯಬಿದ್ದರೆ ಪ್ರತಿಭಟಿಸಬಲ್ಲ ಛಾತಿ ಪಡೆದಿದ್ದ ಗಾಂಧಿ, ತಮ್ಮ ಮೂಲಭೂತ ಪರಿಶುದ್ಧತೆಯ ಬಗ್ಗೆ ವಿಶ್ವಾಸ ಹೊಂದಿದ್ದ ಗಾಂಧಿ ಬಿರ್ಲಾನ ಬಲೆಗೆ ಕಾಂಗ್ರೆಸ್ಸನ್ನು ಬೀಳಿಸಿದ್ದು ಹೀಗೆ.... ಇಡೀ ಭಾರತದಿಂದ ಲಕ್ಷಾಂತರ ಹಣ ಸಂಗ್ರಹಿಸುತ್ತಿದ್ದ ಗಾಂಧಿ ಬಿರ್ಲಾ ನೀಡಿದ ಚೆಕ್ ಪುಸ್ತಕವನ್ನು ಇಟ್ಟುಕೊಂಡು ಬಳಸಿದ್ದು ವಿಚಿತ್ರ. ಒಮ್ಮೆ ರವೀಂದ್ರನಾಥ ಠಾಕೂರ್ ದಿಲ್ಲಿಯಲ್ಲಿ ಬೆನಿಫಿಟ್ ನಾಟಕವೊಂದನ್ನು ಆಡುತ್ತಿದ್ದರು, ತಮ್ಮ ಭವಿಷ್ಯದ ಶಾಂತಿನಿಕೇತನ್‌ಗಾಗಿ. ಅವರಿಗೆ ಆಗಿನ್ನೂ ನೊಬೆಲ್ ಪಾರಿತೋಷಕ ಬಂದಿರಲಿಲ್ಲ. ಠಾಕೂರ್ ನಾಟಕ ಆಡುತ್ತಿದ್ದುದು ಗಾಂಧೀಜಿಯವರ ಗಮನಕ್ಕೆ ಬಂತು. ಅದರಿಂದೆಲ್ಲ ಶಾಂತಿನಿಕೇತನ ಆಗಲಾರದೆಂದು ಗಾಂಧೀಜಿ ಅರಿತಿದ್ದರು. ಠಾಕೂರರಿಗೆ ಹೇಳಿಕಳಿಸಿ ಒಂದು ಚೆಕ್ ನೀಡಿ ಮೊತ್ತ ಬರೆದುಕೊಳ್ಳಲು ಹೇಳಿದರು...

ಗುರುದೇವ ಮತ್ತು ಮಹಾತ್ಮ ಎಷ್ಟು ತಪ್ಪು ಮಾಡಬಲ್ಲವರಾಗಿದ್ದರು!




'ಬ್ರಹ್ಮಚರ್ಯವೇ'

'ಇದನ್ನು ನಾನು ನಿರೀಕ್ಷಿಸಿರಲಿಲ್ಲ- 'ಮನ್ಮಥನ ಆಗಮನ ಕುರಿತು' ಟಿಪ್ಪಣಿಗೆ ಲೆಕ್ಕವಿಲ್ಲದಷ್ಟು ಮೆಚ್ಚಿಗೆಯ ಕಾಗದಗಳು ಬಂದಿವೆ. ಅದು ಸೂಕ್ಷ್ಮ ವಿಷಯವಾದ್ದರಿಂದ ನಾನು ಎಚ್ಚರಿಕೆಯಿಂದ ಎಲ್ಲ ಕಾಗದ ಓದಿದೆ. ಎರಡು ಕಾಗದಗಳು ಮಾತ್ರ ಆಕ್ಷೇಪ ಎತ್ತಿವೆ. ಅದರಲ್ಲೊಬ್ಬರು, 'ಬ್ರಹ್ಮಚಾರಿಗಳಾದ ಎಚ್. ನರಸಿಂಹಯ್ಯನವರನ್ನು ನೋಡಿ, ಎಂಥ ಅದ್ಭುತ ವ್ಯಕ್ತಿ!' ಎಂದು ಬರೆದಿದ್ದಾರೆ. ಈ ಬಗ್ಗೆ ನಾನು ಕೆದಕುವುದಿಲ್ಲ. ಇನ್ನೊಬ್ಬರು ಸ್ವಾಮಿ ಶಿವಾನಂದರ 'ಬ್ರಹ್ಮಚರ್ಯವೇ ಜೀವನ' ಪುಸ್ತಕದ ಒಳ್ಳೆಯ ಅಂಶಗಳನ್ನೂ ತಿಳಿಸಬೇಕಾಗಿತ್ತು ಎಂದು ಉದ್ದ ಲೇಖನವನ್ನೇ ಬರೆದಿದ್ದಾರೆ. ಆ ಪುಸ್ತಕದಲ್ಲಿರಬಹುದಾದ ಒಳ್ಳೆಯದು ನನಗೆ ಹೊಳೆಯುತ್ತಿಲ್ಲ, ಅದರ ಕನ್ನಡವಂತೂ ಅಧ್ವಾನವಾಗಿದೆ.

ನನ್ನ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಬಿಜಾಪುರ ಜಿಲ್ಲೆಯ ಮಿತ್ರರೊಬ್ಬರು ಹೀಗೆ ಬರೆದಿದ್ದಾರೆ:

"ಸ್ವಾಮಿ ಶಿವಾನಂದರು ಹೇಗಿದ್ದರೋ ಗೊತ್ತಿಲ್ಲ. ಅವರ ಪುಸ್ತಕವನ್ನು ಮರಾಠಿಯಿಂದ ಕನ್ನಡಕ್ಕೆ ಅನುವಾದಿಸಿದ ಈಶ್ವರ ಸಣಕಲ್ಲರನ್ನು ನಾನು ನೋಡಿದ್ದೆ. ನಾನು ನೋಡಿದಾಗಲೆಲ್ಲ ಅವರು ಕನ್ನಡಕ ಹಾಕಿರುತ್ತಿದ್ದರು; ಅದರ ಜೊತೆಗೇ ಹುಟ್ಟಿದವರಂತೆ. ಅವರಿಗೆ ಮೂವರು ಹೆಂಡತಿಯರು. ಒಂಭತ್ತು ಮಕ್ಕಳು. ಅಕೌಂಟ್ಸ್ ಇಲಾಖೆಯಲ್ಲಿ ಕೆಲಸದಲ್ಲಿದ್ದ ಅವರು ಕವಿಗಳು ಕೂಡ. ಬ್ರಹ್ಮಚರ್ಯವೇ ಅವರ ಜೀವನವಾಗಿದ್ದಿದ್ದರೆ ಅದು ನನಗೆ ಗೊತ್ತಿಲ್ಲ."

ತೊಳೆಯುವ ಮುನ್ನ....




'ಭ್ರಷ್ಟತೆಯನ್ನು ಹೇಗೆ ಹೋಗಲಾಡಿಸುವುದು?' ಎಂಬ ಪ್ರಶ್ನೆ, ಅಧ್ಯಯನ ಶಿಬಿರದ ಮುಖ್ಯ ವಸ್ತು ಅದು; ತರುಣ ತರುಣಿಯರನ್ನು ಆಳವಾಗಿ ಚಿಂತಿಸಲು ಹಚ್ಚಿದ ಪ್ರಶ್ನೆ. ಇವತ್ತು ಭ್ರಷ್ಟತೆ ಸೂಕ್ಷ್ಮಾತಿಸೂಕ್ಷ್ಮ ರೂಪ ತಳೆದಿದೆ. ಸರ್ಕಾರಿ ಬಸ್‌ಗಳಿಗೆ ಚಾಪಿ ಕೊಳ್ಳುವ ಮಂತ್ರಿ, ತನ್ನ ಮತ ಮಾರಿಕೊಳ್ಳುವ ಮತದಾರ, ಡೊನೇಶನ್ ಕೊಟ್ಟು ಮಗನನ್ನು ಶಾಲೆಗೆ ಸೇರಿಸುವ ತಂದೆ, ಎಲ್ಲಾ ಕಾರ್ಪೊರೇಷನ್ ನಿಯಮಗಳಿಗೆ ಬದ್ಧರಾಗಿದ್ದರೂ ಲಂಚ ಕೊಡಬೇಕಾದ ಹೋಟೆಲ್ ಮಾಲೀಕ-ಈ ವಿಷಯಗಳನ್ನೇ ಯೋಚಿಸಿ. ಮೊನ್ನೆ ಒಬ್ಬ ಲಾರಿಯವನು ಹೇಳಿದ. ಹೋಗುತ್ತಿದ್ದ ಲಾರಿಯನ್ನು ಪೊಲೀಸಿನವನು ನಿಲ್ಲಿಸಿದ. ಡ್ರೈವರ್ ತನ್ನ ಪತ್ರಗಳನ್ನೆಲ್ಲ ತೋರಿಸಿದ. ಎಲ್ಲ ಸರಿ ಇದ್ದವು. ಪೊಲೀಸಿನವ ಇಪ್ಪತ್ತು ರೂಪಾಯಿ ಕೇಳಿದ. "ಎಲ್ಲ ಸರಿ ಇದೆಯಲ್ಲ, ಯಾಕೆ?" ಅಂದ ಡ್ರೈವರ್. "ಎಲ್ಲ ಸರಿ ಇದ್ದದ್ದಕ್ಕೆ ಇಪ್ಪತ್ತು ರೂಪಾಯಿ, ಇಲ್ಲದಿದ್ದರೆ ನೂರು ಕೊಡಬೇಕಾಗ್ತಿತ್ತು" ಅಂದ ಪೊಲೀಸು.

ಮೇಲಿನ ಚರ್ಚೆಯ ಸಮಯದಲ್ಲಿ ಒಬ್ಬ ತಲೆಕೆಟ್ಟು ಕೂಗಿದ, "ಲಂಚ, ಭ್ರಷ್ಟತೆ ವಿಚಾರ ಮಾತಾಡ್ಬೇಡಿ, ಅದನ್ನು ಯಾರೂ ನಿಲ್ಲಿಸೋದಕ್ಕೆ ಆಗಲ್ಲ."

ಆಗ ಭಾಗವಹಿಸಿದವರೊಬ್ಬರು ಹೇಳಿದರು, "ಇದು ಭ್ರಷ್ಟತೆಯನ್ನು ನಿಲ್ಲಿಸುವ ಮಾತಲ್ಲ, ನಾವು ವೈಯಕ್ತಿಕವಾಗಿ ಭ್ರಷ್ಟತೆ ಇಲ್ಲದೆ ಜೀವಿಸುವ ಚಾರಿತ್ಯ ಪಡೆಯಲು ಸಾಧ್ಯವೆ-ಎನ್ನುವ ಪ್ರಶ್ನೆ. ಇದು ಸಾಧ್ಯ ಎಂದು ನನ್ನ ಅಭಿಪ್ರಾಯ, ಇದು ಸಾಧ್ಯವಾದರೆ ಭ್ರಷ್ಟತೆಯನ್ನು ತೊಡೆದು ಹಾಕುವುದು ಸಾಧ್ಯ."

ಇದು ಸರಿಯಾದ ನಿಲುವು ಅನ್ನಿಸುತ್ತದೆ.

ಅಭೇದ್ಯ



ಈಗೀಗ ಈನಾಡು
ಕಾಡಾಗಲೊರಟಿದೆ
ಕಾರ್ಮೋಡಗಳೆ ಕವಿದಂತ ಕರಾಳ
ಅಂತಃಕರಣವು ಮುರುಟಿ
ಹಿಂಸೆ-ಕ್ರೌರ್ಯಗಳ ನೆಲೆಯು
ಪ್ರೀತಿಯ ಒರತೆಯ ಬತ್ತಿಸಿ;
ಭಯದ ನೆರಳುಗಳ ನಡುವೆ
ವಂಚನೆ ದಗಾಕೋರತೆಯಾ
ಅರಾಜಕತೆಯ ತಾಂಡವ, ಸದ್ದಿರದೆ ಸಾಗಿ....
ಮಧುರ ಬಾಂಧವ್ಯದ
ಅರ್ಥಗಳೆ ಕದಡಿರುವಲ್ಲಿ,

"ಸಿಡಿಮದ್ದು ಪಟಾಕಿಯಂತೆ
ಸ್ಫೋಟಿಸುವ ಪಾತಕಿಗಳ
ಹತ್ಯಾಕಾಂಡ ಹಾಡೇ ಹಗಲು"
ಮಾರಣ ಹೋಮವಾಗೆ
ಬದುಕು ತತ್ತರಿಸುವಲ್ಲಿ
ರಕ್ತದ ತರ್ಪಣದ ದಾಳಿಗೆ
ಹೊಸ ಸೂರ್ಯನ, ಬೆಳಗು
ಶುದ್ಧ ಮಾನವತೆಯ ಸ್ಪರ್ಶವಾಗೆ
ಅಂತಃಕರಣದ ಒರತೆಯು
ಜಗದೆದೆಯ ಬಗೆವಂತ
ಶೋಧನೆಯು
ಯುಗದ ಮೌಲ್ಯವಾಗದೆ?

■ ರಜಿಯಾ ಡಿ.ಬಿ.

ಹುಬ್ಬಳ್ಳಿ-ಧಾರವಾಡ

ಗೆದ್ದ ಅಮಲಿನಲ್ಲಿ ಚೆಡ್ಡಿಗಳು

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಚುನಾವಣೆ ಮುಗಿದು ಈಗಾಗಲೇ ಫಲಿತಾಂಶ ಹೊರಬಿದ್ದಿದ್ದರೂ ಚುನಾವಣಾ ದ್ವೇಷದ ಕಿಡಿ ಮಾತ್ರ ಇನ್ನೂ ಆರಿಲ್ಲ.

ಹುಬ್ಬಳ್ಳಿಯಲ್ಲಿ ಈ ಬಾರಿ ಮೀಸಲಾತಿ ವಿಂಗಡಣೆ ಯುದ್ಧ ಕಾರಣ ಜೆ.ಡಿ.ಯು.ನ ಮಾಜಿ ಕಾರ್ಪೊರೇಟರ್ ಲಕ್ಷ್ಮಣ ಉಪ್ಪಾರ ತನ್ನ ಪತ್ನಿ ಲಕ್ಷ್ಮಿ ಉಪ್ಪಾರರನ್ನೇ ನಿಲ್ಲಿಸಿ ಗೆಲ್ಲಿಸಿದ್ದಾರೆ. ಇದೇ ರೀತಿ ತಿಪ್ಪಣ್ಣ ಮಜ್ಜಿಗಿಯ ಪತ್ನಿ ಅಶ್ವಿನಿ ಮಜ್ಜಿಗಿ, ಎ.ಬಿ. ಪಾಟೀಲರ ಪತ್ನಿ ರತ್ನಾ ಪಾಟೀಲ, ವಿಜಯಾನಂದ ಹೊಸಕೋಟೆಯ ಹೆಂಡತಿ ವಿಜಯಲಕ್ಷ್ಮಿ ಕೂಡ ತಮ್ಮ ಗಂಡಂದಿರ ವರ್ಚಸ್ಸನ್ನು ಬಳಸಿಕೊಂಡು ಗೆಲುವು ಸಾಧಿಸಿದ್ದಾರೆ. ಇನ್ನು ಒಂದೇ ಕುಟುಂಬದ ಶಿವು ಹಿರೇಕೆರೂರ, ಸಂತೋಷ ಹಿರೇಕೆರೂರ, ಯಲ್ಲಮ್ಮ ಹಿರೇಕೆರೂರ ಜೆ.ಡಿ.ಎಸ್.ನಿಂದ ಆಯ್ಕೆಯಾಗಿದ್ದಾರೆ. ಮಾಜಿ ಮಹಾಪೌರ ಪ್ರಕಾಶ್ ಕ್ಯಾರಕಟ್ಟಿ, ಮಾಜಿ ಕಾರ್ಪೊರೇಟರ್ ಅಲ್ತಾಫ್ ಕಿತ್ತೂರ, ಲಕ್ಷ್ಮಣ ಉಪ್ಪಾರರಂಥವರು ಗೂಂಡಾಗಿರಿಯ ಮೂಲಕ ಚುನಾವಣೆ ಎದುರಿಸಿದವರೇ ಆಗಿದ್ದಾರೆ.

ಕರ್ನಾಟಕ ರಕ್ಷಣಾ ವೇದಿಕೆಯ ಅರವಿಂದ ಹಿಡಕಿ ಮಠ ಚುನಾವಣಾ ಮುನ್ನಾದಿನ ಮತದಾರರಿಗೆ ಮದ್ಯ ಹಂಚುವಾಗ ಜಿಲ್ಲಾಧಿಕಾರಿ ಶ್ರೀಕರ ಹಾಗೂ ಪಾಲಿಕೆ ಆಯುಕ್ತ ಅಜಯ್ ನಾಗಭೂಷಣರ ಕೈಗೆ ಸಿಕ್ಕಿಬಿದ್ದು ಜೈಲುಪಾಲಾಗಿದ್ದ. ಆದರೆ ಈತ ಜೈಲಿನಲ್ಲೇ ನಿಗೂಢ ರೀತಿಯಲ್ಲಿ ಸಾವಿಗೀಡಾದ.

ಲಕ್ಷ್ಮಣ ಉಪ್ಪಾರನ ರೌಡಿ ಗ್ಯಾಂಗ್ ಚುನಾವಣೆಯ ನಂತರ ಮುಸ್ಲಿಂ ಯುವಕನೊಬ್ಬನನ್ನು ತಲವಾರಿನಿಂದ ಥಳಿಸಿದೆ. ಬಿಎಸ್ಪಿ ಅಭ್ಯರ್ಥಿ ಶಿವಕುಮಾರ ಕೇಶ್ವಾಪುರದಲ್ಲಿ ಮಂಗನಂತೆ ಮತಗಟ್ಟೆಗೆ ನುಗ್ಗಿ ಮತಪೆಟ್ಟಿಗೆಯನ್ನೇ ಹೊಸಿದು ಪರಾರಿಯಾಗಲು ಯತ್ನಿಸಿ ಕಂಬಿ ಎಣಿಸುತ್ತಿದ್ದಾನೆ. ಮಾಜಿ ಮಹಾಪೌರ ಅನಿಲ ಪಾಟೀಲ ತಾನೇನು ಕಮ ಎಂಬಂತೆ ಮತದಾನದ ದಿನ ಪೊಲೀಸರ ಮೇಲೇ ಗೂಂಡಾಗಿರಿ ಮಾಡಲು ಹೋಗಿ ಅವಾಂತರ ಮಾಡಿಕೊಂಡಿದ್ದಾನೆ.

ಒಟ್ಟಾರೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಚುನಾವಣೆಯನ್ನು ಒಮ್ಮೆ ಅವಲೋಕಿಸಿ ನೋಡಿದರೆ 'ಬಿಹಾರಿ ಸಂಸ್ಕೃತಿ' ಎದ್ದುಕಾಣುತ್ತಿದೆ. ಎಲ್ಲೆಡೆ ವ್ಯಾಪಕ ಭ್ರಷ್ಟಾಚಾರ, ಗೂಂಡಾಗಿರಿಯೇ ಮೇಲುಗೈ ಸಾಧಿಸಿರುವುದರಿಂದ ಶೇ. 35ರಷ್ಟು ಅಕ್ರಮ ಮತದಾನವಾಗಿದೆ. ನ್ಯಾಯರೀತಿಯಲ್ಲಿ ಮತದಾನವಾಗಿರುವುದು ಕೇವಲ ಶೇ. 17ರಷ್ಟು ಮಾತ್ರ. ಚುನಾವಣೆಯಲ್ಲಿ ಹಣ, ಹೆಂಡದ ಹೊಳೆಯೇ ಹರಿದರೂ ಪೊಲೀಸರು ಮಾತ್ರ ಚಕಾರ ವೆತ್ತದೆ ತಣ್ಣಗೆ ಕುಳಿತಿದ್ದರು. ಎಲ್ಲ ರಾಜಕೀಯ ಪಕ್ಷಗಳೂ ಹೀಗೆ ಹಲವಾರು ತಂತ್ರ, ಕುತಂತ್ರಗಳನ್ನು ಬಳಸುತ್ತಿದ್ದರೆ ಹೊಸದಾಗಿ ಸೇರ್ಪಡೆಗೊಂಡಿರುವ ಎಸ್ಪಿ ಕೂಡಾ ಯಾರಿಗೂ ಕಡಿಮೆಯಿಲ್ಲದಂತೆ ಸರ್ವ ರೀತಿಯ ವಾಮ ಮಾರ್ಗವನ್ನು ಅನುಸರಿಸಿದರು.



ಗಣೇಶ್ ನಗರದ ಮೀನು ಮಾರುಕಟ್ಟೆ

30 ಸ್ಥಾನಗಳನ್ನು ಗೆದ್ದ ಬಿಜೆಪಿ ಮಹಾನಗರ ಪಾಲಿಕೆಯ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದ್ದಂತೇ ಮಂಗಗಳು ತಮ್ಮ ಮಂಗಾಟವನ್ನು ಶುರು ಮಾಡಿದ್ದಾವೆ. ಜಾತಿ ಜಗಳ ಹಚ್ಚಿ ಮುಸ್ಲಿಮರ ವಿರುದ್ಧ ಪಿತೂರಿ ಹೂಡುವ ಮೂಲಕ ತಮ್ಮ 'ಗುಜರಾತ್ ಪ್ರಯೋಗ'ವನ್ನು ಆರಂಭಿಸಿಯೇ ಬಿಟ್ಟಿದ್ದಾರೆ.



ಕಿಷ್ಕಿಂಧೆಯಂತಿರುವ ಮಾರುಕಟ್ಟೆ ರಸ್ತೆ

ಮೊದಲ ಸ್ಕೆಚ್

ಹುಬ್ಬಳ್ಳಿಯ ಗಣೇಶ್ ಪೇಟೆ ಈಗಾಗಲೇ ಕೋಮು ಗಲಭೆಗೆ ಹೆಸರುವಾಸಿಯಾಗಿದೆ. ಈ ಹಿಂದೂ ಮುಸ್ಲಿಂ ಗಲಭೆಗಳನ್ನು ಮತಗಳನ್ನಾಗಿ ಪರಿವರ್ತಿಸಿ ಚುನಾವಣೆಯಲ್ಲಿ ಗೆಲುವು ಸಾಧಿಸುವುದು ಇಲ್ಲಿನ ಚೆಡ್ಡಿ ನಾಯಕರುಗಳಿಗೆ ಕರಗತವಾಗಿಹೋಗಿದೆ. ವಾರ್ಡ್ ನಂ. 52ರಲ್ಲಿ ಈ ಬಾರಿಯೂ ಕಟ್ಟಾ ಆರ್‌ಎಸ್‌ಎಸ್ ಕಾರ್ಯಕರ್ತ, ಎಂಪಿ ಪ್ರಹ್ಲಾದ ಜೋಷಿಯ ಖಾಸಾ ಶಿಷ್ಯ ಸುಧೀರ ಸರಾಫ ಆಯ್ಕೆಯಾಗಿದ್ದಾನೆ. ಹೀಗೆ ಆಯ್ಕೆಯಾದ ಕೂಡಲೇ ಅತ್ಯಂತ ಹಳೆಯದಾದ ಮೀನಿನ ಮಾರ್ಕೆಟ್‌ಅನ್ನು ಸ್ಥಳಾಂತರಿಸಿ ಮುಸ್ಲಿಂ ವ್ಯಾಪಾರಸ್ಥರನ್ನು ಬೀದಿಗೆ ದೂಡುವ ಸ್ಕೆಚ್ ರೂಪಿಸಿದ್ದಾನೆ.

ಇಡೀ ಹುಬ್ಬಳ್ಳಿಯ ಜನ ಮೀನನ್ನು ಖರೀದಿಸಲು ಆಶ್ರಯಿಸಿದ್ದು ಇದೇ ಮಾರ್ಕೆಟ್ಟನ್ನು. ಮೊದಲಿಗೆ ಗಣೇಶ್ ಪೇಟೆಯ ಮಟನ್ ಮಾರ್ಕೆಟ್ ಎದುರೇ ಈ ಮೀನಿನ ವ್ಯಾಪಾರವೂ ನಡೆಯುತ್ತಿತ್ತು. ಅದಕ್ಕೆ ಸುಸಜ್ಜಿತ ಮಾರ್ಕೆಟ್ ನಿರ್ಮಿಸಿಕೊಡಬೇಕೆಂದು 1974ರಲ್ಲಿ ಮಹಾನಗರ ಪಾಲಿಕೆಯಲ್ಲಿ ಕಮ್ಯುನಿಸ್ಟ್ ಕಾರ್ಪೊರೇಟರ್ ದಿ. ಎ.ಜೆ. ಮುಧೋಳರು ಹೋರಾಟ ನಡೆಸಿದ್ದರಿಂದ ಗಣೇಶ್ ಪೇಟೆಯ ಮಹಾನಗರ ಪಾಲಿಕೆಯ ಜಾಗದಲ್ಲಿ 1975ರಲ್ಲಿ ಸುಸಜ್ಜಿತವಾಗಿ 40 ಮೀನಿನ ಮಾರಾಟ ಮಳಿಗೆಯನ್ನು ವಾರ್ಷಿಕ ಬಾಡಿಗೆ ಆಧಾರದಲ್ಲಿ ಒದಗಿಸಿದ್ದರು.

ಇವತ್ತು ಈ ಮೀನಿನ ವ್ಯಾಪಾರವನ್ನೇ ಅವಲಂಬಿಸಿ ಸರಿಸುಮಾರು 200 ಕುಟುಂಬಗಳು ಜೀವನ ನಡೆಸುತ್ತಿವೆ. ಈ ಮಾರುಕಟ್ಟೆಯಲ್ಲಿ ಪ್ರತಿದಿನ ಲಕ್ಷಾಂತರ ರೂಪಾಯಿಯ ವಹಿವಾಟೂ ನಡೆಯುತ್ತದೆ. ಆದರೆ ಸ್ಥಾಪನಾ ಸಮಯದಲ್ಲಿದ್ದ ಸವಲತ್ತುಗಳೆಲ್ಲ ಎಕ್ಕುಟ್ಟಿ ಹೋಗಿದೆ. ಇದಕ್ಕೆ ಮತ್ತೊಂದು ಕಾರಣವೆಂದರೆ ಅಂದು 40 ಜನರಷ್ಟಿದ್ದ ವ್ಯಾಪಾರಿಗಳು ಇಂದು ಬರೋಬ್ಬರಿ 200ಕ್ಕೂ ಹೆಚ್ಚು ಜನರಷ್ಟಾಗಿರುವುದು. ಸ್ಥಳದ ಅಭಾವದಿಂದ ಹಲವಾರು ವ್ಯಾಪಾರಿಗಳು ಮಾರುಕಟ್ಟೆಯ ಹೊರಗೇ ವ್ಯಾಪಾರ ನಡೆಸುತ್ತಿದ್ದಾರೆ. ಕಳೆದ ನಾಲ್ಕು ಅವಧಿಯಲ್ಲಿ ಇದೇ ಕ್ಷೇತ್ರದಿಂದ ಆಯ್ಕೆಯಾದ ಚೆಡ್ಡಿ ಕಾರ್ಪೊರೇಟರಾಗಲಿ, ಇನ್ನಿತರೇ ಕಾರ್ಪೊರೇಟರುಗಳಾಗಲಿ ಈ ಮಾರುಕಟ್ಟೆಯ ಅಭಿವೃದ್ಧಿಯ ಬಗ್ಗೆ ಕಿಂಚಿತ್ತೂ ಕಾಳಜಿ ವಹಿಸಿಲ್ಲ. ಯಾಕೆಂದರೆ ಇಲ್ಲಿ ವ್ಯಾಪಾರ ನಡೆಸುತ್ತಿರುವವರು ಈ ದೇಶದ ಅಲ್ಪಸಂಖ್ಯಾತರಾದ ಮುಸ್ಲಿಮರು.

ಮೂಲಭೂತ ಸೌಲಭ್ಯ ಕಲ್ಪಿಸಬೇಕಾದ ಪಾಲಿಕೆ ಮಾತ್ರ ಇಲ್ಲಿನ ಬಡ ವ್ಯಾಪಾರಸ್ಥರಿಂದ ವಾರ್ಷಿಕ ಬಾಡಿಗೆಯನ್ನು ಪಡೆದು ತೆಪ್ಪಗಾಗುತ್ತದೆ.

ಇನ್ನು ಇಲ್ಲಿನ ವ್ಯಾಪಾರಸ್ಥರ ತೊಂದರೆಯನ್ನು ನಿವಾರಿಸಿ ಉತ್ತಮ ವ್ಯವಸ್ಥೆಯನ್ನು ಕಲ್ಪಿಸಿಕೊಡುವ ಬದಲು ಇಲ್ಲಿನ ಹೊಸ ಕಾರ್ಪೊರೇಟರ್ ಸುಧೀರ ಸರಾಫ ಮೀನು ಮಾರುಕಟ್ಟೆಯನ್ನೇ ಎತ್ತಂಗಡಿ ಮಾಡುವ ಸನ್ನಾಹದಲ್ಲಿದ್ದಾನೆ. ಜೊತೆಗೆ ಮುಸ್ಲಿಂ ವ್ಯಾಪಾರಸ್ಥರ ಬುಡಕ್ಕೇ ಕೊಳ್ಳಿ ಇಡುವಂತಹ ಕೋಮುವಾದಿ ಅಜೆಂಡಾವನ್ನು ಪ್ರದರ್ಶಿಸುತ್ತಿದ್ದಾನೆ.

ಚೆಡ್ಡಿಗಳ ಹಾವಳಿಯಿಂದಾಗಿ ಹುಬ್ಬಳ್ಳಿಯ ಅಲ್ಪ ಸಂಖ್ಯಾತರಿಗೆ ಇನ್ನೇನು ಅನಾಹುತಗಳು ಕಾದಿದೆಯೋ.....

■ ವರದಿಗಾರ

'ನಾನು ಆಧುನಿಕನಾಗಿದ್ದರೂ ಈ ಮಂಗಗಳು ಹಾಗೇ ಇವೆಯಲ್ಲ'

ಹಲೋ ಗೌರಿ, ಗೊತ್ತಾಗಲಿಲ್ವಾ? ನಾನು ಜಾನಕೀರಮಣ ಶ್ರೀರಾಮಚಂದ್ರ.

ಅವತಾರ ಪುರುಷ, ದೇವರು, ತ್ರಿಮೂರ್ತಿಗಳಲ್ಲಿ ಒಬ್ಬನಾಗಿರುವ ಸಾಕ್ಷಾತ್ ಶ್ರೀಹರಿ ಇತ್ಯಾದಿಯಾಗಿ ಸಖತ್ ಪಾಪ್ಯೂಲರ್ ಆಗಿರುವ ನನ್ನ ಹೆಸರು ನನ್ನನ್ನು ತೀವ್ರವಾಗಿ ಟೀಕಿಸುತ್ತಿದ್ದ ಫೋಲಂಕಿ, ಪೆರಿಯಾರ್ ರಂತಹವರೇ ಪ್ರತಿದಿನ ಬಳಸುವಷ್ಟರ ಮಟ್ಟಿಗೆ (ಅವರ ಹೆಸರುಗಳಲ್ಲೇ ನಾನಿರುವ ಕಾರಣ) ಹಬ್ಬಿದೆ. ನಿಮ್ಮ ಆಧುನಿಕ ಕಾಲದ ಕಂಪ್ಯೂಟರ್‌ನಲ್ಲೂ RAM (Random Access Memory) ಇವೆ ಅಂತ ಕೇಳಿದ್ದೇನೆ. ಆದರೆ ಸ್ವಯಂ ಬ್ರಾಹ್ಮಣನಾಗಿಯೂ ಕೂಡ ಈ ರಾವಣೇಶ್ವರನ ಹೆಸರು ಸ್ವಲ್ಪವೂ ಖ್ಯಾತಿಗೊಳ್ಳಲಿಲ್ಲವೇಕೆ? ಎಂದು ಚಿಂತಿಸುತ್ತಿದ್ದಾಗ ಕರ್ನಾಟಕದಲ್ಲಿ ನಿಮ್ಮ ತಂದೆಯ ಹೆಸರಿನ ಮೂಲಕ ಈ 'ಲಂಕೇಶ್ವರ' ಜನರ ಬಾಯಲ್ಲಿ . ಹರಿದಾಡುತ್ತಿರುವುದು ನನಗೆ ಗೊತ್ತಾಯಿತು. ನನ್ನಲ್ಲಿ ಅತೀವ ಕುತೂಹಲ ತಂದಿಟ್ಟ ಕಾರಣ ಲಂಕೇಶನ ಹೆಸರಲ್ಲಿ ಬರುತ್ತಿದ್ದ ನಿನ್ನೀ ಪತ್ರಿಕೆಯನ್ನ ಗಮನಿಸುತ್ತಲೇ ಬಂದಿದ್ದೇನೆ. (ತೀವ್ರವಾಗಿ ವಿರೋಧಿಸುತ್ತಿರುವವರನ್ನೇ ಕ್ರಮೇಣ ಪ್ರೀತಿ ಮಾಡುವ ಸ್ಟಾಕ್‌ಹೋಮ್ ಸಿಂಡ್ರೋಂ ನನ್ನದು ಅಂತ ಬೇಕಾದರೆ ಕರಿ ಪರ್ವಾಗಿಲ್ಲ). ಜತೆಗೆ ಪತ್ರಿಕೆಯ ಅಭಿಮಾನಿಯೂ ಕೂಡ ಆಗಿದ್ದೇನೆ.

ತೆಗಳಿಕೆ / ಹೊಗಳಿಕೆ

ಅಭಿಮಾನಿ! ಆಶ್ಚರ್ಯ ಆಯ್ತಾ? ವಿಷ್ಯ ಹೇಳೋದು ಗೌರಿ, ಪರಿಸ್ಥಿತಿ ಆ ರೀತಿ ಇದೆ. ನನ್ನ ಹೆಸರು ಹೇಳಿಕೊಂಡು ಬೇಳೆ ಬೇಯಿಸಿಕೊಳ್ಳುವ ಖದೀಮರ ದಂಡೇ ಎಲ್ಲೆಡೆ ಇರುವಾಗ ನೇರವಾಗಿ ಪ್ರತಿಕ್ರಿಯಿಸುವ ನಿನ್ನಂತಹವರೇ ನನಗೆ ಹಿತವಾಗಿ ತೋರುತ್ತಿದ್ದಾರೆ. ರಾಮಭಕ್ತರ ಸೋಗು ಹಾಕಿ ನನ್ನ ಜನ್ಮಭೂಮಿ ವಿವಾದ ಹುಟ್ಟುಹಾಕಿ ಜನರನ್ನು ಎತ್ತಿಕಟ್ಟಿದ ಈ ಖೂಳರು ತಮ್ಮ ಕನಸಾದ 'ಕುರ್ಚಿ'ಯ ಗುರಿಯನ್ನು ಸಾಧಿಸಿಬಿಟ್ಟರೇ ವಿನಃ ಭರ್ತಿ 5 ವರ್ಷ ಆಳ್ವಿಕೆ ಮಾಡುವಾಗ ನನ್ನ ಬಗ್ಗೆ ಯೋಚಿಸಲೂ ಇವರಿಗೆ ಸಮಯವೇ ಸಿಕ್ಕಲಿಲ್ಲವಂತೆ ಪಾಪ. ಇದೀಗ ಮತ್ತೆ ಅಧಿಕಾರಕ್ಕೆ ಬರುವ ಸಲುವಾಗಿ ಹಾಗು ದಕ್ಷಿಣದಲ್ಲಿ ರಾಜ್ಯ ವಿಸ್ತರಿಸಲು ರಾಮಸೇತು ವಿವಾದವನ್ನು ಈ ಖೂಳರು ಕೈಗೆತ್ತಿಕೊಂಡಿದ್ದಾರೆ. ತಮ್ಮ ಆಡಳಿತ ಕಾಲದಲ್ಲೇ ಈ ಯೋಜನೆಯ ಆರಂಭಕ್ಕೆ ಹಸಿರು ನಿಶಾನೆ ತೋರಿಸಿದ್ದರು ಈ ಖೂಳರು. ಈ ವಿವಾದದ ಹಿಂದೆ ಮರಳಿ ಗದ್ದುಗೆಗೆ ಏರುವ ಕ್ರಿಮಿನಲ್ ಐಡಿಯಾ ಇದೆಯೇ ವಿನಃ ನನ್ನ ಬಗೆಗಿನ ಗೌರವವಂತೂ ಖಂಡಿತ ಅಲ್ಲ ಗೌರಿ.

ಕೆಲ ಸಾಮಾಜಿಕ ಕಾರಣಕ್ಕಾಗಿ ಸೀತೆಯನ್ನು ಮಾನಸಿಕವಾಗಿ ಹಿಂಸಿಸಿದ್ದಕ್ಕಾಗಲೀ ಅಥವಾ ಶಂಭೂಕನ ತಲೆ ಕಡಿದದ್ದಕ್ಕಾಗಲೀ ನನಗೆ ಖಂಡಿತವಾಗಿಯೂ ವಿಷಾದವಿಲ್ಲ. ಈ ಘಟನೆ ಜರುಗಿದ ಆ ಕಾಲದಲ್ಲಿ ವೈದಿಕ ಧರ್ಮದ ಪ್ರಾಬಲ್ಯವಿದ್ದಾಗ ಪತಿವ್ರತಾಧರ್ಮ, ವರ್ಣಾಶ್ರಮ ಇತ್ಯಾದಿಗಳಿಗೆ ಮಾನ್ಯತೆ ಇದ್ದಿತ್ತು, ಆ ಕಾಲಕ್ಕೆ ಆ ಜನರಿಗೆ ಅದೇ ಸರಿಯೆನಿಸಿತ್ತು, ಗ್ರೀಸ್‌ನ ಸಾಕ್ರೆಟಿಸ್‌ನ ಕಾಲದಲ್ಲಿ ಗುಲಾಮಗಿರಿಗೆ ಮಾನ್ಯತೆ ಇತ್ತಂತೆ. ಈಗ ಒಪ್ಪಿಕೊಳ್ಳಲು ಆಗುವುದೇ? ಹಾಗಾಗಿ ಆ ಕಾಲಕ್ಕೆ ತಕ್ಕಂತೆ ನಡೆದುಕೊಂಡೆ ಅಷ್ಟೇ. ಇದನ್ನು ಯಾಕೆ ಹೇಳಿದೆಯೆಂದರೆ ಕಾಲ ಬದಲಾದರೂ ಇನ್ನೂ ತ್ರೇತಾಯುಗದಲ್ಲೇ ಇದ್ದೇವಂತ ಈ ಖೂಳರು ವ್ಯವಹರಿಸುತ್ತಿರುವುದು ನನಗೆ ಬೇಸರ ತಂದಿದೆ. ಕರುಣಾನಿಧಿ ನನ್ನ ಬಗ್ಗೆ ತನಗೆ ಕಂಡಂತೆ ಹೇಳಿದ್ದಕ್ಕೆ ನಿಮ್ಮೂರಲ್ಲಿದ್ದ ಅವರ ಮಗಳ ಮನೆಗೆ ನನ್ನ ಭಕ್ತರ ಹೆಸರಿನಲ್ಲಿ ದಾಳಿ ಮಾಡಿದ ಪರಮ ಪಂಡರ ಬಗ್ಗೆಯಾಗಲೀ, ಶಂಬೂಕನ ಪ್ರಕರಣಕ್ಕೂ ಕಡೆಯಾಗಿ ಇದೇ ಕರುಣಾನಿಧಿಯ ತಲೆಯನ್ನು ಕತ್ತರಿಸಿ ತರಲು ಆಜ್ಞೆ ಹೊರಡಿಸಿದ ಉತ್ತರ ಭಾರತದ ಮೂರ್ಖನೊಬ್ಬನ ಬಗ್ಗೆಯಾಗಲೀ ನನಗೆ ಕನಿಕರವೆನಿಸುತ್ತದೆ.

ನನ್ನ ಜನ್ಮಭೂಮಿ ವಿವಾದವನ್ನು ಕೆಣಕಿ ಹಬ್ಬಿಸಿ ಮುಸ್ಲಿಂರೊಂದಿಗೆ ದೇಶವೇ ವೈರತ್ವ ಭಾವನೆ ಕಟ್ಟಿಕೊಳ್ಳುವಂತೆ ಮಾಡಿದ, ಇದೀಗ ರಾಮಸೇತುವಿನ ಹೆಸರಲ್ಲಿ ಹಿಂದೂ-ಹಿಂದೂಗಳ ನಡುವೆಯೇ ಒಡಕು ಹುಟ್ಟಿಸುತ್ತಿರುವ ಈ ಮಂಗಗಳ ಪಡೆಗೆ ನಿನ್ನಂತವರಿಂದಲೇ ತಕ್ಕ ಶಾಸ್ತಿಯಾಗಬೇಕಷ್ಟೇ.

ನಿನಗೆ ಖುಷಿ ಕೊಡುವ ಸಂಗತಿಯೆಂದರೆ ನಾನೀಗ ತ್ರೇತಾಯುಗದ ಅಗ್ನಿಪರೀಕ್ಷಾ ಪ್ರವೀಣ ರಾಮನಾಗಿರದೆ ಆಧುನಿಕ ವಾಗಿ ಬದಲಾಗಿದ್ದೇನೆ. ಅಂದರೆ ನೀನು ಪ್ರೀತಿಸುವ ಸೀತೆಯೂ ನನ್ನ ಜತೆಗಿದ್ದಾಳೆ.. ಇದೀಗ ನನ್ನ ಹೆಸರಿನಲ್ಲಿ ನಡೆಸಲಾಗುತ್ತಿರುವ ಗಲಾಟೆ-ಮಂಗಾಟಗಳನ್ನು ಕಂಡು ಅವಳು- "ಆವತ್ತು ಅವಮಾನದ ಸರಣಿಯನ್ನು ಸಹಿಸಲಾರದೇ ನಾನು ಭೂಮಿ ಬಾಯ್ಬಿಡಬಾರದೇ ಎಂದು ಪ್ರಾರ್ಥಿಸಿ ಬಚಾವಾದಂತೆ ನೀನಿನ್ನೂ ಭಾರತದಲ್ಲಿದ್ದಿದ್ದರೆ ಈ ಖೂಳರು ನಿನ್ನ ಹೆಸರಲ್ಲಿ ನಡೆಸುತ್ತಿರುವ ಘಟಿಂಗತನಕ್ಕೆ ಬೇಸತ್ತು ನನ್ನ ಹಾಗೇ ಪ್ರಾರ್ಥಿಸುತ್ತಿದ್ದೆ" ಎಂದಿದ್ದಳು. ಇದು ಖಂಡಿತಾ ಸತ್ಯ ಗೌರಿ.

ಸಮಯ ಸಿಕ್ಕಾಗ ಮತ್ತೆ ಪತ್ರ ಬರೆಯುತ್ತೇನೆ

-ಶ್ರೀರಾಮಚಂದ್ರ, ಬಿನ್ ದಶರಥ

(ರವಿ ಪುತ್ತೂರು, ದಕ್ಷಿಣ ಕನ್ನಡ)

ನಿಮ್ಮ ಪತ್ರಿಕೆಯಲ್ಲಿ "ಸನ್ಮಾನಿಸಲು ಬಂದ ಮಹಿಳೆಯರಿಗೆ ಯಡ್ಡಿಯಿಂದ ಅವಮಾನ" ಎಂಬ ಶೀರ್ಷಿಕೆ ಅಡಿಯಲ್ಲಿ ಪ್ರಕಟಿಸಿರುವ ವರದಿ ಓದಿ ಶಿವಶಕ್ತಿ ಮಹಿಳಾ ಸಂಘದ ಒಂದು ಸಾವಿರ ಸದಸ್ಯೆಯರಿಗೆ ಹಾಲು ಕುಡಿದಷ್ಟು ಸಂತೋಷವಾಯಿತು.



ಡೋಂಗಿ ಟೀವಿ ಚಾನೆಲ್‌ಗಳು ಮತ್ತು ದಿನಪತ್ರಿಕೆಗಳು, ಯಾರೂ ಸಹ ಬಿಜೆಪಿಗೆ ವಿರುದ್ಧವಾಗಿರುವ ಈ ವರದಿಯನ್ನು ಪ್ರಕಟಿಸಿರಲಿಲ್ಲ. ಆದರೆ ನೀವು ಯಾರ ಮುಲಾಜಿಗೂ ಒಳಗಾಗದೇ ನಿಷ್ಠೂರವಾದ ಸತ್ಯವನ್ನು ತಿಳಿಸಿ ನಿಮ್ಮ ತಂದೆ ಲಂಕೇಶ್‌ರವರ ಪರಂಪರೆಯನ್ನು ಮುಂದುವರಿಸಿದ್ದಿರಿ. ನಮಗೆ ನ್ಯಾಯ ದೊರಕಿಸಿಕೊಟ್ಟ ನೀವು ತಂದೆಯಂತೆ ಮಗಳು ಎಂಬುದನ್ನು ಮತ್ತೆ ಸಾಬೀತುಪಡಿಸಿದ್ದೀರಿ.

ಹಿಂದೂ ಧರ್ಮ, ಹಿಂದೂ ಸಂಸ್ಕೃತಿ, ಮಹಿಳೆಯರಿಗೆ ಅಪಾರ ಗೌರವ ನೀಡುತ್ತೇವೆ ಎನ್ನುವ ಬಿಜೆಪಿ ಜನರ ನಿಜವಾದ ಯೋಗ್ಯತೆ, ಮಹಿಳೆಯರ ಬಗ್ಗೆ ಅವರಿಗಿರುವ ಆಗೌರವನ್ನು ನಾವು ಪ್ರತ್ಯಕ್ಷವಾಗಿ ಅನುಭವಿಸಿದೆವು. ಇಂತಹವರಿಗೆ ಎಂದೂ ಅಧಿಕಾರ ನೀಡದಂತೆ ಎಲ್ಲಾ ಪ್ರಜ್ಞಾವಂತರೂ ಹೋರಾಟ ನಡೆಸಬೇಕಿದೆ.

ಕೊನೆಯದಾಗಿ ಒಂದು ಪ್ರಶ್ನೆ. ನಾವು ನಿಮ್ಮ ಕಚೇರಿಗೆ ಬಂದಾಗ ನಿಮ್ಮ ಟೇಬಲ್ ಮೇಲೆ ಸಿಗರೇಟ್ ಪ್ಯಾಕ್ ಇತ್ತಲ್ಲಾ, ಅದು ಯಾರದ್ದು? ನಮಗೆಲ್ಲಾ ಅದರ ಬಗ್ಗೆ ತಲೆ ಬಿಸಿಯಾಗಿದೆ. ದಯವಿಟ್ಟು ಉತ್ತರ ತಿಳಿಸಬೇಕು.

-ಎಚ್.ಆರ್. ಉಮಾದೇವಿ. ಅಧ್ಯಕ್ಷರು. ಶಿವಶಕ್ತಿ ಮಹಿಳಾ ಸಂಘ. ಬೆಂಗಳೂರು



ಮಾಲಾಶ್ರೀ ಹಾದಿಯಲ್ಲಿ ಪೂಜಾ

ಮಾಲಾಶ್ರೀಯ ಹಾದಿಯಲ್ಲಿ ಪೂಜಾ ಗಾಂಧಿ ಸಾಗುತ್ತಿದ್ದಾಳೆ. ಈ ಮಾತಿನ ಅರ್ಥ ಮಾಲಾಶ್ರೀ ತರಹ ಈಕೆಯೂ ಒನ್ ವುಮನ್ ಶೋ ಆಗುತ್ತಿದ್ದಾಳೆ ಎಂದಾಗಲೀ, ಆಕೆಯಂತೆಯೇ ಈಕೆಯೂ 'ನಾನು ನಾಯಿ, ಕತ್ತೆ ಜೊತೆಗೆ ನಟಿಸಿದರೂ ಸಿನಿಮಾ ಹಿಟ್ ಆಗುತ್ತದೆ' ಎಂಬ ಭ್ರಮೆಯಲ್ಲಿದ್ದಾಳೆಂದಾಗಲೀ ಅಲ್ಲ. ಬದಲಾಗಿ ಮಾಲಾಶ್ರೀ ತರಹ ಈಕೆಯೂ ಡುಮ್ಮಿಯಾಗುತ್ತಿದ್ದಾಳೆ ಎಂದೇ ಅರ್ಥ!

'ಮುಂಗಾರು ಮಳೆ'ಯಲ್ಲಿ ತೆಳ್ಳಗೆ ಬಳುಕುತ್ತಾ ಗಣೇಶ್‌ನೊಂದಿಗೆ ಸೂಕ್ತ ಜೋಡಿಯಾಗಿ ಕಾಣಿಸಿಕೊಂಡಿದ್ದ ಈಕೆ ಈಗ 'ಕೃಷ್ಣ' ಚಿತ್ರದಲ್ಲಿ ಅದೇ ಗಣೇಶ್ ಮುಂದೆ ದಪ್ಪನೆಯ 'ಆಂಟಿ' ತರಹ ಕಾಣಿಸುತ್ತಿದ್ದಾಳೆ. ಈ ಹಿಂದೆ ಮಾಲಾಶ್ರೀ ಕೂಡ ಇದ್ದಕ್ಕಿದ್ದಂತೆ ಡಬ್ಬಲ್ ಡೆಕರ್ ತರಹ ಊದಿಕೊಂಡಿದ್ದರು. ಮಾತ್ರವಲ್ಲ, ಅನಂತರ ಆಕೆ ಎಷ್ಟೇ ಪ್ರಯತ್ನಿಸಿದರೂ ಮತ್ತೆ ತೆಳ್ಳಗಾಗಲು ಸಾಧ್ಯವೇ ಆಗಲಿಲ್ಲ. ಸದ್ಯದಲ್ಲೇ ಪೂಜಾ ಗಾಂಧಿಗೂ ಇದೇ ಸಮಸ್ಯೆ ಎದುರಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎನ್ನುತ್ತಿದ್ದಾರೆ ಹಲವರು ಬೂದುಕುಂಬಳಕಾಯಿಯಂತೆ ಗುಂಡುಗುಂಡಾಗಿರುವ ಪೂಜಾಳನ್ನು ಕಂಡು.

ಹೀಗೆ 'ಇವತ್ತಿನ ಮಾಲಾಶ್ರೀ' ಆಗುತ್ತಿರುವ ಪೂಜಾ ಇನ್ನೊಂದು ರೀತಿಯಲ್ಲೂ ಆಕೆಯನ್ನು ಅನುಸರಿಸುತ್ತಿದ್ದಾರೆ. ಅದು ಹೇಗೆಂದರೆ ತನ್ನ ತಂಗಿಯನ್ನು ಚಿತ್ರರಂಗಕ್ಕೆ ಪರಿಚಯಿಸಿ ಆಕೆಯನ್ನು ಎಲ್ಲರೂ ಹಾಕಿಕೊಳ್ಳುವಂತೆ ಕೇಳಿಕೊಳ್ಳುವುದು.

ಮಾಲಾಶ್ರೀ ಕೂಡ ತಾನು ತುಂಬಾ ಊದಿಕೊಂಡ ಮೇಲೆ ತನ್ನ ತಂಗಿ ಶುಭಶ್ರೀಯನ್ನು ಕರೆತಂದು ಜಗ್ಗೇಶ್ ಎದುರು ನಾಯಕಿಯನ್ನಾಗಿಸಿದ್ದರು. ಹಾಗೆಯೇ ಶಿಲ್ಪಾ ಶೆಟ್ಟಿ ಕೂಡ ತನ್ನ ತಂಗಿಯನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಲು ಪ್ರಯತ್ನಿಸಿದ್ದಳು.

ಈಗ ಪೂಜಾ ಕೂಡ ದೂರದ ಪಂಜಾಬಿನಿಂದ ತನ್ನ ಸಹೋದರಿ ರಶ್ಮಿ ಗಾಂಧಿಯನ್ನು ಬೆಂಗಳೂರಿನ ಗಾಂಧಿನಗರಕ್ಕೆ ಕರೆತಂದಿದ್ದಾಳೆ. ಅಷ್ಟೇ ಅಲ್ಲ, 'ಬಲ್ಲಿ' ಚಿತ್ರಕ್ಕೆ ಸುಧಾಕರ ಬನ್ನಂಜೆ ತನ್ನ ಕಾಲ್‌ಶೀಟ್ ಕೇಳಿದ್ದರೆ, "ನಾನು ಸಿಕ್ಕಾಪಟ್ಟೆ ಬಿಜಿ ಇದ್ದೇನೆ. ನನ್ನ ಬದಲಿಗೆ ನನ್ನ ತಂಗಿಯನ್ನು ಯಾಕೆ ಹಾಕಿಕೊಳ್ಳಬಾರದು?" ಎಂದು ಕೇಳಿದ್ದಾಳೆ. 'ಅಕ್ಕನಾದರೇನು? ತಂಗಿಯಾದರೇನು? ನನ್ನ ಚಿತ್ರಕ್ಕೆ ಒಬ್ಬ ನಾಯಕಿ ಸಿಕ್ಕರೆ ಸಾಕು' ಎಂದುಕೊಂಡ ಬನ್ನಂಜೆ ಅದಕ್ಕೆ ಒಪ್ಪಿದ್ದಾರೆ.

ಹೀಗೆ ತನ್ನ ತಂಗಿಯ ಪಿಆರ್‌ಓ ತರಹ ಕೆಲಸ ಮಾಡುತ್ತಿರುವ ಪೂಜಾ ಗಾಂಧಿ ತಾನು ಮಾತ್ರ ಚಿನ್ನಾಭರಣಗಳ ಮಾಡೆಲ್ ಆಗಿ, ಅಂಗಡಿ ಮಳಿಗೆಗಳ ಉದ್ಘಾಟನೆಗಳಿಗೆ ಅತಿಥಿಯಾಗಿ ಬಿಜಿಯಾಗಿದ್ದಾಳೆ. ಹಾಗೆಯೇ ಆಕೆಯ ಕಾಲ್‌ಶೀಟ್ ಕೇಳಿದವರಿಗೆ ಅವಳ ತಂಗಿ ರಶ್ಮಿಯ ಕಾಲ್‌ಶೀಟ್ ಸಿಗುತ್ತಿದೆ.

ನಿನ್ನೆಮೊನ್ನೆಯ ತನಕ ಯಾವುದೇ ನಖರಾ ಮಾಡದೆ, ವಿವಾದಗಳಲ್ಲಿ ಸಿಲುಕದೆ ಇದ್ದ ಪೂಜಾ ಈಗ 'ಗಂಗಾ ಕಾವೇರಿ' ಚಿತ್ರಕ್ಕೆ ಸಂಬಂಧಪಟ್ಟಂತೆ ತಕರಾರುಗಳನ್ನು ಮಾಡುತ್ತಿದ್ದಾಳೆ. "ನಾನು ಅವರಿಗೆ ಕಾಲ್‌ಶೀಟನ್ನೇ ನೀಡಿರಲಿಲ್ಲ" ಎಂದು ಕ್ಯಾತೆ ತೆಗೆದಿದ್ದಾಳೆ. ಈಕೆ ಈ ಚಿತ್ರದ ಪಾತ್ರಕ್ಕಾಗಿ ಸ್ಕ್ರೀನ್ ಟೆಸ್ಟ್‌ನಲ್ಲಿ ಭಾಗವಹಿಸಿ, ತನ್ನ ಫೋಟೋಗಳನ್ನೂ ತೆಗೆಸಿದ್ದಳು. ಈಕೆ ಗ್ರೀನ್ ಸಿಗ್ನಲ್ ಕೊಟ್ಟ ನಂತರವೇ ನಿರ್ದೇಶಕ ವಿಷ್ಣುಕಾಂತ್ ಹಿಮಾಲಯಕ್ಕೆ ಶೂಟಿಂಗ್‌ಗೆ ಹೊರಡಲು ಪ್ಲಾನ್ ಹಾಕಿಕೊಂಡಿದ್ದರು. ಈಗ ಪೂಜಾ ಗಾಂಧಿಯ ಕೃಪೆಯಿಂದಾಗಿ ಇಡೀ ಅವರ ಯೋಜನೆಯೇ ಬದ್ದುಹೋಗಿದೆ.

ಇದು 'ಮುಂಗಾರು ಮಳೆ' ಚಿತ್ರದ ಮುಖಾಂತರ ಗಾಂಧಿನಗರಕ್ಕೆ ದಾಳಿಯಿಟ್ಟ ಪರಭಾಷಾ ನಟಿಯೊಬ್ಬಳ ಚಿಕ್ಕ ಪ್ರೊಫೈಲ್. ಇಷ್ಟಾದರೂ ಕನ್ನಡದ ನಟಿಯರಿಗಿಂತ ಈಕೆ ಹೆಚ್ಚು ಚಿತ್ರಗಳಲ್ಲಿ ನಟಿಸುತ್ತಿದ್ದಾಳೆ. ನಮ್ಮ ನಿರ್ಮಾಪಕರಿಗೆ ಪರಭಾಷಾ ನಾಯಕಿಯರ ಬಗ್ಗೆ ವ್ಯಾಮೋಹ ಎಷ್ಟಿದೆಯೆಂಬುದಕ್ಕೆ ಪೂಜಾ ಗಿಟ್ಟಿಸಿರುವ ಸಾಲುಸಾಲು ಅವಕಾಶಗಳೇ ಸಾಕ್ಷಿ.

ದ್ವಾರಕೀಶ್‌ಗಿಂತಲೂ ಕುಳ್ಳಗಿರುವ ಪೂಜಾ ಬೂದುಕುಂಬಳಕಾಯಿಯಂತಾಗಿರುವುದು, ತನ್ನ ತಂಗಿಯನ್ನು ಪ್ರೊಮೋಟ್ ಮಾಡುತ್ತಿರುವುದು, ಇಲ್ಲಸಲ್ಲದ ತಕರಾರುಗಳನ್ನೆತ್ತುತ್ತಿರುವುದು, ಈ ಎಲ್ಲ ಕಾರಣಗಳಿಂದ ಇವತ್ತು ಈಕೆಯ ಬಗ್ಗೆ ನಿರ್ದೇಶಕರು ಮತ್ತು ನಿರ್ಮಾಪಕರು ಉತ್ಸಾಹ ಕಳೆದುಕೊಳ್ಳುತ್ತಿದ್ದಾರೆ. ಇಷ್ಟೆಲ್ಲಾ ಆದರೂ ಈಕೆಯಲ್ಲಿ ಮೆಚ್ಚಬೇಕಾದ ಒಂದು ಅಂಶವಿದೆ. ಅದೇನೆಂದರೆ, ನಮ್ಮ ಕನ್ನಡದ ನಾಯಕಿಯರೂ ಇಂಗ್ಲಿಷ್‌ನಲ್ಲಿ ಮಾತನಾಡುವ ಹುಚ್ಚು ತೋರಿಸಿದರೆ ಪೂಜಾ ಈಗಾಗಲೇ ಆದಷ್ಟು ಸ್ಪಷ್ಟವಾಗಿ ಕನ್ನಡದಲ್ಲಿ ಮಾತನಾಡುವ ಪ್ರಯತ್ನ ಮತ್ತು ಜಾಣ್ಮೆ ಪ್ರದರ್ಶಿಸುತ್ತಿದ್ದಾಳೆ. ಈ ಒಂದು ವಿಷಯದಲ್ಲಿ ಈಕೆ ಕನ್ನಡದ ನಾಯಕಿಯರಿಗಿಂತ ಸಾವಿರಪಾಲು ಮೇಲು.



ರಾಧಿಕಾಳ ಅಣ್ಣನ ಪಾಲಾದ 'ಚಂಡ'

'ಅನಾಥರು' ಮತ್ತು 'ಈಶ್ವರ್' ಚಿತ್ರಗಳನ್ನು ದುಪ್ಪಟ್ಟು ಬೆಲೆ ಕೊಟ್ಟು ಖರೀದಿಸಿದ ನಟಿ ರಾಧಿಕಾಳ ಸಹೋದರ ಈಗ ಎಸ್. ನಾರಾಯಣ್ ನಿರ್ದೇಶನದ 'ಚಂಡ' ಚಿತ್ರದ ಇಡೀ ಕರ್ನಾಟಕದ ಹಕ್ಕನ್ನು ಮತ್ತೊಮ್ಮೆ ದುಪ್ಪಟ್ಟು ಬೆಲೆ ಕೊಟ್ಟು ಖರೀದಿಸಲು ರೆಡಿಯಾಗಿದ್ದಾನೆ. ಇದನ್ನು ನೋಡಿ ಬಹುತೇಕ ನಿರ್ಮಾಪಕರೆಲ್ಲರೂ ರಾಧಿಕಾ ಮನೆಗೆ ತಮ್ಮ ಚಿತ್ರದ ಡಬ್ಬಾ ಹೊತ್ತುಕೊಂಡು ಹೋಗುತ್ತಿದ್ದಾರೆ. ಆದರೆ ಹಿರಿಯ ನಿರ್ದೇಶಕ ಮತ್ತು ಆಕೆಯ ಗಾಡ್ ಫಾದರ್ ಆಗಿದ್ದ ಸಾಯಿಪ್ರಕಾಶ್‌ಗೇ ಮನೆಯೊಳಗೆ ಎಂಟ್ರಿ ನೀಡದ ಈ ಕರಾವಳಿಯ ಹುಡುಗಿ ಗಾಂಧಿನಗರದ ಜನಕ್ಕೆ ಪ್ರವೇಶ ನೀಡುತ್ತಾಳೆಯೇ?

ರಮ್ಯ: ಕೈ ಕೊಡುವುದು ಎಂದರೆ ಇದೇನಾ

'ಮುಂಗಾರು ಮಳೆ ಭಾಗ-2'ರಲ್ಲಿ ಗಣೇಶ್ ಜೊತೆ ನಟಿಸಬೇಕೆಂಬ ಆಸೆ ರಮ್ಯಳಿಗಿತ್ತು, ಆದರೆ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಈಕೆಯ ಆಸೆಗೆ ತಣ್ಣೀರೆರಚಿದರು. ಅದಕ್ಕಿಂತ ಮೊದಲು 'ಅರಮನೆ' ಚಿತ್ರದಲ್ಲಿ ಗಣೇಶ್ ಜೊತೆ ಆಕೆ ನಾಯಕಿಯಾಗಿ ನಟಿಸುತ್ತಾಳೆ ಎಂದು ನಿರ್ದೇಶಕ ನಾಗಶೇಖರ್ ಅನೌನ್ಸ್ ಮಾಡಿದ್ದರು. ಆದರೆ ಚಿತ್ರ ಆರಂಭವಾಗುವಹೊತ್ತಿಗೆ ಅದರಲ್ಲಿ ನಾಯಕಿ ರಮ್ಯಾಳ ಹೆಸರೇ ನಾಪತ್ತೆಯಾಗಿತ್ತು. ಈ ಬಾರಿ ರಮ್ಯಾ ಆ ಪಾತ್ರ ಬೇಡ ಅಂದಳೋ ಅಥವಾ ನಿರ್ದೇಶಕರೇ ಆಕೆಯನ್ನು ಬೇಡ ಅಂದರೋ ಗೊತ್ತಿಲ್ಲ.

ಈ ಮಧ್ಯೆ ಸುದೀಪ್ ಜೊತೆ 'ಕಾಮಣ್ಣನ ಮಕ್ಕಳು' ಚಿತ್ರದಲ್ಲಿ ನಟಿಸಲು ಆಕೆ ಆಯ್ಕೆಯಾಗಿದ್ದಳು. ಕೇವಲ ಒಂದೇ ಒಂದು ದಿನ ಆ ಚಿತ್ರದಲ್ಲಿ ನಟಿಸಿದ ರಮ್ಯಾ ಯಾರಿಗೂ ಹೇಳದೇ ಕೇಳದೇ ಜಾಗ ಖಾಲಿ ಮಾಡಿದ್ದಾಳೆ. ಈಗ ನಿರ್ದೇಶಕ ಗುರುದತ್ ರಮ್ಯಾ ಸ್ಥಾನಕ್ಕೆ ದೀಪು ಎಂಬ ಬೆಡಗಿಯನ್ನು ಕರೆತಂದಿದ್ದಾರೆ.

ಈ ಹಿಂದೆ ರಮ್ಯಾ ಇದೇ ರೀತಿ 'ಮಿಂಚಿನ ಓಟ' ಚಿತ್ರಕ್ಕೆ ತನ್ನ ಕಾಲ್‌ಶೀಟ್ ನೀಡಿದ್ದಳು. ಆ ಚಿತ್ರದಲ್ಲಿ ಮುರಳಿ ಮತ್ತು ವಿಜಯ ರಾಘವೇಂದ್ರ ಜೊತೆಗೆ ಆಕೆ ನಾಯಕಿಯಾಗಿ ನಟಿಸಬೇಕಿತ್ತು. ಈಗ ನೋಡಿದರೆ ಅಲ್ಲೂ ಕೂಡ 'ಸೈನೆಡ್' ಖ್ಯಾತಿಯ ನಿರ್ದೇಶಕ ರಮೇಶ್ ಹೊಸ ನಾಯಕಿಗಾಗಿ ತಲಾಷ್ ಮಾಡುತ್ತಿದ್ದಾರೆ. "ಯಾಕೋ ಏನೋ ಆಯಮ್ಮ ಸರಿಯಾಗಿ ರೆಸ್ಪಾನ್ಸ್ ಮಾಡುತ್ತಿಲ್ಲ" ಎಂದು ರಮೇಶ್ ರಮ್ಯಾಳನ್ನು ದೂರುತ್ತಿದ್ದಾರೆ. ಅಲ್ಲಿಗೆ 'ಮಿಂಚಿನ ಓಟ'ದಿಂದಲೂ ರಮ್ಯಾ ಔಟ್ ಎಂದಾಯಿತು.

ಆದರೂ ರಮ್ಯಾ ಎಂಬ ಬುದ್ಧಿವಂತ ನಟಿಯನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವಂತಿಲ್ಲ, ಆಕೆಯನ್ನು ಅರ್ಥಮಾಡಿಕೊಳ್ಳುವುದು ನೀರಿನಲ್ಲಿರುವ ಮೀನಿನ ಹೆಜ್ಜೆಯನ್ನು ಗುರುತಿಸುವುದಕ್ಕೆ ಸಮ. ಇದಕ್ಕೊಂದು ಉದಾಹರಣೆ ಇಲ್ಲಿದೆ.



ರಾಜೇಂದ್ರ ಸಿಂಗ್ ಬಾಬು ನಿರ್ದೇಶನದ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಚಿತ್ರಕ್ಕೆ ಆರಂಭದಲ್ಲಿ ಈಕೆಯನ್ನೇ ಮಾತನಾಡಿಸಿದ್ದರು. ಆದರೆ ರಮ್ಯಾ ಎಂದಿನಂತೆ ಏನೂ ಹೇಳದೆ ಸುಮ್ಮನಿದ್ದಳು. ಕೊನೆಗೆ ಬಾಬು ಚಿತ್ರವನ್ನು ಆರಂಭಿಸಿಯೇ ಬಿಟ್ಟರು. ಈ ಚಿತ್ರದ ಮುಹೂರ್ತದ ಫೋಟೋಗಳು ಪತ್ರಿಕೆಗಳಲ್ಲಿ ಪ್ರಕಟವಾದ ನಂತರ ಸ್ವತಃ ರಮ್ಯಾ ನಿರ್ದೇಶಕ ಬಾಬುಗೆ ಫೋನ್ ಮಾಡಿ "ನಾನು ಈ ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತೇನೆ, ಅವಕಾಶ ಕೊಡಿ" ಎಂದು ಕೇಳಿ ಎಲ್ಲರನ್ನು ಅಚ್ಚರಿಗೊಳಿಸಿದ್ದಳು.

ಹೀಗೆ ಒಪ್ಪಿಕೊಂಡ ಚಿತ್ರಕ್ಕೆ ಕೈಕೊಡುವುದು, ತಪ್ಪಿಸಿಕೊಂಡ ಚಿತ್ರವನ್ನು ಆಮೇಲೆ ಒಪ್ಪಿಕೊಳ್ಳುವುದು- ಇದು ರಮ್ಯಾಳ ಹೊಸ ಚಾಳಿ. ಈ ಚಾಳಿಯಿಂದ ನಾಯಕನಟರು ಮತ್ತು ನಿರ್ದೇಶಕರು ತತ್ತರಿಸಿಹೋಗಿದ್ದಾರೆ. ಆದರೆ ಈಕೆ ಊರಿಗೊಬ್ಬಳೇ ಪದ್ಮಾವತಿ ತಾನೇ? ಹೀಗಾಗಿ ಎಲ್ಲರೂ ಸಹಿಸಿಕೊಳ್ಳಬೇಕಾಗಿದೆ!!

RBP LANKESH, Kannada Weekly Price Rs. 10/-17-10-2007 POSTAL OFFICE OF BASAVANAGUDI RNI No.KARKAN2005/14648 Regd.No.KA/BG(S)/2036/2005

ಗುರುವಿನ ಹಳೇ ಗಿಮಿಕ್



ಪ್ರಕಾಶ್ ನಿರ್ದೇಶನದ 'ರಿಷಿ' ಚಿತ್ರದಲ್ಲಿ ಗುರುಕಿರಣ್ ಹೊಸ ಪ್ರಯೋಗವೊಂದನ್ನು ಮಾಡಿದ್ದರು. ಅದೆಂದರೆ ಶಿವರಾಜ್‌ಕುಮಾರ್‌ಗಾಗಿ ಪುನೀತ್ ರಾಜ್‌ಕುಮಾರ್‌ರಿಂದ ಹಾಡೊಂದನ್ನು ಹಾಡಿಸಿದ್ದು. ಆಗ ಅದು ಕ್ಲಿಕ್ ಆಗಿತ್ತು. ಈಗ ಅದೇ ಗಿಮಿಕ್‌ಅನ್ನು ನಿರ್ದೇಶಕ ಸಾಯಿಪ್ರಕಾಶ್‌ರವರ 'ಲವ ಕುಶ' ಚಿತ್ರದಲ್ಲಿ ರಿಪೀಟ್ ಮಾಡಿದ್ದಾರೆ ಗುರುಕಿರಣ್. ಮತ್ತೊಮ್ಮೆ ಅಣ್ಣ ಶಿವರಾಜ್‌ಕುಮಾರ್‌ಗಾಗಿ ಅಪ್ಪು ಹಿನ್ನೆಲೆ ಗಾಯಕರಾಗಿ ತನ್ನ ಕಂಠದಾನವನ್ನು ಮಾಡಿದ್ದಾರೆ.

ಗಿಮಿಕ್‌ಗಳು ಯಶಸ್ವಿಯಾಗುವುದೆ ಅವುಗಳ ಹೊಸತನದಿಂದ. ಆದರೆ ಅದನ್ನೇ ರಿಪೀಟ್ ಮಾಡಿದರೆ ಅವು ಫ್ಲಾಪ್ ಆಗುತ್ತವೆ. ಆದರೆ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಗಿಮಿಕ್ ರಾಜ ಗುರುಕಿರಣ್ ಬಳಿ ಹೊಸ ಯೋಜನೆಗಳು ಇಲ್ಲದಂತಾಗಿರುವುದರಿಂದ ಅದೇ ಹಳೇ ತಂತ್ರಗಳನ್ನು ಮತ್ತೆ ಉಪಯೋಗಿಸುತ್ತಿದ್ದಾರೆ ಎಂದಷ್ಟೇ ಹೇಳಬಹುದು.





ಭಾವನಾ. ಎಡವಟ್ಟೆದ್ದಿದ

ಭಾವನಾ ಮತ್ತೆ ಸುದ್ದಿಯಲ್ಲಿದ್ದಾಳೆ. ಈ ಬಾರಿ ತನ್ನ ಬೋಲ್ಡ್ ಸ್ಟೇಟ್‌ಮೆಂಟ್‌ನಿಂದ....

ಮುಂಬೈ ಚಿತ್ರರಂಗದಲ್ಲಿ ಅಥವಾ ಯಾವುದೇ ಚಿತ್ರರಂಗದಲ್ಲಿ ನಾಯಕಿಯರು ಮುಂದೆ ಬರಬೇಕಾದರೆ ನಿರ್ಮಾಪಕನ ಪ್ಯಾಕೇಜಿಗೆ ಸಮ್ಮತಿಸಬೇಕು. ಆತನ ಜೊತೆ ಸಹಕರಿಸಬೇಕು.... ಎಂಬಿತ್ಯಾದಿ ಆಕೆ ನೀಡಿದ ಹೇಳಿಕೆಗಳು ಪತ್ರಿಕೆಗಳಲ್ಲಿ ರಾರಾಜಿಸುತ್ತಿವೆ. ಈ ಬಗ್ಗೆ ಭಾವನಾಳನ್ನು ಸಂಪರ್ಕಿಸಿದರೆ, ಒಬ್ಬ ಕಲಾವಿದೆಯಾಗಿ ನಾನು ಹೀಗೆ ಮಾತನಾಡಲು ಹೇಗೆ ಸಾಧ್ಯ? ಇಷ್ಟಕ್ಕೂ ಹೀಗೆಲ್ಲ ಮಾತನಾಡಿ ಪ್ರಚಾರ ಗಿಟ್ಟಿಸುವ ದರ್ದು ನನಗಿಲ್ಲ. ನನ್ನ ಮಾತನ್ನು ಅಪಾರ್ಥವಾಗಿ ಬರೆದಿದ್ದಾರೆ ಎಂದು ಕೊರಗುತ್ತಿದ್ದಾಳೆ. ಆದರೆ ಪತ್ರಿಕೆಯವರು ಸುಮ್ಮ ಸುಮ್ಮನೆ ಯಾಕೆ ಆಕೆಯ ಬಗ್ಗೆ ಬರೆಯುತ್ತಾರೆ? ಎಂಬುದೂ ಇನ್ನೊಂದು ಅನುಮಾನಕ್ಕೆ ಎಡೆ ಮಾಡಿದೆ.


ಆಕೆಯ ಈ ಒಂದು ಹೇಳಿಕೆಯಿಂದಾಗಿ ಚಿತ್ರರಂಗದ ಅನೇಕ ನಿರ್ಮಾಪಕರು ಮತ್ತು ನಾಯಕಿಯರು ಈಗ ಭಾವನಾ ವಿರುದ್ಧ ತಿರುಗಿ ಬೀಳಲು ಅಣಿಯಾಗಿದ್ದಾರೆ. ಭಾವನಾ ಮಾತ್ರ 'ಇಂತಿ ನಿನ್ನ ಪ್ರೀತಿಯ' ಚಿತ್ರದ ಮೊದಲ ಶೆಡ್ಯೂಲ್ ಚಿತ್ರೀಕರಣ ಮುಗಿಸಿ ಮುಂಬೈಗೆ ಹಾರಿಹೋಗಿದ್ದಾಳೆ. ಹೀಗಾಗಿ ಆಕೆ ಮತ್ತೆ ಬರುವ ದಿನಾಂಕಕ್ಕಾಗಿ ಉದ್ಯಮದವರು ಕಾದುಕುಳಿತಿದ್ದಾರೆ.



ಗಣೇಶ್ ಎಂಬ ಗೆಲ್ಲುವ ಕುದುರೆ ಈಗ ಅಗ್ನಿಪರೀಕ್ಷೆ ಎದುರಿಸುತ್ತಿದೆ. ಸದ್ದಿಲ್ಲದೆ ಚಿತ್ರರಂಗದ ನಂ. 1 ಸ್ಥಾನಕ್ಕೆ ಲಗ್ಗೆ ಹಾಕಿರುವ ಗಣೇಶ್ ಈಗ ಎಲ್ಲ ನಿರ್ಮಾಪಕರ ಮತ್ತು ಹಂಚಿಕೆದಾರರ ಡಾರ್ಲಿಂಗ್. ಇದಕ್ಕೆ ಕಾರಣವೂ ಇದೆ. ಈತನಕ ಗಣೇಶ್ ನಾಯಕನಟನಾಗಿ ನಟಿಸಿರುವ ನಾಲ್ಕೂ ಚಿತ್ರಗಳು ಹಿಟ್ ಆಗಿವೆ.

ಈ ನಾಲ್ಕು ಚಿತ್ರಗಳ ಜಯಭೇರಿಯ ನಂತರ ಇದೀಗ ಕೃಷ್ಣ ತೆರೆಕಂಡಿದೆ. ಬಾಜಿದಾರರು ಎಂದಿನಂತೆ ಗಣೇಶ್ ಮೇಲೆ ಬಂಡವಾಳ ಹೂಡಿದ್ದಾರೆ. ಆದರೆ ಈ ಚಿತ್ರ ಗಣೇಶ್ ಪಾಲಿಗೆ ಅಂತಹ ಸಿಹಿ ಸುದ್ದಿಯನ್ನು ನೀಡಲಾರದು. ಕೃಷ್ಣ ಖಂಡಿತವಾಗಿಯೂ ಗೆಲ್ಲುವ ಕುದುರೆ ಗಣೇಶ್‌ಗೆ ಲಗಾಮು ಹಾಕಲಿದೆ ಎನ್ನುತ್ತಿದ್ದಾರೆ ಗಾಂಧಿನಗರದವರು. ಈ ಚಿತ್ರ ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದಲ್ಲಿ ಗಣೇಶ್ ತಾರಾ ಮೌಲ್ಯಕ್ಕೆ ಸಂಚಕಾರ ಒದಗಿದಂತಾಗುತ್ತದೆ. ಈ ಕಾರಣದಿಂದಲೇ ಇಡೀ ಗಾಂಧಿನಗರ ಕೃಷ್ಣನನ್ನು ಗಂಭೀರವಾಗಿ ಗಮನಿಸುತ್ತಿದೆ.

ಗಣೇಶನಿಗೆ ಕೃಷ್ಣ ಲಗಾಮು?



ಮಾನಸಿ 'ಮೊಗ್ಗಿನ ಮನಸ್ಸು'

ವಿಶ್ರಾಂತಿ ಪಡೆಯುತ್ತಿರುವ ಮೊಗ್ಗಿನ ಮನಸ್ಸು

'ಮೊಗ್ಗಿನ ಮನಸ್ಸು' ಚಿತ್ರ ನಾಲ್ವರು ನಾಯಕಿಯರೊಂದಿಗೆ ಬಹಳ ಬಿರುಸಾಗಿ ನಡೆಯುತ್ತಿತ್ತು. ಆದರೆ ಈಗ ಅನಿವಾರ್ಯ ಕಾರಣಗಳಿಂದ ಇದಕ್ಕೆ ತಡೆಯುಂಟಾಗಿದೆ. ಅಂದಹಾಗೆ ಈ ಚಿತ್ರದೊಂದಿಗೆ ರಾಧಿಕಾ ಪಂಡಿತ್, ಶುಭಾ ಪೂಂಜಾ, ಸಂಗೀತಾ ಶೆಟ್ಟಿ ಮತ್ತು ಮಾನಸಿ ಎಂಬ ನಾಲ್ವರು ನಾಯಕಿಯರು ಕನ್ನಡ ಚಿತ್ರರಂಗಕ್ಕೆ ಪರಿಚಿತರಾಗಲಿದ್ದಾರೆ. ವಿಶೇಷವೆಂದರೆ, ಈ ನಾಲ್ವರು ನಾಯಕಿಯರಲ್ಲಿ ಮೂವರು ಕಡಲ ತೀರದ ಕನ್ಯೆಯರು.

'ಮುಂಗಾರು ಮಳೆ' ನಂತರ 'ಮೊಗ್ಗಿನ ಮನಸ್ಸು' ಚಿತ್ರವನ್ನು ಹೊಸಬರಿಂದಲೇ ಮಾಡಿಸುತ್ತಿರುವ ನಿರ್ಮಾಪಕ ಕೃಷ್ಣಪ್ಪ ಆರಂಭದಲ್ಲಿ ಹೇಳಿದಂತೆ ಎಲ್ಲ ಹೊಸಬರಿಗೇ ಅವಕಾಶ ನೀಡಿದ್ದಾರೆ.

ಈ ಮಧ್ಯೆ ಈ ಚಿತ್ರದ ನಾಯಕನಾಗಿ ಆಯ್ಕೆಯಾಗಿದ್ದ ಸ್ಕಂದ ಎಂಬ ಮಲೆಯಾಳಿ ನಟ ಇದರಲ್ಲಿ ನಟಿಸುವುದು ಡೌಟ್‌ಫುಲ್ ಆಗಿದೆ. ಚಿತ್ರೀಕರಣಕ್ಕಿಂತ ಮೊದಲು ಅಪಘಾತಕ್ಕೊಳಗಾದ ಸ್ಕಂದ ಇನ್ನೂ ಚೇತರಿಸಿಕೊಳ್ಳದ ಕಾರಣ ಈಗ ಹೊಸ ನಾಯಕನ ತಲಾಷ್‌ನಲ್ಲಿದ್ದಾರೆ ನಿರ್ದೇಶಕ ಶಶಾಂಕ್. ನಾಯಕ ಸಿಕ್ಕಿದ ನಂತರ ಮತ್ತೆ ಚಿತ್ರೀಕರಣ ಮುಂದುವರಿಸಲಿರುವ 'ಮೊಗ್ಗಿನ ಮನಸ್ಸು' ತಂಡ ಈಗ ವಿಶ್ರಾಂತಿ ಪಡೆಯುತ್ತಿದೆ.

'ಚೆಲುವಿನ ಚಿತ್ತಾರ'ದ ನೂರನೇ ದಿನದ ಸಮಾರಂಭವನ್ನು ಅರಮನೆ ಆವರಣದಲ್ಲಿ ಅದ್ದೂರಿಯಾಗಿ ನಡೆಸಲು ನಿರ್ದೇಶಕ ಎಸ್. ನಾರಾಯಣ್ ರೆಡಿಯಾಗುತ್ತಿರುವಾಗಲೇ, ಈ ಚಿತ್ರದ ನಾಯಕಿ ಅಮೂಲ್ಯ ಇನ್ನು ಮುಂದೆ ತಾನು ಸಿನಿಮಾಗಳಲ್ಲಿ ನಟಿಸುವುದಿಲ್ಲ ಎಂದು ಘೋಷಿಸಿದ್ದಾಳೆ.

ಇದಕ್ಕೆ ಮುಖ್ಯ ಕಾರಣ ಒಂಭತ್ತನೇ ತರಗತಿ ಓದುತ್ತಿರುವ ಈ ಹುಡುಗಿಗೆ ಆ ಶಾಲೆಯ ಪ್ರಾಂಶುಪಾಲರು ರಜಾ ನಿರಾಕರಿಸಿರುವುದು. ಅದಕ್ಕಿಂತ ಮುಖ್ಯವಾಗಿ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನೇಸರ್ಗಿ ಈ ಪುಟ್ಟ ಹುಡುಗಿ ಅಮೂಲ್ಯಳನ್ನು ಗುಮ್ಮನಂತೆ ಕಾಡುತ್ತಿರುವುದು. ಈ ಎರಡು ಕಾರಣಗಳಿಂದಾಗಿ ಅಮೂಲ್ಯ ಹೆದರಿಹೋಗಿದ್ದಾಳೆ. ಹೀಗಾಗಿ ಒಂದೇ ಒಂದು ಸೂಪರ್ ಹಿಟ್ ಚಿತ್ರ ಕೊಟ್ಟ ಈ ಪುಟ್ಟ ಹುಡುಗಿ ಬಣ್ಣದ ಲೋಕಕ್ಕೆ ಗುಡ್ ಬೈ ಹೇಳಿ ಮತ್ತೊಮ್ಮೆ ಸ್ಕೂಲ್ ಬ್ಯಾಗನ್ನು ಹೆಗಲಿಗೇರಿಸಿಕೊಂಡಿದ್ದಾಳೆ.

ಎಲ್ಲಾ ಬಾಲ ಕಲಾವಿದರೂ ಹೀಗೇ ಮಾಡಿದರೆ ಮುಂದೊಂದು ದಿನ ಪ್ರಮೀಳಾ ನೇಸರ್ಗಿಗೆ ಪ್ರಚಾರವೇ ಇಲ್ಲದಂತಾಗಿಬಿಡುತ್ತದೆ.

ಸಿನಿಮಾ ಲೋಕಕ್ಕೆ ಟಾಟಾ ಹೇಳಿದ ಅಮೂಲ್ಯ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar...